6. ನಿಯಮ 69 ರ ಮೇರೆಗೆ ಚರ್ಚೆ

ವಿಷಯ :– ರಾಜ್ಯದಲ್ಲಿ ಉಂಟಾಗಿರುವ ಬರಗಾಲದ ಪರಿಸ್ಥಿತಿ ಬಗ್ಗೆ ಮುಂದುವರೆದ ಚರ್ಚೆ :

ಅಧ್ಯಕ್ಷರು :– ಈಗ ನಿಯಮ 69 ಅನ್ನು ತೆಗೆದುಕೊಳ್ಳೋಣ.

ಶ್ರೀ ಎನ್. ಧರ್ಮಸಿಂಗ್ (ಮಾನ್ಯ ವಿರೋಧ ಪಕ್ಷದ ನಾಯಕರು) :– ಮಾನ್ಯ ಅಧ್ಯಕ್ಷರೆ,......

ಅಧ್ಯಕ್ಷರು :– ಮಾನ್ಯ ವೈಜನಾಥ್ ಪಾಟೀಲರೇ, ಮಾನ್ಯ ಗೃಹ ಮಂತ್ರಿಗಳು ಬರಲಿ, ಅವರು ಬಂದ ಮೇಲೆ ತಾವು ಪ್ರಸ್ತಾಪ ಮಾಡಿ.

ಶ್ರೀ ಎನ್. ಧರ್ಮಸಿಂಗ್ :– ಮಾನ್ಯ ಅಧ್ಯಕ್ಷರೆ, ಏಕೋ ನಮ್ಮ ಮೇಲೆ ಕೋಪ ತೋರಿಸುತ್ತಿದ್ದೀರಿ. ನಾವೇನೋ ಸಿಕ್ಕಾಪಟ್ಟೆ ಮಾಡಿ, ಏನಾದರೂ ಕೂಡ ಕಾರ್ಯಕಲಾಪಗಳಿಗೆ ಅಡ್ಡಿ ಮಾಡುವುದಕ್ಕೆ ನಮಗೆ ಮನಸ್ಸು ಇಲ್ಲ. ನಾವೇನು ಹೇಳಿದ್ದೇವೆಂದರೆ, ಬಿಲ್‌ಗಳನ್ನು ತದನಂತರ ತೆಗೆದುಕೊಳ್ಳಿ ಎಂದು. ಸದನ ಪ್ರಾರಂಭವಾದ ಮೇಲೆ, ಎರಡು ಗಂಟೆಗಳ ಕಾಲ ಚರ್ಚೆಗೆ ಅವಕಾಶ ಕೊಡುತ್ತೇನೆಂದು ತಾವೇ ಹೇಳಿದಿರಿ. ನಂತರ ತಾವು ಬಿಲ್‌ಗಳನ್ನು ತರಾತುರಿಯಲ್ಲಿ ತೆಗೆದುಕೊಂಡಿರಿ. ಹೌಸ್ ಆರ್ಡರ್‌ನಲ್ಲಿರಲಿಲ್ಲ. ನಮಗೆ ಬಿಲ್‌ಗಳ ಬಗ್ಗೆ ಚರ್ಚೆ ಮಾಡುವ ಅವಕಾಶ ಸಹ ಸಿಗಲಿಲ್ಲ. ಆ ಸದನದಲ್ಲಿ ಏನೂ ಕೆಲಸವಿಲ್ಲವೆಂದು ಹೇಳಿ ಬಿಲ್ ಪಾಸ್ ಮಾಡಿ ಕಳುಹಿಸಿದ್ದೀರಿ. ಅದು ಯಾವಾಗಲೂ ಆಗಬಾರದು. ನಾವು ಎಷ್ಟೋ ವಿಷಯಗಳ ಬಗ್ಗೆ ತಮಗೆ ಸಹಕಾರ ಕೊಡುತ್ತಿದ್ದೇವೆ. ನಿನ್ನೆ ಕೂಡ ವಿಧೇಯಕಗಳನ್ನು ಮಂಡಿಸುವುದಕ್ಕೆ ಮತ್ತು ಪಾಸ್ ಮಾಡಿಕೊಡುವುದಕ್ಕೆ ನಾನು ನಿನ್ನೆ 8 : 00 ಗಂಟೆವರೆಗೂ ಕುಳಿತು ತಮಗೆ ಸಹಕಾರ ಮಾಡಿದ್ದೇವೆ. ಆದರೆ ಕೊನೆಯದಾಗಿ ತಾವು ಅನುಮತಿಯನ್ನು ಕೊಟ್ಟಿದ್ದೀರಿ.

ತಾವು ಅನುಮತಿಯನ್ನು ಕೊಟ್ಟ ಮೇಲೆ ಇವತ್ತಿನ ದಿವಸ ನಾವು ರಾಜಕೀಯವಾಗಿ ಹೇಳುತ್ತಿಲ್ಲ. ಕೇವಲ ಪಕ್ಷದ ದೃಷ್ಟಿಯಿಂದ ಹೇಳುತ್ತಿಲ್ಲ. ಇಡೀ ಸದನದಲ್ಲಿರತಕ್ಕಂತಹ 225 ಜನ ಸದಸ್ಯರು ಏನಿದ್ದಾರೆ ಅವರೆಲ್ಲರೂ ಕೂಡ ಅವರವರ ಮತ ಕ್ಷೇತ್ರಕ್ಕೆ ನಾಳೆ ಹೋಗಬೇಕಾಗುತ್ತದೆ. ಬಹಳ ಭೀಕರವಾದಂತಹ ಬರಗಾಲ ಬಂದಿದೆ. ಮೇವಿನ ಕೊರತೆ ಸಹ ಇದೆ. ಇವೆಲ್ಲಾ ಆದ ಮೇಲೆ ಶ್ರೀಮಾನ್

ಜಗದೀಶ್ ಶೆಟ್ಟರ್‌ರವರು, ನಾನು ಮಲ್ಲಿಕಾರ್ಜುನ ಖರ್ಗೆಯುವರು, ಯಡಿಯೂರಪ್ಪನವರು ಮತ್ತು ಬಂಡೆಪ್ಪ ಕಾಶಂಪುರ್‌ರವರು, ಕೇಂದ್ರದ ಗೃಹ ಮಂತ್ರಿಗಳು ಬಂದಿದ್ದರು, ಆಗಲೂ ಸಹ ಎಲ್ಲಾ ಮಾತನಾಡಿದೆವು. ಕೇಂದ್ರ ಹಣ ಕೊಡುತ್ತಿಲ್ಲವೆಂದು ಹೇಳುತ್ತಾರೆ. ತಾರತಮ್ಯದ ಮೇಲೆ 250 ಕೋಟಿ CRF ನಲ್ಲಿ ಕೊಟ್ಟಂಥದ್ದು ಇದೆ. ಒಟ್ಟಾರೆ ಮೊನ್ನೆ ಕುಡಿಯುವ ನೀರಿನ ಬಗ್ಗೆ 50 ಕೋಟಿ ರೂಪಾಯಿಗಳು ಎಂದು ಹೇಳಿದ್ದಾರೆ. ಇವತ್ತು ಜೆ.ಡಿ.ಎಸ್. ಮತ್ತು ಬಿ.ಜೆ.ಪಿ ಪಕ್ಷಗಳು ಸಂಯುಕ್ತ ಶಾಸಕಾಂಗ ಪಕ್ಷದ ಸಭೆಯಲ್ಲಿ ಸಹ ಮಾತನಾಡಿದ್ದಾರೆ. ನಿಷ್ಪಕ್ಷಪಾತವಾಗಿ ಅವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡಿದ್ದಾರೆ. ಇವತ್ತು ಪ್ರತಿಯೊಂದು ಕ್ಷೇತ್ರದಲ್ಲೂ Taskforce ಶಾಸಕರ ಅಧ್ಯಕ್ಷತೆಯಲ್ಲಿ ಮಾಡಬೇಕಾಗಿತ್ತು, ಇದುವರೆಗೂ ಮಾಡಿಲ್ಲ. ಅಲ್ಲಿರತಕ್ಕಂಥ ಎಲ್ಲಾ ಅಧಿಕಾರಿಗಳಿಗೆ ತಾವು ಆದೇಶ ಕೊಡಬೇಕಾಗಿದೆ, war footing ನಲ್ಲಿ ಕೆಲಸ ಆಗಬೇಕಾಗಿದೆ. ತಮಗೆ ಗೊತ್ತಿದೆ.

1972 ನೇ ಇಸವಿಯಲ್ಲಿ ನಾನು ಶಾಸಕನಾಗಿ ಬಂದಾಗ ದಿವಂಗತ ದೇವರಾಜ್ ಅರಸ್‌ರವರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಗುಲ್ಬರ್ಗಾ ಒಂದೇ ಜಿಲ್ಲೆಯಲ್ಲಿ ಗಂಭೀರವಾದ ಬರ ಪರಿಸ್ಥಿತಿ ಇತ್ತು. ಆಗ ಶ್ರೀಮಾನ್ ಎಂ.ವೈ ಘೋರ್ಪಡೆಯವರು ನಮ್ಮ ರಾಜ್ಯದ ಹಣಕಾಸಿನ ಸಚಿವರಾಗಿದ್ದರು. ಅವರನ್ನೇ ಅಲ್ಲಿಗೆ depute ಮಾಡಿದ್ದರು. ಅವರು ವ್ಯವಹಾರಿಕವಾಗಿ ದೈನಂದಿನ ಕಾರ್ಯಕ್ರಮದಲ್ಲಿ ಏನೇನು ಅಡ್ಡಿ ಆತಂಕಗಳು ಬರುತ್ತಿದೆ ಅವುಗಳಿಗೆ ಅಲ್ಲಿಯೇ ಅವರ ಆದ್ಯತೆಯನ್ನು ಕೊಡುತ್ತಿದ್ದರು. ಇವತ್ತು ನಾವು ಕೇಳತಕ್ಕಂಥಾದ್ದು, ತಾವು ಹೇಳತಕ್ಕಂಥಾದ್ದು ಆಗಬಾರದು. ನಾವು ಇಲ್ಲಿ ಏನು ಜವಾಬ್ದಾರಿಯುತವಾಗಿ ಹೇಳುತ್ತೇವೆ. ನಾವು ಇದರಲ್ಲಿ ರಾಜಕಾರಣ ಬೆರೆಸುತ್ತಿಲ್ಲ. ರಾಜಕೀಯವಾಗಿ ಮಾತನಾಡುತ್ತಿಲ್ಲ. ಇವತ್ತು ರಾಜ್ಯದಲ್ಲಿ ರೈತರು ಈ ಪರಿಸ್ಥಿತಿಯಿಂದ ತತ್ತರಿಸಿ ಹೋಗಿದ್ದಾರೆ. ಒಂದು ಕಡೆ ಕಬ್ಬು ಬೆಳೆಗಾರರ ಬಗ್ಗೆ, ರೈತರ ಆತ್ಮಹತ್ಯೆ, ಅದಾದ ಮೇಲೆ ಒಂದು ಪಾಲಿಸಿ ಆಗಿದೆಯೆಂದು ಮಾನ್ಯ ಪ್ರಕಾಶ್ ಖಂಡ್ರೆಯವರು ಹೇಳಿದ್ದಾರೆ. ಇದೆಲ್ಲಾ ಆದ ಮೇಲೆ ನಿನ್ನೆ ಕೂಡ ಒಂದು ಸಭೆಯಾಗಿ ಅವರನ್ನು ಕರೆಸುತ್ತೇವೆ. ಎನ್ನತಕ್ಕಂತಹ ರೀತಿಯಲ್ಲಿ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅನುಷ್ಠಾನಕ್ಕೆ ಬರತಕ್ಕಂತಹ ರೀತಿಯಲ್ಲಿ, ಯಾವ ರೀತಿಯಾಗಿ ಆಗುತ್ತದೆ ಎನ್ನತಕ್ಕಂಥದನ್ನು ಕೂಡ ನಾವು ಕಾದು ನೋಡಬೇಕಾಗುತ್ತದೆ.

ಇವತ್ತು ಎಲ್ಲಾ ಕಡೆಗೆ ಕುಡಿಯುವ ನೀರಿನ ಬಗ್ಗೆ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದಂತಹ ಹಣ ಬಿಡುಗಡೆ ಮಾಡಿದ್ದಾರೆ. ಅಷ್ಟು ಹಣ ಬಿಡುಗಡೆ ಮಾಡಿದರೆ

ಬಹಳಷ್ಟು ಪರಿಣಾಮಕಾರಿಯಾಗಿ ಕೆಲಸ ನಡೆಯುತ್ತಿದೆ. ಈ ಒಂದು ಬರಗಾಲ ಪರಿಸ್ಥಿತಿ ನಿರ್ವಹಣೆಗೆ ಅನುಭವಿ, ನಮ್ಮ ಸಂಸದೀಯ ವ್ಯವಹಾರಗಳ ಸಚಿವರು, ಗೃಹ ಸಚಿವರಾದ ಶ್ರೀ ಎಂ.ಪಿ. ಪ್ರಕಾಶ್‌ರವರಿಗೆ ವಹಿಸಿದ್ದಾರೆ. ಮಾನ್ಯ ಪ್ರಕಾಶ್‌ರವರು ಕೂಡ ಇದರ ಬಗ್ಗೆ ಒಂದು ಸಭೆಯನ್ನು ಮಾಡಿದ್ದಾರೆ. ಸಭೆ ಮಾಡಿ ಇನ್ನೂ 263 ಕೋಟಿ ರೂ.ಗಳು ಇದೆ. PD Account ನಲ್ಲಿದೆ, ಅದು ಜಿಲ್ಲಾಧಿಕಾರಿಗಳ ಬಳಿ ಇದೆ ಎಂದು ಹೇಳಿದ್ದಾರೆ. ಇವತ್ತು ಸಂಕಷ್ಟಕ್ಕೆ ಒಳಗಾಗಿರತಕ್ಕಂಥ ಜನರಿಗೆ ಸಹಾಯ ಮಾಡತಕ್ಕಂತಹ ರೀತಿಯಲ್ಲಿ ನಾವು ಹಣ ಕೊಟ್ಟಿದ್ದೇವೆ. ಇವತ್ತು ಎಲ್ಲಾ ವಿಚಾರಗಳನ್ನು ನೋಡಿದರೆ practical, ಆಗಿ ವ್ಯವಹಾರಿಕವಾಗಿ, ಕೆಲಸ ಕಾರ್ಯಗಳು ನಡೆಯುತ್ತಿಲ್ಲ. ಇವತ್ತು ಕೇಂದ್ರ ಸರ್ಕಾರದ Employment Guarantee Scheme ಬಗ್ಗೆ ಮೊನ್ನೆ ಕೂಡ ಬಜೆಟ್ ಮೇಲೆ ಮಾತನಾಡುವಾಗ ಹೇಳಿದ್ದೇನೆ. 1970 ರಲ್ಲಿ ಇಂದಿರಾಗಾಂಧಿಯರು ಗರೀಬಿ ಹಠಾವೋ ಅಂತ ಯಾವ ರೀತಿ ಸ್ಲೋಗನ್ ಕೊಟ್ಟಿದ್ದರೋ, ಎಷ್ಟು ಜನದ ಗರೀಬಿ ಹೋಯಿತು ಎಂಬುದು ಚರ್ಚೆಯ ವಿಷಯ, ಬಡವರ ಮನಸ್ಸಿನಲ್ಲಿ ವಿಶ್ವಾಸ ಮೂಡಿಸುವ ಕೆಲಸ ಆಯಿತು.

ಇವತ್ತೂ UPA Chairman ಶ್ರೀಮತಿ ಸೋನಿಯಾ ಗಾಂಧಿಯವರು ನೌಕರಿ ಖಾತರಿ ಯೋಜನೆ ಅಂತ, ರಾಜ್ಯದ ಇನ್ನೂ 4–5 ಜಿಲ್ಲೆಗಳಿಗೆ ಕೂಡ ವಿಸ್ತರಿಸಿದ್ದಾರೆ. ಈ ಯೋಜನೆಯಲ್ಲಿ ಪ್ರತಿ ಕೂಲಿಕಾರನಿಗೆ ದಿನಕ್ಕೆ 68 ರೂ ಕೊಡುವುದು, ಇದರಲ್ಲಿ 160 ಕೋಟಿ ಇದ್ದರೂ ನೀವು ಖರ್ಚು ಮಾಡಿರುವುದು 108 ಕೋಟಿ. ಎಲ್ಲ ಕಡೆಗೂ ಎಷ್ಟೆಷ್ಟು ಹಣ ಖರ್ಚು ಮಾಡಿದ್ದೀರಿ? ಯುಟಿಲೈಜೇಶನ್ ಸರ್ಟಿಫಿಕೇಟ್ ಕೊಟ್ಟ ಮೇಲೆ ಕೇಂದ್ರದಿಂದ ಇನ್ನೂ ಹೆಚ್ಚಿನ ಹಣ ಬರುತ್ತದೆ. ಕೇಂದ್ರದ RDPR ಸಚಿವ ರಘುವಂಶ ಪ್ರಸಾದ್ ಹೇಳಿದ್ದಾರೆ: ಕರ್ನಾಟಕ 4443 ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಿದೆ. ಹಣವನ್ನೂ ಬಿಡುಗಡೆ ಮಾಡಿದ್ದಾರೆ. ಬರಗಾಲ ಬರುವ ಮುನ್ನವೇ ಬೆಳಗಾವಿ ಅಧಿವೇಶನದಲ್ಲೇ ನಾವು ಹೇಳಿದ್ದೇವೆ. You have to prepare action plan ಅಂತ. ಅದು ಆಗಿಲ್ಲ. 9 ನೇ ತಾರೀಖು ಜಿಲ್ಲಾಧಿಕಾರಿಗಳ ಮತ್ತು ಜಿಲ್ಲಾ ಪಂಚಾಯಿತಿ ಅಧಿಕಾರಿಗಳ ಸಭೆ ನಡೆಸಿ, ಯಾರ್ಯಾರು ಕೆಲಸ ಮಾಡುವುದಿಲ್ಲ, ಅಧಿಕಾರಿಗಳು ಹಿಂದೇಟು ಹಾಕುತ್ತಿದ್ದಾರೆ ಎಂಬ ಮಾತನ್ನೂ ಹೇಳಿದ್ದಾರೆ. ಆದರೆ ನೀವು ಕ್ರಿಯಾಯೋಜನೆಯನ್ನೇ ತಯಾರಿಸಿಲ್ಲ.

ಗೃಹ ಸಚಿವರಿಗೆ ಒಂದು ಮಾತು ಹೇಳುತ್ತೇನೆ: ವಿದರ್ಭದಲ್ಲಿ ರೈತರ ಆತ್ಮಹತ್ಯೆ ಆಗುತ್ತಿದೆ, ತಮ್ಮ ಸಮ್ಮಿಶ್ರ ಸರ್ಕಾರ ಬಂದ ಮೇಲೆ ಇದುವರೆಗೂ 172

ಆತ್ಮಾಹುತಿಯಾಗಿದೆ. ಪ್ರಧಾನಿಗಳಿಗೆ, ವಿಶೇಷವಾಗಿ ಶರದ್ ಪವಾರ್‌ರವರಿಗೆ ಬಹಳ ಅಭಿನಂದನೆ ಸಲ್ಲಿಸುತ್ತಿದ್ದೇವೆ. ವಿದರ್ಭ ಪ್ಯಾಕೇಜ್ ಅಂದರೆ ಬರಗಾಲಕ್ಕೆ ತುತ್ತಾಗುವ ಪ್ರದೇಶಕ್ಕೆ ಏನುಹಣ ಕೊಟ್ಟಿದ್ದಾರೆ ಆ ಮಾದರಿಯಲ್ಲೇ ಕರ್ನಾಟಕಕ್ಕೂ ಬೆಳಗಾವಿ, ದಾವಣಗೆರೆ, ತುಮಕೂರು, ಹಾಸನ ಆಗಲಿ, ಚಿಕ್ಕಮಗಳೂರಿಗೆ ಎಷ್ಟು ಕೊಟ್ಟಿದ್ದಾರೆ? 2670 ಕೋಟಿ. ಇದಕ್ಕೆ ರಾಜ್ಯಸರ್ಕಾರದಿಂದಲೂ ಹಣ ಬಿಡುಗಡೆ ಮಾಡಬೇಕಾಗಿತ್ತು. ಇವತ್ತು PWD Minister ಅಧ್ಯಕ್ಷತೆಯಲ್ಲಿ ಇದಕ್ಕೆ ಒಂದು Sub Committee constitute ಮಾಡಿದ್ದೀರಿ. ಆದರೆ ಇನ್ನೂವರೆಗೆ ಕ್ರಿಯಾಯೋಜನೆಯೇ ತಯಾರಾಗಿಲ್ಲ. ಸರ್ಕಾರದ ಕೆಲಸದ ವೈಖರಿ ಈ ತರಹವಾದರೆ ರಾಜ್ಯದ ಜನತೆಯ ಪಾಡೇನು? ಒಂದು ಚರ್ಚೆ ಪ್ರಾರಂಭವಾದರೆ ಅದು ಇಡೀ ಸದನದ ಪ್ರಾಪರ್ಟಿ ಆಗುತ್ತದೆ. ಸದನದ ಎಲ್ಲರೂ ಸರ್ಕಾರ ಕೆಲಸ ಮಾಡಿಲ್ಲ ಅಂತ ಹೇಳಬೇಕಾಗುತ್ತದೆ. ನಾವು ಪಕ್ಷಭೇದ ಮರೆತು ಏನು ಅನಾನೂಕೂಲತೆ ರಾಜ್ಯದಲ್ಲಿ ಉಂಟಾಗುತ್ತದೆಯೋ ಅದನ್ನು ಬಿಚ್ಚುಮನಸ್ಸಿನಿಂದ ಹೇಳಬೇಕಾಗುತ್ತದೆ. ಈ ಸದನದಲ್ಲಿ ಬೂಟಾಟಿಕೆ ಮಾತಾಡಿದರೆ ಆಗುವುದಿಲ್ಲ. ವಸ್ತುಸ್ಥಿತಿಯನ್ನು ಸರ್ಕಾರ ಮುಂದೆ ಇಡಬೇಕಾಗುತ್ತದೆ.

ಈಗ 4463 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಅದರಲ್ಲಿ 451 ಗ್ರಾಮಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ ಎಂದಿದ್ದೀರಿ. ಇದಕ್ಕಾಗಿ 50 ಕೋಟಿ ಬಿಡುಗಡೆ ಮಾಡಿದರೆ ಏನೂ ಸಾಲುವುದಿಲ್ಲ. ಪ್ರಕಾಶರೇ ಬಳ್ಳಾರಿಯೆಂಬ ಬರಗಾಲಕ್ಕೆ ತುತ್ತಾದ ಪ್ರದೇಶದಿಂದ ಬಂದಿದ್ದೀರಿ. ಮೊನ್ನೆ ರಿವ್ಯೂ ಮಾಡುವಾಗ ಮುಖ್ಯಮಂತ್ರಿಗಳು ಹೇಳಿದರು, ಬರಗಾಲದ ಗಂಭೀರ ಪರಿಸ್ಥಿತಿ ಎದುರಿಸಲು ಮತ್ತೆ ಪ್ರಧಾನಿಗಳ ಬಳಿಗೆ ನಿಯೋಗ ಕರೆದೊಯ್ಯುವುದಾಗಿ, ನಾವು ಬರುತ್ತೇವೆ. ಸರ್ಕಾರ ತನ್ನ ಕರ್ತವ್ಯ ನಿರ್ವಹಣೆ ಮಾಡಿ ಕೇಂದ್ರದಿಂದ ಹೆಚ್ಚಿನ ನೆರವು ಬೇಕು, ಎಲ್ಲೆಲ್ಲಿ ಯಾವ್ಯಾವ ಬಾಬಿಗೆ ಬೇಕಾಗಿದೆ ಅಂತ ನಾವು ಮನವರಿಕೆ ಮಾಡಿಕೊಡಬೇಕಾಗುತ್ತದೆ. ಕೊಟ್ಟಿರುವ ಹಣವನ್ನು ಯಾವರೀತಿ ವ್ಯಯಿಸಲಾಗಿದೆ ಎಂಬುದನ್ನೂ ನಾವು ಅವರಿಗೆ ಹೇಳಬೇಕಾಗುತ್ತದೆ. ಬರಗಾಲ ಉಸ್ತುವಾರಿ ನೋಡಿಕೊಳ್ಳುವ ಎಂ.ಪಿ. ಪ್ರಕಾಶ್‌ರವರು ಕೇಂದ್ರ ಗೃಹಸಚಿವರಿಗೆ ಪರಿಚಿತರು. ಆದ್ದರಿಂದ ಇನ್ನೂ ಹೆಚ್ಚಿನ ಹಣ ಕೊಡುವ ರೀತಿ ಕೇಳಬೇಕು.

2005–06 ರಲ್ಲಿ Natural Calamity Fund 158 ಕೋಟಿ, 2006–07 ರಲ್ಲಿ 184 ಕೋಟಿ, ರೈತರ ಆತ್ಮಹತ್ಯೆ ವಿಷಯದಲ್ಲಿ Out of 2680 crores, they have given 360 crore ಜಾನುವಾರು ಮೇವಿಗಾಗಿ 50 ಲಕ್ಷ

Employment generation Under drought relief 108 ಕೋಟಿ Flood relief 63 ಕೋಟಿ, ಕುಡಿಯುವ ನೀರು ಯೋಜನೆಗಾಗಿ 376 ಕೋಟಿ–ಒಟ್ಟಾರೆ ಕೇಂದ್ರದಿಂದ ಬಂದ ಹಣ 1339 ಕೋಟಿ, ಇದಕ್ಕೆ matching grant ಇನ್ನೂ ಸರ್ಕಾರದ ನೀವು ಕೊಟ್ಟಿಲ್ಲ. ಈಗಾಗಲೇ ಗ್ರಾಮೀಣ ಪ್ರದೇಶದ ಕುಡಿಯುವ ನೀರಿನ ಸೌಲಭ್ಯಕ್ಕಾಗಿ 330 ಲಕ್ಷ, ಮತ್ತೆ ತ್ವರಿತ ಗ್ರಾಮೀಣ ನೀರು ಸರಬರಾಜು ಕಾರ್ಯಕ್ರಮದಲ್ಲಿ ಕೇಂದ್ರದಿಂದ 4877 ಲಕ್ಷ ಬಂದಿದೆ. ಬೆಳಗಾವಿ ಅಧಿವೇಶನದಲ್ಲಿ ರಾಜ್ಯ ಸರ್ಕಾರ ಹೇಳಿತು, ನಮ್ಮ ಬೊಕ್ಕಸದಿಂದ ಹಣ ಬಿಡುಗಡೆ ಮಾಡುತ್ತೇವೆ ಎಂದು. ಇದರ ಬಗ್ಗೆ ಬಹಳ ಗಂಭೀರ ಚರ್ಚೆ ಬೆಳಗಾವಿಯಲ್ಲಿ ಆಯಿತು. ಆಗ ಬರ ಮತ್ತು ಪ್ರವಾಹ ಹಾವಳಿ ಎರಡೂ ಕಾರ್ಯಕ್ರಮಕ್ಕೆ 1103 ಕೋಟಿ. 6–03–2007 ರವರೆಗೆ ಬರ ಮತ್ತು ನೆರೆ ಪರಿಹಾರಕ್ಕಾಗಿ 494 ಕೋಟಿ, ರಾಜ್ಯ ಬಿಡುಗಡೆ ಮಾಡಿದ್ದು 276 ಕೋಟಿ, 221 ಕೋಟಿ ಇದುವರೆಗೂ ಖರ್ಚಾಗದ ಹಣ ಉಳಿದಿದೆ.

ಒಂದು ಮಾತು ಹೇಳುತ್ತೇನೆ : ಅಧಿಕಾರಿಗಳು ಅಧಿಕಾರಿಗಳೇ, ಬರ ಮತ್ತು ಕುಡಿಯುವ ನೀರಿನ ಸಮಸ್ಯೆ ಬಂದಾಗ There is no movement at all. ಸರ್ಕಾರ ಹಣ ಕೊಟ್ಟಿದೆ, ಎಲ್ಲಿ ನೀರಿನ ಅವಶ್ಯಕತೆಯಿದೆ, ಎಲ್ಲಿ ಬೋರ್‌ವೆಲ್ ಹೊಡೆಯಬೇಕು, ಎಲ್ಲಿಗೆ ಸಾಗಾಣಿಕೆಯಾಗಬೇಕು ಎಂದು ಯಾವ ಜಿಲ್ಲಾಧಿಕಾರಿಗಳೂ ನೋಡುತ್ತಿಲ್ಲ. ಪ್ರಜಾಪ್ರಭುತ್ವ ಪದ್ಧತಿಯಡಿ first you have to creat psychological atmosphere. There is the Government. We are for you rescue ಎಂಬ ಭಾವನೆ ಭರಿಸಬೇಕು. ಬಹಳ ಹಾಯಾಗಿ ಇವತ್ತು ನಡೆದಿದೆ. 1972ರಲ್ಲಿ ಬಾಲಸುಬ್ರಹ್ಮಣ್ಯಂ ಗುಲ್ಬರ್ಗಾದಲ್ಲಿ ಜಿಲ್ಲಾಧಿಕಾರಿಯಾಗಿದ್ದರು. ಎಷ್ಟೊಂದು ಕೆಲಸವಾಗಿತ್ತು. ಆದರೆ ಇವತ್ತು ಆ ರೀತಿ ಕೆಲಸವಾಗುತ್ತಿಲ್ಲ. I know Shivalinga Murthy ನನ್ನ ಕಾಲದಲ್ಲಿ ಜಿಲ್ಲಾ ಪಂಚಾಯಿತಿಗೆ ಅವರನ್ನು ಸೆಕ್ರೆಟರಿಯಾಗಿ ನೇಮಕ ಮಾಡಿದ್ದೆ. ಇವತ್ತು ನಮ್ಮ ಕಾಲದಲ್ಲಿ flood relief ಗೆ ನಾವು 172 ಕೋಟಿ ರೂಪಾಯಿಗಳನ್ನು ಬೆಳಗಾಂ ಜಿಲ್ಲೆಗೆ ಖರ್ಚು ಮಾಡಿದ್ದೇವೆ. ಪ್ರವಾಹಪೀಡಿತ ಪ್ರದೇಶಗಳಿಗೆ ತಾವು Revenue Minister ಆಗಿದ್ದೀರಿ. ನಾವು ಖರ್ಗೆಯವರು ಕೂಡಿ ಆಲಮಟ್ಟಿ ಡ್ಯಾಮ್‌ಗೆ ಹೋಗಿದ್ದೇವು. ಅಲ್ಲಿ ನಾವು ಮಾನ್ಯ ಪ್ರಧಾನಮಂತ್ರಿಗಳನ್ನು ಅವರ ಎದುರುಗಡೆಯೇ ಸಂಪರ್ಕಿಸಿದ್ದೇವೆ. "Sir, situation is very grave. You are the Prime Minister of this Country. You must come and visit. ನಮಗೆ ಮಹಾರಾಷ್ಟ್ರದಿಂದ ಸಾಕಷ್ಟು ಪ್ರವಾಹ ಬಂದಿದೆ" ಎಂದು ಹೇಳಿದ್ದೇವೆ.

ಅವರು ಬಂದರು, ಮೊದಲು flight take off ಆಗಲಿಲ್ಲ. ಶರದ್ ಪವಾರ್‌ರವರು ಬಂದರು. ಅವರೂ ಕೂಡ ಇದಕ್ಕೆ ಸಾಕಷ್ಟು ಹಣ ಕೊಡತಕ್ಕಂಥ ರೀತಿಯಲ್ಲಿ ಕೆಲಸ ಮಾಡಿದರು. ಇವತ್ತು ಏನಾಗುತ್ತಿದೆಯೆಂದರೆ, ರಾಜ್ಯ ಸರ್ಕಾರದಿಂದ ಮಂತ್ರಿಗಳಾಗಲಿ, ಶಾಸಕರಾಗಲಿ, ಅಧಿಕಾರಿಗಳಾಗಲಿ, ಇಂತಹ 'ಬರ' ಕ್ಕೆ ಏನು ಜನರು ತತ್ತರಿಸಿದ್ದಾರೆ, ಅದಕ್ಕೆ ಯಾವುದೇ ಒಂದು ವಾತಾವರಣ ನಿರ್ಮಾಣವಾಗುತ್ತಿಲ್ಲ.

ಇವತ್ತು ನಾವು politicise ಮಾಡುತ್ತಿಲ್ಲ. ಇದ್ದಂತಹ ಪರಿಸ್ಥಿತಿಯನ್ನು ಹೇಳುತ್ತಿದ್ದೇವೆ. ನಿನ್ನೆ ಮುಖ್ಯಮಂತ್ರಿಗಳು ಬಿಲ್ ತಂದರು. ಮುಖ್ಯಮಂತ್ರಿಗಳ ಎದುರುಗಡೆಯೇ ಹೇಳಿದ್ದೇವೆ. ಇವತ್ತು ಇಲ್ಲಿರತಕ್ಕಂಥ ಜನರನ್ನು ಬೆಂಗಳೂರಿನಲ್ಲಿ ಏನು ಗತಿಯಾಗುತ್ತಿದೆಯೆಂದು ಕೇಳಿ. ನೀರು ಎಲ್ಲಿ ಸಿಗುತ್ತಿದೆ? ಎಷ್ಟು ತೊಂದರೆ ಇದೆ? ಬಹಳಷ್ಟು ವಿಚಾರಗಳಿವೆ. ಬೆಂಗಳೂರಿನಲ್ಲಿ 100 ರಿಂದ 150 ವಾರ್ಡುಗಳನ್ನು ಮಾಡಿದಿರಿ, ಒಪ್ಪಿದ್ದೇವೆ. ಆದರೆ, ಬೆಂಗಳೂರು ನಗರದ infrastructure ಬಗ್ಗೆ ಇರತಕ್ಕಂಥ ಸಮಸ್ಯೆಗಳ ಬಗ್ಗೆ ಏನು ಕೆಲಸ ಮಾಡುತ್ತಿದ್ದೀರಿ? ನಾವು ಜಪಾನ್ ಬ್ಯಾಂಕಿನಿಂದ ನೆರವು ತೆಗೆದುಕೊಂಡು 3,374 ಕೋಟಿ ರೂಪಾಯಿಗಳ ಯೋಜನೆಯನ್ನು ರಾಮಲಿಂಗಾರೆಡ್ಡಿಯವರ ಕ್ಷೇತ್ರದಲ್ಲಿ ಗುಲಾಂ ನಬಿ ಆಜಾದ್‌ರವರು ಬಂದು ಶಂಕುಸ್ಥಾಪನೆ ಮಾಡಿದರು. ಎಲ್ಲಿರವರೆಗೆ ಕೆಲಸ ನಡೆಯುತ್ತಿದೆ? ಅವರ ಜಪಾನ್ ಬ್ಯಾಂಕ್‌ನವರು ಬರುತ್ತಾರೆ. ಕೊಟ್ಟಂತಹ ಹಣವನ್ನು ಎಲ್ಲಿಯವರೆಗೆ ಸಮರ್ಪಕವಾಗಿ ಉಪಯೋಗಿಸಿದ್ದೀರೆಂದು ಕೇಳುತ್ತಾರೆ. ಬೆಂಗಳೂರು ನಗರಕ್ಕೆ ಇರುವ ಹಾಹಾಕಾರ ಯಾವಾಗಲೂ ಇರಲಿಲ್ಲ. ಇವತ್ತು ಗುಲ್ಬರ್ಗಾ ನಗರದಲ್ಲಿ ನೀರಿನ ಕೊರತೆ ಇಲ್ಲ. ಯಾವಾಗ ವೀರಪ್ಪ ಮೊಯ್ಲಿಯವರು ಅರ್ಥಮಂತ್ರಿಯಾಗಿದ್ದರು, ನಾನು ಮತ್ತು ಖರ್ಗೆಯವರು 22 ಕೋಟಿ ರೂಪಾಯಿಗಳನ್ನು ಒಂದು ವರ್ಷದಲ್ಲಿ ಖರ್ಚು ಮಾಡಿಸಿ, ಗುಲ್ಬರ್ಗಾ ನಗರಕ್ಕೆ ನೀರು ಕೊಡತಕ್ಕಂಥ ವ್ಯವಸ್ಥೆ ಮಾಡಿದ್ದೇವೆ. ಇವತ್ತು ಹಾಹಾಕರಾವಿದೆ, ವಿತರಣೆಯಾಗುತ್ತಿಲ್ಲ. ಸರಿಯಾದ ರೀತಿಯಲ್ಲಿ officers ಬರುತ್ತಿಲ್ಲ. ನಾವೂ ಎಷ್ಟೆಂದು ಹೇಳುವುದು?

ನಾವು ಕೂಡ ಇವತ್ತು ರಾಜ್ಯದಲ್ಲಿ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದೇವೆ. ಇರತಕ್ಕಂಥ ವ್ಯವಸ್ಥೆ ಕೆಟ್ಟು ಹೋಗಿಬಿಟ್ಟಿದೆ. 'ನಾವೇನು ಮಾಡೋಣ ಸರ್' ಎಂದು ಅಧಿಕಾರಿಗಳು ಹೇಳುತ್ತಾರೆ. ಇವತ್ತು ಗುಲ್ಬರ್ಗಾ ನಗರದಲ್ಲಿ 6 ಲಕ್ಷ ಜನಸಂಖ್ಯೆ ಏನಿದೆ, ಅಲ್ಲಿ ಬಹಳಷ್ಟು ತೊಂದರೆ ಇದೆ. ಹುಬ್ಬಳ್ಳಿ-ಧಾರವಾಡದಲ್ಲಿದೆ, ಬೆಳಗಾಂನಲ್ಲಿದೆ, ಮಂಗಳೂರಿನಲ್ಲಿದೆ. ಮಂಗಳೂರಿನಲ್ಲಿ ಮೂರು ದಿವಸಗಳಿಗೊಮ್ಮೆ ಕೊಡುತ್ತಾರೆ.

ನಾಗರಾಜಶೆಟ್ಟಿಯವರು ಮಂದಿರಕ್ಕೆ, ಎಲ್ಲಾ ಕಡೆಗಳಿಗೂ ಹೋದರೆ ಆಗುತ್ತದೆ. ಕೆಲಸ ಮಾಡಬೇಕು. For that, they require commitment. ಇವತ್ತು ಇಷ್ಟೆಲ್ಲಾ ನಗರ ಪ್ರದೇಶಗಳಿಗೆ ಇದ್ದಂಥಾದ್ದು, ಹುಬ್ಬಳ್ಳಿ-ಧಾರವಾಡಗಳಿಂದ ಅವರೇ ಬಂದಿದ್ದಾರೆ. ಹುಬ್ಬಳ್ಳಿ-ಧಾರವಾಡಕ್ಕೆ ಮಲಪ್ರಭಾ ನದಿಯಿಂದ ನೀರನ್ನು ತರತಕ್ಕಂಥ ರೀತಿಯಲ್ಲಿ ಡಿ.ಕೆ.ನಾಯ್ಕರ್‌ರವರು ನಗರಾಭಿವೃದ್ಧಿ ಸಚಿವರಾದ ಮೇಲೆ ಕೆಲಸ ಮಾಡಿದ್ದೇವೆ. ನಾನು 1980 ರಲ್ಲಿ ನಗರಾಭಿವೃದ್ಧಿ ಸಚಿವನಾಗಿ ಹುಬ್ಬಳ್ಳಿ-ಧಾರವಾಡಕ್ಕೆ ಪಾಟೀಲ್‌ರವರ ಮುಖಾಂತರ ಹಣವನ್ನು ಕೊಟ್ಟು ಕೆಲಸ ಮಾಡಿದ್ದೇವೆ. ಇವತ್ತು ಆ ಕೆಲಸ ಆಗಬೇಕಾಗಿದೆ.

ಇವತ್ತು ಪ್ರಪ್ರಥಮವಾಗಿ ಕುಡಿಯುವ ನೀರಿನ ಸಮಸ್ಯೆಗೆ ತಾವು ಕೊಟ್ಟಂತಹ ಹಣ ಸಾಕಾಗುವುದಿಲ್ಲ, ಇನ್ನೂ ಹೆಚ್ಚಿನ ಹಣ ಕೊಡಬೇಕು. 100 ಕೋಟಿ ರೂಪಾಯಿಗಳನ್ನು sanction ಮಾಡಬೇಕು. ಜಾನುವಾರುಗಳು ಸಾಯುತ್ತಿವೆ. ಜಾನುವಾರುಗಳು ಮೇವಿಗಾಗಿ ಕೊಡಬೇಕು. ಮತ್ತು ನಮ್ಮ ಕೂಲಿ ಕಾರ್ಮಿಕರೇನಿದ್ದಾರೆ, ಅವರುಗಳಿಗೆ ಕೆಲಸ ಕೊಡತಕ್ಕಂಥಾದ್ದು. ನಮ್ಮ ಬೆಳೆಗಳು ಹಾಳಾಗಿವೆ, ಅದಕ್ಕೂ ಕೂಡ ಹಣ ಕೊಡಬೇಕು. ನಾವು ಬಹಳ ನೊಂದ ಮನಸ್ಸಿನಿಂದ ಹೇಳಿದ್ದೇವೆ. ಬಹಳಷ್ಟು ಸಲ ಅವರು ಹೇಳಿದಂತೆ, ಈ ಸದನದಲ್ಲಿ ಪ್ರಸ್ತಾಪವಾಗಿದೆ. ಬರ ಪರಿಸ್ಥಿತಿಯನ್ನು ನಿಯಂತ್ರಿಸುವ ರೀತಿಯಲ್ಲಿ ನಾವು ಕೆಲಸ ಮಾಡಿದ್ದೇವೆ. ಆದರೆ, ಇವತ್ತಿನ ದಿವಸ ಸರ್ಕಾರ ಇರತಕ್ಕಂಥ ಸಮಸ್ಯೆಗೆ ನಾವು ನೇರವಾಗಿ ಗಮನಕ್ಕೆ ತರತಕ್ಕಂಥ ಕೆಲಸ ಮಾಡಿದ್ದೇವೆ. ಇದಕ್ಕೆ ಹೆಚ್ಚಿನ ಹಣ ಒದಗಿಸಬೇಕು. ಏಕೆಂದರೆ, ಇವತ್ತು ಕೊನೆಯ ದಿವಸ. ಮತ್ತೆ ನಾವೆಲ್ಲರೂ ಸೇರುವುದೇ ಜೂನ್ ತಿಂಗಳಲ್ಲಿ. ಜೂನ್ ತನಕ ರಾಜ್ಯದಲ್ಲಿ ಏನಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಎರಡು ರಥಗಳು ಬೇರೆ ಬೇರೆ ಕಡೆಗಳಿಗೆ ಹೊರಟಿವೆ. ಅವೆಲ್ಲವನ್ನೂ ಹೇಳಿದ್ದೇವೆ.

ನಾವು ಇಲ್ಲಿ ಸುಮ್ಮನೆ ತಮಾಷೆಗೇನೂ ಹೇಳುತ್ತಿಲ್ಲ. ಇವತ್ತು ಸದನ ನಡೆಯುತ್ತಿದೆ, ಉಪ ಮುಖ್ಯಮಂತ್ರಿಗಳು ಅಲ್ಲಿದ್ದಾರೆ. ನಿನ್ನೆ ಹೇಳಿದ್ದಾರೆ. ನಾನು ನಂಜುಂಡಪ್ಪನವರ ವರದಿಗೆ ಇನ್ನೂ ಕೂಡ 32, 000 ಕೋಟಿ ರೂಪಾಯಿಗಳನ್ನು ಕೊಡುತ್ತೇನೆಂದು ಹೇಳಿದ್ದಾರೆ. ಹೇಗೆ ಕೊಡುತ್ತೀರಿ? ಎಲ್ಲಿಂದ ಕೊಡುತ್ತೀರಿ? ನಿಮ್ಮ ಬಜೆಟ್ ಏನು? ನೀವು ಮಾತನಾಡತಕ್ಕಂಥಾದ್ದು ಏನು? ಇದು ನಿಮ್ಮ ಬಜೆಟ್ ಅಲ್ಲ, ನಮ್ಮ ಬಜೆಟ್ ಅಲ್ಲ. ರಾಜ್ಯದ ಜನತೆಯ ತೆರಿಗೆಯನ್ನು ವಸೂಲು ಮಾಡಿ, ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಒಂದು ಉತ್ತಮವಾದ ಬಜೆಟ್

ಆಗಬೇಕು. ಇದು ಸಮ್ಮಿಶ್ರ ಸರ್ಕಾರದ ಬಜೆಟ್ ಅಲ್ಲ, ನಮ್ಮದೂ ಅಲ್ಲ. ಯಾವಾಗಲೂ ಕೂಡ ಸಿದ್ಧರಾಮಯ್ಯನವರ ಕಾಲದಲ್ಲಿ pro poor, pro farmers budget ಎಂದು National level ನಲ್ಲಿ appreciate ಮಾಡಿದ್ದಾರೆ. ಎಂದಿಗೂ ಕೂಡ ನಾವು credit ತೆಗೆದುಕೊಳ್ಳುವುದಕ್ಕೆ ಮಾಡಿದ್ದಲ್ಲ. ಉತ್ತಮವಾದ ಬಜೆಟ್ ಅನ್ನು ಮಂಡಿಸಿದ್ದಾರೆ. ಬಡವರಿಗೆ ಸಹಾಯವಾಗುವ ರೀತಿಯಲ್ಲಿ ಮಂಡಿಸಿದ್ದಾರೆ. ಇವತ್ತು ಅವರು ಹೇಳುತ್ತಾರೆ. ಇವತ್ತು ಪ್ರತಿಶತ 4 ಶೇಕಡಾದಷ್ಟು nationalised banks ನವರು ಕೊಡಬೇಕೆಂದು ಹೇಳುತ್ತಾರೆ. ನಾನೇ ಮಾಡುತ್ತೇನೆಂದು ಹೊರಗಡೆ ಹೇಳಿಕೆ ಹೊರಡಿಸುತ್ತಾರೆ.

ನೀವು ಎಲ್ಲೆಲ್ಲಿ ಹಾಯ್ದು ಹೋಗುತ್ತೀರಿ, ಯಾವ್ಯಾವ ತಾಲ್ಲೂಕುಗಳಿಗೆ ಹೋಗುತ್ತೀರಿ, ಆ ತಾಲ್ಲೂಕುಗಳಲ್ಲಿರುವ ಸಮಸ್ಯೆಗಳನ್ನು ಬಗೆಹರಿಸತಕ್ಕಂಥ ರೀತಿಯಲ್ಲಿ ದುಡ್ಡನ್ನು ಬಿಡುಗಡೆ ಮಾಡಿದರೆ ಸಾಕು. ದೊಡ್ಡ ಪುಣ್ಯ ಕಟ್ಟಿಕೊಂಡಂತಾಗುತ್ತದೆ. ತಾವು ರಾಜ್ಯದ ಜನತೆಯನ್ನು ಉಳಿಸುವ ಕೆಲಸ ಮಾಡಬೇಕು. ರಾಜಕೀಯ ಬೇರೆ. ಇವತ್ತು ಸರಿಯಾದ ರೀತಿಯಲ್ಲಿ, ಪ್ರಾಮಾಣಿಕತೆಯಿಂದ ಕೆಲಸ ನಿರ್ವಹಿಸಿದರೆ, there will be public opinion in your favour. ಜನಾಭಿಪ್ರಾಯ ಮೂಡುತ್ತದೆ, ಕೆಲಸವಾಗುತ್ತದೆ. ಈಗಲೂ ನಾವು ದೇವರಾಜ ಅರಸುರವರನ್ನು ಏಕೆ ನೆನಸುತ್ತೇವೆಂದರೆ, ಅವರ ಕಾಲದಲ್ಲಿ ಈ ರಾಜ್ಯಕ್ಕೆ, ಬಡವರಿಗೆ ಹಿತವಾಗಿದೆಯೆಂದು ನೆನೆಸುತ್ತೇವೆ. ನಮ್ಮ ಬಹಳಷ್ಟು ಸ್ನೇಹಿತರೆಲ್ಲರೂ ಮಾತನಾಡುವವರಿದ್ದಾರೆ. ಚರ್ಚೆ ಪ್ರಾರಂಭವಾಗಿದೆ. ಅಂತಿಮವಾಗಿ, ಕೊನೆಯ ದಿವಸ ಅಧ್ಯಕ್ಷರು ನಮ್ಮ ಮೇಲೆ ಕರುಣೆ ತೋರಿಸಿದರು. ಆದರೂ ಕೂಡ ತಾವು ಬಹಳ ಗಟ್ಟಿಗಿದ್ದೀರಿ. ನಮ್ಮದಕ್ಕೇನೂ ತಾವು ಒಳಪಡುವುದಿಲ್ಲ. ಆದರೂ ಕೂಡ ಆ ಸ್ಥಾನದಲ್ಲಿ ಕುಳಿತು ಇವತ್ತು ಏನು ಚರ್ಚೆಯಾಗುತ್ತದೆ, ಎಲ್ಲರಿಗೂ ರಕ್ಷಣೆ ಕೊಡಬೇಕು. ಸರಿಯಾದ ರೀತಿಯಲ್ಲಿ ತಮ್ಮ ಅಧ್ಯಕ್ಷತೆಯಲ್ಲಿ ನಮ್ಮೆಲ್ಲರಿಗೂ ರಕ್ಷಣೆ ಸಿಕ್ಕಿದೆಯೆಂಬ ಭಾವನೆಗಳು ನಮ್ಮ ಮನಸ್ಸಿನಲ್ಲಿ ಬರಬೇಕು. ಆ ರೀತಿಯಲ್ಲಿ ಕೆಲಸ ಆಗಬೇಕಾಗಿದೆ.

ಅದಕ್ಕೋಸ್ಕರ, ಇವತ್ತಿನ ದಿವಸ ಎಷ್ಟು ಹಣ ಕೊಡುತ್ತೀರಿ, immediate ಆಗಿ task force ಮಾಡಬೇಕು. ಎಲ್ಲಾ ಜಿಲ್ಲಾಧಿಕಾರಿಗಳಿಗೆ ಪ್ರತಿಯೊಂದು problematic villages ಗೂ ಹೋಗಿಬರಬೇಕೆಂದು ಹೇಳಬೇಕು. ಎಲ್ಲೆಲ್ಲಿದೆ ಎಂದು ಖುದ್ದಾಗಿ ನೋಡಿಕೊಂಡು ಹೋಗಬೇಕು. ಮತ್ತು You have to direct all the Deputy Commissioners. ನಮಗೆ ಮೂರು ದಿವಸದೊಳಗಾಗಿ

ರಿಪೋರ್ಟ್ ಬರಬೇಕು. ಮತ್ತೇನಾಗಿದೆ? ನೀವು ದೂರವಾಣಿ ಮುಖಾಂತರ ನೇರವಾಗಿ ಸಂಪರ್ಕ ಮಾಡಿದರೆ, ಸರ್ಕಾರ ನಿಜವಾಗಿಯೂ ಗಂಭೀರವಾಗಿದೆ. ಇವತ್ತು ಕೆಲಸ ಮಾಡತಕ್ಕಂಥ ರೀತಿಯಲ್ಲಿ ಕೇಳುತ್ತಾರೆ ಎಂಬ ಮಾತೂ ಬರುತ್ತದೆ. ನಾನು ಇನ್ನು ಬಹಳಷ್ಟು ಸಮಯವನ್ನು ತೆಗೆದುಕೊಳ್ಳಲಾರದೇ, ಇವತ್ತು ಕೇಂದ್ರ ಸರ್ಕಾರಕ್ಕೆ ಮತ್ತೊಂದು ನಿಯೋಗ ಹೋಗಬೇಕು. ಮತ್ತು ಕೇಂದ್ರ ಸರ್ಕಾರ ಕೊಟ್ಟಂತಹ ಹಣಕ್ಕೆ ಸಂಬಂಧಿಸಿದಂತೆ, ನೀವೆಲ್ಲರೂ ಅಲ್ಲಿಗೆ ಹೋದಾಗ ಇವೆಲ್ಲವನ್ನೂ ಕೇಳುತ್ತಾರೆ. ಎಷ್ಟೆಷ್ಟು ಹಣ ಬಿಡುಗಡೆ ಮಾಡಿದ್ದೀರಿ? ಯಾವ ರೀತಿಯಾಗಿ ಬಿಡುಗಡೆ ಮಾಡಿದ್ದೀರಿ ಎಂಬುದನ್ನು ಕೇಳುತ್ತಾರೆ. ಅದಕ್ಕೆ ತಾವು ಸ್ಪಂದಿಸಬೇಕು. ಕೇವಲ ಉತ್ತರಕ್ಕಾಗಿ ಉತ್ತರವೆಂದಲ್ಲ. ಅವರು ಉತ್ತಮ ಸಂಸದೀಯ ಪಟುಗಳಿದ್ದಾರೆ. ಯಾವ್ಯಾವುದೋ, ಬೇರೆ ಬೇರೆ ಕಡೆಗಳದ್ದು, House of Common ಅವೆಲ್ಲವನ್ನೂ ಇಲ್ಲಿ ಹೇಳಿದ್ದಾರೆ. ನೇರವಾಗಿ ಎಷ್ಟು ಮಾಡಿದ್ದೀರಿ, ಏನೇನು ಕೊಟ್ಟಿದ್ದೀರಿ ಎಂಬುದನ್ನು ಹೇಳಬೇಕು. ಕೊನೆಗೆ, ರಮೇಶ್‌ಕುಮಾರ್‌ರವರು ಮಾತಾಡಲಿ. ನಮಗೆ ಬೇಕಾಗಿರುವುದೇನೆಂದರೆ, ನೇರವಾಗಿ ಹಣ ಬಿಡುಗಡೆ ಮಾಡಬೇಕು. ರಾಜ್ಯದ ಜನತೆಗೆ ಒಳ್ಳೆಯದಾಗಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) :- ಮಾನ್ಯ ಅಧ್ಯಕ್ಷರೆ, ಈಗಾಗಲೇ ಬರಗಾಲ ಪರಿಸ್ಥಿತಿ ಬಗ್ಗೆ ವಿವರವಾಗಿ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಇದನ್ನು ಬಹುಶಃ ಬಿಲ್ ಪಾಸ್ ಮಾಡುವ ಮುನ್ನ ಆಗಿದ್ದರೆ ಬಹಳ ಒಳ್ಳೆಯದಾಗುತ್ತಿತ್ತು. ಆದರೆ, ಸರ್ಕಾರವೂ ಸ್ಪಂದಿಸಲಿಲ್ಲ, ತಾವೂ ಮನಸ್ಸು ಮಾಡಲಿಲ್ಲ. ತಮಗೂ ಸಿಟ್ಟು ಬಂದಿತ್ತು. The opposition is not behaving responsibly ಎಂದು ಹೇಳಿ, ನಮಗೆ ಚಕ್ಕೆಯಿಂದ ಹೊಡಿದಿರಿ ಹೊರತು ಅವರಿಗೇನೂ ಹೊಡೆಯಲಿಲ್ಲ. ಏಕೆಂದರೆ, ಯಾರು ಜನರಿಗೆ ಕುಡಿಯುವ ನೀರು ವ್ಯವಸ್ಥೆ ಮಾಡುವುದಕ್ಕೆ ತಯಾರಿಲ್ಲವೋ, ಕೆಲಸ ಇಲ್ಲದವರಿಗೆ ಕೆಲಸ ಕೊಡುತ್ತಿಲ್ಲವೋ, National Rural Employment Guarantee Scheme ನಲ್ಲಿ ಹಣ ಖರ್ಚು ಮಾಡುವ ಶಕ್ತಿ ಇಲ್ಲವೋ, ಕೇಂದ್ರ ಸರ್ಕಾರ ಕೊಟ್ಟ ಹಣವನ್ನು ಬಳಕೆ ಮಾಡತಕ್ಕಂಥ ತಾಕತ್ತು ಇಲ್ಲವೋ ಅಂತಹವರನ್ನು ಕೇಳಬೇಕಾಗಿತ್ತೇ ಹೊರತು, ನಮ್ಮ ಮೇಲೆ ನಿಮ್ಮ ಅಸ್ತ್ರವನ್ನು ಪ್ರಯೋಗಿಸಿದಿರಿ, ಪರವಾಗಿಲ್ಲ. ಆದರೂ ಕೂಡ ಈ ಕುರಿತಾದ ಚರ್ಚೆಗೆ ತಾವು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು.

ಆದರೆ, ಅನೇಕ ಸಲ ಬರಗಾಲದ ಬಗ್ಗೆ ಅನೇಕ ಹೇಳಿಕೆಗಳನ್ನು ಕೊಟ್ಟಿದ್ದಾರೆ.

(3 : 30 pm)

ಒಂದು ಕಡೆ ಕಂದಾಯ ಸಚಿವರ ಹೇಳಿಕೆ, ಇನ್ನೊಂದು ಕಡೆ ಗೃಹ ಸಚಿವರ ಹೇಳಿಕೆ, ಕೆಲವು ಸಲ ಅರ್ಥ ಸಚಿವರ ಮತ್ತು ಕೆಲವು ಸಲ ಮುಖ್ಯಮಂತ್ರಿಗಳು ಇದರ ಬಗ್ಗೆ ತಮ್ಮ ವಿಚಾರಗಳನ್ನು ಪ್ರಕಟ ಮಾಡುತ್ತಾರೆ. ನಾನು ಬಹಳ ದುಃಖದಿಂದ ಹೇಳುವ ಸಂಗತಿ ಏನೆಂದರೆ, National Calamity Reclief Fund ನಲ್ಲಿ NCRF ಎಂದೇನಿದೆ, ಅಥವಾ CRF ಎಂದೇನಿದೆ, ಇವೆರಡೂ fund ಗಳನ್ನು ಸರಿಯಾದ ರೀತಿಯಿಂದ ನಿರ್ವಹಿಸುವುದಕ್ಕೆ Cabinet Sub-Committee ಮಾಡಿದ್ದಾರೆ. ಕೇಂದ್ರದಲ್ಲಿ ಯಾವ ರೀತಿಯಾಗಿ ಗೃಹ ಸಚಿವರಾದ ಶಿವರಾಜ್ ಪಾಟೀಲರವರು ಇದ್ದಾರೆಯೋ, ಅದೇ ರೀತಿಯಾಗಿ ಇಲ್ಲಿನ Cabinet ನಲ್ಲಿ ಕೂಡ ಗೃಹ ಸಚಿವರಿಗೆ ಆ ಕೆಲಸವನ್ನು ವಹಿಸಿಕೊಟ್ಟಿದ್ದಾರೆ. ಒಂದು ಕಡೆ ಅವರು ನಿರ್ವಹಿಸುವುದಿದೆ. ಎರಡನೆಯದಾಗಿ, ಕಂದಾಯ ಸಚಿವರು ಇದರ ಉಸ್ತುವಾರಿಯನ್ನು ನೋಡಿಕೊಳ್ಳುವುದು ಇದೆ. ಇವರಿಬ್ಬರ ಜವಾಬ್ದಾರಿಯೂ ಕೂಡ ಇದೆ. ಜೊತೆಜೊತೆಯಲ್ಲಿ ಇನ್ನೊಂದೇನಾಗಿದೆ ಎಂದರೆ, ಕುಡಿಯುವ ನೀರಿನ ವ್ಯವಸ್ಥೆಯನ್ನು ಜಿಲ್ಲಾ ಪಂಚಾಯತ್, Rural Development ನವರೆಲ್ಲರೂ ನೋಡಿಕೊಳ್ಳುತ್ತಾರೆ. ಅದಕ್ಕೆ ಇವರೆಲ್ಲರನ್ನೂ ಸೇರಿಸಿ Empowered Committee ಮಾಡಿದ್ದೀರಿ Empowered Committee ಎಂದರೇನು? Cabinet ಏನು decision ತೆಗೆದುಕೊಳ್ಳುತ್ತದೆ, ಆ ಸಂಪೂರ್ಣ ಅಧಿಕಾರ ಆ Empowered Committee ಗೆ ಇರುತ್ತದೆ.

ಉದಾಹರಣೆಗಾಗಿ, Animal Husbandry Department ನವರು, ದನಗಳು ಸಾಯುತ್ತಿವೆ ಔಷಧಿಗೆಷ್ಟು ಹಣ ಬಿಡುಗಡೆ ಮಾಡಬೇಕು? ಬರಗಾಲದಲ್ಲಿ ಮೇವಿಲ್ಲ, ಜಾನುವಾರುಗಳು ಸಾಯುತ್ತಿವೆ, ಅದಕ್ಕೆಷ್ಟು ಹಣ ಕೊಡಬೇಕು? ಕೆಲಸಕ್ಕಾಗಿ ಎಷ್ಟು ಹಣ ಇಡಬೇಕು? ಆ ಹಣ ಇರಲಿಲ್ಲವೆಂದರೆ, ಯಾವ ಇಲಾಖೆಯಲ್ಲಿ ಹಣವಿದೆ, ಆ ಇಲಾಖೆಯಿಂದ ಹಣ ತೆಗೆದು ಕೊಡುವುದಕ್ಕೆ ಶಿಫಾರಸ್ಸು ಮಾಡುವುದಲ್ಲದೆ, ಇವರೇನು ನಿರ್ಣಯವನ್ನು ತೆಗೆದುಕೊಳ್ಳುತ್ತಾರೆ, ಅದೇ in toto ಜಾರಿಯಲ್ಲಿ ಬರುವುದಿದೆ. ಅದೇ ರೀತಿಯಾಗಿ power ವಿಚಾರದಲ್ಲಿ ಹೇಳುವುದಾದರೆ, ಅನೇಕ ಕಡೆ ಮೇವು ಬೆಳೆಸಬೇಕು ಅಥವಾ ವಿಶೇಷವಾಗಿ ದನಗಳಿಗೆ ಮೇವಿಲ್ಲವೆಂದರೆ, ನದಿ ದಂಡೆಯ ಪಕ್ಕದಲ್ಲಿ ಅಥವಾ dam ಹತ್ತಿರವಾಗಲಿ ಇಂಥ ಕಡೆ ಮೇವು

ಬೆಳೆಸುವುದಕ್ಕೆ ವಿಶೇಷವಾದಂಥ power connection ಗೆ ಹಣವನ್ನು ಕೊಡತಕ್ಕಂಥಾದ್ದಕ್ಕೆ ಅವರಿಗೆ ಅಧಿಕಾರವಿದೆ. ಹೀಗೆ, ಇದನ್ನು coordination ಮಾಡಿ ಈ ಸಮಸ್ಯೆಯನ್ನು ಬಗೆಹರಿಸಬೇಕೆನ್ನುವ ದೃಷ್ಟಿಯಿಂದಲೇ ಒಂದು ಟೀಂ ಮಾಡಿರುವುದು. Cabinet ಸೇರಿದಾಗ ಸಂಪೂರ್ಣವಾಗಿ ಅವರಿಗೆ ನಿರ್ಣಯವನ್ನು ತೆಗೆದುಕೊಂಡು ಅವರಿಗೆ ನಿರ್ಣಯವನ್ನು ತೆಗೆದು ಕೊಳ್ಳುವುದಕ್ಕಾಗುವುದಿಲ್ಲ ವೆನ್ನುವುದಕ್ಕಾಗಿ ಸರ್ವಾಧಿಕಾರವನ್ನು ಒಂದು ಕಮಿಟಿಗೆ ಕೊಟ್ಟರೆ ಆ ಕಮಿಟಿ ಉಸ್ತುವಾರಿ ನಡೆಸಿಕೊಂಡು ಇಡೀ ರಾಜ್ಯದಲ್ಲಿ ಹಣವನ್ನು ಹಂಚಿಕೆ ಮಾಡುತ್ತದೆ. ಯಾವುದಾದರೂ ಹೆಡ್‌ನಲ್ಲಿ ಹಣ ಖರ್ಚಾಗದಿದ್ದರೂ ಕೂಡ ಅದನ್ನು transfer ಮಾಡಿ, review ಮಾಡಿ ಖರ್ಚು ಮಾಡಬೇಕು. ಉದಾಹರಣೆಗೆ, ಸುಮಾರು 23 ಜಿಲ್ಲೆಗಳಲ್ಲಿ 128 ತಾಲ್ಲೂಕುಗಳು ಬರಗಾಲಪೀಡಿತವೆಂದು ಘೋಷಣೆಯಾಗಿವೆ.

ಇಷ್ಟೊಂದು ತಾಲ್ಲೂಕುಗಳಲ್ಲಿ ಆ ರೀತಿ ಘೋಷಣೆಯಾದ ಮೇಲೆ ಎಷ್ಟು ಸಲ Sub-Committee ಯಲ್ಲಿ ಆ ಉಸ್ತುವಾರಿ Secretary ಗಳನ್ನು ಕರೆಸಿ review ಮಾಡಿದ್ದೀರಿ? ಎಷ್ಟು ಸಲ ಆ Deputy Commissioner ಗಳಿಗೆ ಮತ್ತು Chief Executive Officer ಗಳನ್ನು ಕರೆಸಿ ತಾವು ರಿವ್ಯೂ ಮಾಡಿದ್ದೀರಿ? ಈ ಹಿಂದೆ ಏನಾಗುತ್ತಿತ್ತು. Empowered Committee ಸಂಬಂಧಪಟ್ಟಂಥ Secretary ಗಳನ್ನು ಕರೆಸಿ "ನಿಮ್ಮ ಇಲಾಖೆಗೆ ಎಷ್ಟು ಹಣ ಕೊಟ್ಟಿತ್ತು, ನೀವೇಕೆ ಹಣ ಖರ್ಚು ಮಾಡಲಿಲ್ಲ? ಇಂಥ ಜಿಲ್ಲಾಧಿಕಾರಿಗಳು ಏಕೆ ಮಾಡಿಲ್ಲ? ಇಂಥ ಜಿಲ್ಲೆಯಲ್ಲಿ ಕುಡಿಯುವ ನೀರಿನ ವ್ಯವಸ್ಥೆಗೆ ಇಷ್ಟು ಕೊಟ್ಟಿತ್ತು, ನೀವೇಕೆ ಅದನ್ನು ಸರಿಪಡಿಸಲಿಲ್ಲ?" ಎಂದು ಕೇಳುತ್ತಿದ್ದರು. ಅಥವಾ ಆ ಜಿಲ್ಲಾಧಿಕಾರಿ ತಮಗೆ ಕೊಟ್ಟಂಥ ಹಣ ಮುಗಿದಿದೆ, ಇನ್ನೂ ಕೊಡಬೇಕೆಂದು ಹೇಳಿದರೆ ತಕ್ಷಣ ನೀವು re appropriate ಆದರೂ ಮಾಡಿ, ಇನ್ನೊಂದು ಕಡೆಯಿಂದಾದರೂ ತೆಗೆದುಕೊಳ್ಳಿ, savings ನಿಂದಲಾದರೂ ಕೊಡಿ, ಅಥವಾ ನಿಮ್ಮಲ್ಲಿ ಹಣವಿಲ್ಲವೆಂದರೆ, ನೇರವಾಗಿ ಅದರ ಸದಸ್ಯರು Finance Secretary ಯವರು ಕೂಡ ಹೌದು, ಅವರೆಲ್ಲರೂ ಕೂಡ ಅವರ ಅಧೀನದಲ್ಲಿ ಬರುವಾಗ, direction ಕೊಟ್ಟು ಹಣ ಬಿಡುಗಡೆ ಮಾಡಿಸುವುದು ಬಿಟ್ಟು, ಕೇಂದ್ರ ಸರ್ಕಾರಕ್ಕೆ ನಾವು 74 ಕೋಟಿ ರೂಪಾಯಿ ಕೊಡಿ ಎಂದು ಪತ್ರ ಬರೆದಿದ್ದೇವೆ, 5 ಲಕ್ಷ metric tonne ಆಹಾರ ಕೇಳಿದ್ದೇವೆ, ಬಂದಿಲ್ಲವೆಂದು ಹೇಳುತ್ತಾರೆ. ಹೋಗಿ ತೆಗೆದುಕೊಂಡು ಬನ್ನಿ ಅಥವಾ ಅವರು ಕೊಡಲಿಲ್ಲವೆಂದರೆ, ಏಕೆ ಕೊಡಲಿಲ್ಲವೆಂದು ಕೇಳಿ. ಆ ವಿಚಾರ ಬೇರೆ. ಆದರೆ,

ಕೇಂದ್ರ ಸರ್ಕಾರದ ಮೇಲೆ ಹಾಕಿ ನಮ್ಮ ಕರ್ತವ್ಯವನ್ನು, ನಮ್ಮ responsibility ಯನ್ನು ತಪ್ಪಿಸಿಕೊಳ್ಳಲಾಗುವುದಿಲ್ಲ. ಅಥವಾ ನಮಗೇನೂ ಸಂಬಂಧವಿಲ್ಲವೆನ್ನುವುದು, ಹಣವೇ ಬಂದಿಲ್ಲ, ನಾವೂ ಕೇಂದ್ರ ಸರ್ಕಾರಕ್ಕೆ ಅನೇಕ ಸಾರಿ ಪತ್ರ ಬರೆದಿದ್ದೇವೆ ಎಂದು ಹೇಳುವುದಲ್ಲ.

ಕೇಂದ್ರ ಸರ್ಕಾರದಿಂದ ಹಣ ಬರದಿದ್ದರೆ, ನಿಮ್ಮಲ್ಲಿರತಕ್ಕಂಥ ಹಣವನ್ನು ಖರ್ಚು ಮಾಡಬೇಕು. ಯಾವುದಾದರೂ ದೊಡ್ಡ ಕೆಲಸಕ್ಕೆ ನೀವು ಹೆಚ್ಚಿನ ಬಜೆಟ್‌ಅನ್ನು ಕೊಟ್ಟಿದ್ದರೆ, ಆ ಬಜೆಟ್ ಅನ್ನು ಕಡಿತ ಮಾಡಿ ಬರಗಾಲಕ್ಕೆ ಕೊಡಬೇಕೆನ್ನುವ ದೃಷ್ಟಿಯಿಂದಲೇ NCCF & CRF ಎಲ್ಲ ಕೂಡ monitor ಮಾಡುವುದಕ್ಕೆ ಈ ಕಮಿಟಿ ಇರುತ್ತದೆ. ಆದರೆ, ಇಲ್ಲಿಯವರೆಗೆ 9 ತಿಂಗಳಿಂದ ಬರಗಾಲವಿದೆ ಎಂದು ಎಲ್ಲರೂ ಹೇಳಿಕೊಳ್ಳುತ್ತಿದ್ದೀರಿ. ಆದರೆ, ಫೆಬ್ರುವರಿ ತಿಂಗಳಲ್ಲಿ 7 ಲಕ್ಷ ರೂಪಾಯಿ ನೀರಿಗೆಂದು release ಮಾಡಿರುವುದು ಬಿಟ್ಟರೆ, ಅದಾದಮೇಲೆ ಹಣವನ್ನೇ ಬಿಡುಗಡೆ ಮಾಡಿಲ್ಲ. ಅಂದರೆ, ಇದೇನಾ ಬರಗಾಲದ seriousness? March, April, May ಈ ಮೂರು ತಿಂಗಳಲ್ಲಿ ನೀವು ಹಣ ಬಿಡುಗಡೆ ಮಾಡುವುದಿಲ್ಲ, ಅದರ ಬಗ್ಗೆ ಚಿಂತನೆ ಇಲ್ಲ, ಅದರ ಬಗ್ಗೆ ಕೇಳುವವರೆ ಇಲ್ಲ. ಬರಗಾಲದಲ್ಲಿ ಬಾಯಿ ಇದ್ದವರು ಬದುಕುತ್ತಾರೆನ್ನುವ ಹಾಗೆ ಸದನದಲ್ಲಿಯೂ ಹಾಗೇ ನಡೆದಿದೆ. ತಮಗೆ ಜೋರಾಗಿ ಹೇಳಿಬಿಡುತ್ತಾರೆ. ಯಾರು ಕೊಟ್ಟಿಲ್ಲ? ನಿಮ್ಮ ಸರ್ಕಾರ ಕೊಟ್ಟಿತ್ತೇ? ಕೇಂದ್ರ ಸರ್ಕಾರ ಕೊಟ್ಟಿದೆಯೇ? ಎಂದು ಹೀಗೆ ಮಾತನಾಡುತ್ತಾ ಹೋದರೆ ನೀವು ಜನರ ಸಮಸ್ಯೆಗೆ ಸ್ಪಂದಿಸಿದ ಹಾಗಾ? ನೀವು monthly ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ, ಅದರಲ್ಲಿ ಎಷ್ಟು ಖರ್ಚಾಗಿದೆ? ಅದನ್ನು ಹೇಳಬೇಕು.

ಪದೇ ಪದೇ Deputy Commissioner ಹತ್ತಿರ ಸುಮಾರು 200 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಿಗೆ ಹಣ P.D.Account ನಲ್ಲಿದೆ ಎಂದು ಹೇಳುತ್ತಾರೆ. ನೀವು serious ಆಗಿ D.C ಹತ್ತಿರ ಚರ್ಚೆ ಮಾಡಿ, ಯಾವ Deputy Commissioner ಹತ್ತಿರವೂ P.D. account ನಲ್ಲಿ ಹಣವಿಲ್ಲ. ಯಾವ ಹಣವಿದೆ ಎಂದರೆ, ಏನು ಅವರು ಪ್ರತಿ ತಾಲ್ಲೂಕಿಗೆ ಕೆಲಸಗಳನ್ನು ಮಂಜೂರು ಮಾಡಿ ಕೊಟ್ಟಿದ್ದಾರೆ, ಆ ಮಂಜೂರಿ ಮಾಡಿದಂಥ ಕೆಲಸ ಕೆಲವು ಮುಗಿಯುವ ಹಂತದಲ್ಲಿರುತ್ತವೆ, ಕೆಲವು ಅರ್ಧಕ್ಕೆ ಬಂದಿರುವಂಥವೂ ಇರುತ್ತವೆ, ಅದರ ಹಣ ಅಲ್ಲಿದೆಯೇ ಹೊರತಾಗಿ ಖರ್ಚಾಗದೇ ಉಳಿದ ಹಣವಲ್ಲ. ಅವರಿಗೇನು ಹಣ ಬಿಡುಗಡೆಯಾಗಬೇಕು, ಅದು ಅನೇಕ ಸಾರಿ ಕೆಲಸವಾದರೂ ಕೂಡ utilization

certification late ಆಗಿ ಬರುತ್ತದೆ. ತಿಂಗಳೋ, 15 ದಿವಸಗಳೋ, ಆದಮೇಲೆ, ಅಲ್ಲಿನ Executive Engineer, Assistant Executive Engineer ಅಥವಾ ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ನವರು Deputy Commissioner ಗೆ ಕಳುಹಿಸಿ, ಅಲ್ಲಿ consolidate ಆಗಿ ಖರ್ಚಾಗಿದೆಯೋ, ಇಲ್ಲವೋ ನೋಡಿಕೊಂಡು ಆಗ ಅದನ್ನು release ಮಾಡುತ್ತಾರೆ. ಆದರೆ, ಅವರ ಕೆಲಸಕ್ಕೆ ಸಂಪೂರ್ಣವಾಗಿ ಒಂದೊಂದು ಕೋಟಿ ರೂಪಾಯಿ allot ಮಾಡಿದ್ದು ಈಗಾಗಲೇ ಖರ್ಚಾಗಿದೆ. ನಾನೇ ಹತ್ತು ಸಲ ಕೇಳಿದ್ದೇನೆ. ಅದರ ಹಣ ನಮ್ಮಲ್ಲಿಲ್ಲವೆಂದು Deputy Commissioner ಹೇಳುತ್ತಾರೆ.

ತಾವು ಇನ್ನೊಂದು ಕೆಲಸ ಮಾಡಿದ್ದೀರಿ. ದಾವಣಗೆರೆ, ಗುಲ್ಬರ್ಗಾ, ರಾಯಚೂರು ಮತ್ತು ಬೀದರ್‌ನಲ್ಲಿ Rural Employment Guarantee Scheme ಇದ್ದಲ್ಲಿ, ಬರಗಾಲ ಕಾಮಗಾರಿಗಳನ್ನು ತೆಗೆದುಕೊಳ್ಳಬಾರದೆನ್ನುವ ಆದೇಶವನ್ನು ಕೊಟ್ಟಿದ್ದೀರಿ. ಅದರಿಂದೇನಾಗಿದೆ ಎಂದರೆ, Employment Guarantee Scheme ನಲ್ಲಿ ಯಾರು ರಿಜಿಸ್ಟರ್ ಮಾಡಿದ್ದಾರೆಯೋ ಅಥವಾ ಯಾರು ಇವತ್ತು ಪಾಸ್‌ಬುಕ್ ಗಳನ್ನು ತೆಗೆದುಕೊಂಡು, agriculture labour ಇದ್ದಾರೆ ಅಥವಾ Below Poverty Line ನಲ್ಲಿದ್ದೇವೆ ಎಂದು ಹೇಳಿ ತೆಗೆದುಕೊಂಡಿದ್ದಾರೆಯೋ, ಅಂಥವರಿಗೆ ಮಾತ್ರ Employment Guarantee Scheme applicable ಆಗುತ್ತದೆ. ಆದರೆ ಇವರು ಸಾರಾಸಗಟಾಗಿ, ಅಂಥ ಕಡೆಯೂ ಕೂಡ ನಾವು ಇದನ್ನು ಕೊಡುವುದಿಲ್ಲ. Employment Guarantee Scheme ಮೇಲೆ ಹೋಗಿ ಎಂದು ಹೇಳಿ ಹಣ ಬಿಡುಗಡೆ ಮಾಡಿಲ್ಲ. ಈ 9 ತಿಂಗಳಲ್ಲಿ ಆ ಒಂದು ಕೋಟಿ ರೂಪಾಯಿ, ಇದೊಂದು 7 ಲಕ್ಷ ರೂಪಾಯಿ ಕುಡಿಯವ ನೀರಿಗೆ ಕೊಟ್ಟಿದ್ದು ಬಿಟ್ಟರೆ ನಿಜವಾಗಲೂ ಈ ಸರ್ಕಾರ ಇವತ್ತು ಯಾವ ಹಣವನ್ನೂ ಕೂಡ ಕೊಟ್ಟಿಲ್ಲ. ಇದರ ಬಗ್ಗೆ seriousness ಇಲ್ಲ. ಬಹಳ ದೊಡ್ಡ ಅನ್ಯಾಯವನ್ನು ಈ ಸರ್ಕಾರ ಮಾಡುತ್ತಿದೆ. ಜೊತೆ ಜೊತೆಯಲ್ಲಿ ಅವರೇ ಒಪ್ಪಿಕೊಂಡಂಥ figures ಅನ್ನು ನಾನು ಕೊಡುತ್ತೇನೆ. ಈಗ ಒಟ್ಟಾರೆ Central Government ನವರು drought situation tackle ಮಾಡಲಿಕ್ಕೆ release ಮಾಡಿದ್ದು 742 ಕೋಟಿ ರೂ.ಗಳು ಅದರಲ್ಲಿ 2005-06 ದ್ದು ಈಗಾಗಲೇ ಎರಡು ವರ್ಷದ figures ಹೇಳಿದರು. ಅವರೂ ಕೂಡ ಯಾವುದು ಎಂದು ಕೇಳಿದರು. ಅದರಲ್ಲಿ Calamity Contingeency Fund ನಲ್ಲಿ 354 ಕೋಟಿ ರೂ. ಆಮೇಲೆ 2006-07 ರಲ್ಲಿ Contingency Fund ನಲ್ಲಿ ಅಂದರೆ

National Calamity Contingency Fund ನಲ್ಲಿ 384 ಕೋಟಿ ರೂ.ಗಳು ಅಂದರೆ ಒಟ್ಟಾರೆ 742 ಕೋಟಿ ರೂ. ಅದಾದ ನಂತರ ಪ್ಯಾಕೇಜ್ ಬಂತು. ಅದನ್ನು ಪ್ಯಾಕೇಜ್ ಕೊಟ್ಟಿರುವುದನ್ನು utilize ಮಾಡಲಿಕ್ಕೆ, ಯೋಜನೆಯನ್ನು ರೂಪಿಸಿ ಅದನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟು, ಆ ಹಣ ಬಿಡುಗಡೆ ಮಾಡಿಕೊಂಡು ಬರುವುದಕ್ಕೆ ಇವರಿಗೆ ಏನು ಆಗಿದೆಯೋ ಗೊತ್ತಿಲ್ಲ. ತಮಗೆ ಗೊತ್ತಿರುವಂತೆ, ವಿದರ್ಭ ಮಾದರಿಯಲ್ಲಿ UPA ಸರ್ಕಾರ 2689 ಕೋಟಿ ರೂ.ಗಳ ಪ್ಯಾಕೇಜ್ ಏನು ಘೋಷಿಸಿದೆಯೋ, ಅದರಲ್ಲಿ ಕೂಡ 361 ಕೋಟಿ ರೂ.ಗಳು ಇವತ್ತು ಬಿಡುಗಡೆಯಾಗಿದೆ. ಆದರೂ ಕೂಡ, ಪ್ಯಾಕೇಜ್ ಓದಿ ಕೆಲಸಗಳನ್ನು ಪ್ರಾರಂಭ ಮಾಡಿದ್ದನ್ನು ನಾನಂತೂ ಕಂಡಿಲ್ಲ. ಅವರು ಇದರಲ್ಲಿ ಎಷ್ಟು ಹಣ ಖರ್ಚು ಮಾಡಿದ್ದಾರೆ? ಎಂಬುದನ್ನು ಹೇಳಬೇಕು.

ಇದನ್ನು ಮೂರು ವರ್ಷಕ್ಕೋಸ್ಕರ ಕೊಟ್ಟಿದ್ದಾರೆ. ಇದನ್ನು ಮೂರು ವರ್ಷಗಳಿಗೋಸ್ಕರ ಕೊಟ್ಟರೆ, ಕನಿಷ್ಟ ಪಕ್ಷ ಈ ಹಣ ಬಂದಿದೆ, ಇದನ್ನು ಈ ಆರು district ಗಳಲ್ಲಿ ಕಾಮಗಾರಿಗಳಿಗೆ ಉಪಯೋಗ ಮಾಡೋಣ ಅಥವಾ ಕುಡಿಯುವ ನೀರಿನ ಸಮಸ್ಯೆ ಇದ್ದರೆ ಕುಡಿಯುವ ನೀರಿಗೆ ಖರ್ಚು ಮಾಡೋಣ, compentation ಕೊಡುವುದು ಇದ್ದರೆ compensation ಕೊಡೋಣ, crop compensation ಇದ್ದರೆ ಅದನ್ನೂ ಕೊಡೋಣ. ಎಂಬ ಮನೋಭಾವ ಸರ್ಕಾರಕ್ಕಿಲ್ಲ. ಇಲ್ಲವೇ drip irrigation ಇರಬಹುದು, watershed programme ಇರಬಹುದು, ಅದಕ್ಕೆ ಕೊಟ್ಟರೂ ಕೂಡ ಆ ಆರು ಜಿಲ್ಲೆಗಳಲ್ಲಿ ಅನುಕೂಲವಾಗುತ್ತದೆ. ಅದರ ಬಗ್ಗೆ ಕೂಡ ಲಕ್ಷ್ಯವಿಲ್ಲ. ಹೀಗೆ ಒಟ್ಟಾರೆ 1103 ಕೋಟಿ ರೂ. ಇವರಿಗೆ release ಆದರೂ ಕೂಡ ಎಲ್ಲಾ ಹಣ ಖರ್ಚು ಮಾಡಿಲ್ಲ. ಇದರಲ್ಲಿ ಎಷ್ಟು ಖರ್ಚು ಮಾಡಿದ್ದೇವೆಂದು Drought Monitoring Committee Chairman ಆದ Home Minister ರವರು ಹೇಳಿದ್ದಾರೆ. 494 ಕೋಟಿ has been released by the end of February 2007 to the districts for all the drought relief measures ಎಂದು ಅವರು ಹೇಳುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ :- 494 ಕೋಟಿ ರೂ.ಗಳು ಈ ಸಾಲಿನದು. ನೀವು ಎರಡೂ ಸಾಲಿನದ್ದು ಹೇಳುತ್ತಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಅದನ್ನು ಏಕೆ ಹೇಳಿದ್ದು ಎಂದರೆ,.....

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :- .....ಎರಡು ಸಾಲಿನದ್ದು ಹೇಳುತ್ತೀರಿ. ಆದರೆ ಇಲ್ಲಿ ರಿಲೀಸ್ ಮಾಡಿದ್ದು ಒಂದು ಸಾಲಿನದ್ದು 494 ಕೋಟಿ ರೂ.ಗಳು ಎಂದು ಹೇಳುತ್ತೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಸ್ವಲ್ಪ ನಾನು ಹೇಳುವುದನ್ನು ಕೇಳಿ ಸ್ವಾಮಿ. ಆ ಹಣ ನಿಮಗೇನು ಬಂತು, ಆ ಹಣವನ್ನು ಆ ವರ್ಷ ನೀವು ಖರ್ಚು ಮಾಡಲಿಲ್ಲ. ಅದು ಹಾಗೆಯೇ ಉಳಿಯಿತು. Naturally ಆ ಹಣ ಮತ್ತು ಈ ಹಣ ಸೇರಿ ಹೇಳಿದ್ದೇನೆ. ಇದು ಏಕೆ ಬಂತು ಎಂದರೆ, For example, ನೀವು ಫೆಬ್ರುವರಿಯಲ್ಲಿ ಕೊಟ್ಟಿದ್ದ ದುಡ್ಡನ್ನೇ ಕುಡಿಯುವ ನೀರಿಗೆ ಇಲ್ಲಿಯವರೆಗೂ ಕೊಡುತ್ತಿದ್ದೀರಿ. ಏನು ಆ ಹಣವನ್ನು ಏಪ್ರಿಲ್‌ನಲ್ಲಿ ಕೊಟ್ಟಿದ್ದೀರಾ? ಅದಕ್ಕಾಗಿ ಲೆಕ್ಕವನ್ನು ಹೋದ ವರ್ಷ ಮತ್ತು ಈ ವರ್ಷದ್ದು ಎರಡನ್ನೂ ತೆಗೆದುಕೊಂಡರೆ ಸರಿಯಾಗುತ್ತದೆ. ಯಾವ ಟೈಮ್‌ನಲ್ಲಿ ಹಣ ಬಿಡುಗಡೆಯಾಯಿತು ಎಂದು ನೀವು ಮಾಹಿತಿ ಕೊಡಿ. ಆ ಟೈಮ್‌ನಿಂದ ಎರಡನೇ ಕಂತು ನಿಮಗೆ ಸಿಕ್ಕಿದವರಿಗೆ ಲೆಕ್ಕ ಹಾಕಿ. ಈ ಎರಡೂ ಕೂಡ comparison ಮಾಡಿ ನೀವು expenditure ಲೆಕ್ಕ ಕೊಡಿ. ನಾವು ಬೇಡ ಎನ್ನುವುದಿಲ್ಲ. ನೀವು ಹೇಳಿದ್ದನ್ನೇ ನಾನು ಹೇಳುತ್ತಿದ್ದೇನೆ.

Legislative Council ನಲ್ಲಿ ಪ್ರಶ್ನೆಯೊಂದಕ್ಕೆ ತಾವೇ ಉತ್ತರ ಕೊಟ್ಟಿದ್ದೀರಿ. ಇದರಲ್ಲಿ 'Out of Rs. 494 crores, only Rs. 276 crores has been spent' ಎಂದು ಹೇಳಿದ್ದೀರಿ. ಅಂದರೆ, ಇದನ್ನು efficient ಎಂದು ಹೇಳೋಣವೇ? ರಾಜ್ಯದಲ್ಲಿ ಬರಗಾಲ ಇಲ್ಲವೆಂದು ತಿಳಿದುಕೊಳ್ಳೋಣವೇ? 494 ಕೋಟಿ ರೂ.ಗಳಲ್ಲಿ 276 ಕೋಟಿ ರೂ.ಗಳು ಮಾತ್ರ ಖರ್ಚಾಗಿದೆ ಎಂದು ತಾವೇ ಕೌನ್ಸಿಲ್‌ನಲ್ಲಿ ಉತ್ತರ ಕೊಡುವಾಗ ಹೇಳಿದ್ದೀರಿ. ಅಂದಾಗ ಸರ್ಕಾರ nearly ಬಿಡುಗಡೆಯಾದಂತಹ ಹಣದಲ್ಲೇ 50% ಹಣ ಖರ್ಚು ಮಾಡಿಲ್ಲವೆಂದು ಆಯಿತಲ್ಲಾ! ಅದನ್ನು ನೀವು ಒಪ್ಪಿಕೊಂಡಂತಾಯಿತು. ಇದನ್ನು ನಾವು ಕೇಳಿದರೆ ನಿಮಗೆ ಸಿಟ್ಟು ಬರುತ್ತದೆ. ಇದನ್ನು ನಾವು ಕೇಳಿದರೆ, ಹಿಂದಿನದ್ದು ಹೇಳುತ್ತೀರಿ ಮತ್ತು ಇವತ್ತಿನದು ಹೇಳಿ ಎನ್ನುತ್ತೀರಿ. ಇವತ್ತಿನದರಲ್ಲೇ ಅರ್ಧದಷ್ಟು ಹಣವನ್ನೂ ಕೂಡ ನೀವು ಖರ್ಚು ಮಾಡಿಲ್ಲವಲ್ಲಾ?

221 ಕೋಟಿ ರೂ.ಗಳು Deputy Commissioner ಗಳ ಹತ್ತಿರ PD account ನಲ್ಲಿದೆ ಎಂದು ಹೇಳುತ್ತೀರಿ. ಅದು ಇದೆಯೇ? ಕೆಲಸ ಮಾಡಿದ್ದಾರೋ,

ಇಲ್ಲವೋ ಎಂದು ಹೋಗಿ ನೋಡಿ. Utilization Certificate ಇಲ್ಲವೆಂದರೆ ಅಲ್ಲಿ ಕೆಲಸವೇ ಆಗಿಲ್ಲವೆಂದು ಅರ್ಥವಲ್ಲ. ಕೆಲಸಕ್ಕೆ allotment ಮಾಡಿ, ಬಿಡುಗಡೆ ಆಗತಕ್ಕಂಥ ಹಂತದಲ್ಲಿ ಇರತಕ್ಕಂಥ ಹಣ ಅದು. ಅದಕ್ಕೂ ಇದಕ್ಕೂ ಯಾವ ಸಂಬಂಧವೂ ಇಲ್ಲ. ಆದರೆ, ಇವರಿಗೆ ಹಣ ಅಲಾಟ್ ಮಾಡಿ ಎಂದು ಕೇಳಿದರೆ, ಪುನಃ ಆ PD account ಅನ್ನೇ ತೋರಿಸುತ್ತೀರಿ. ಇದೆಲ್ಲವೂ ಗಿಮಿಕ್. ಅಂದರೆ ಅಲ್ಲಿ DC ಹತ್ತಿರ ಹಣವಿದೆ, ಅವರು ಖರ್ಚು ಮಾಡುತ್ತಿಲ್ಲವೆಂದು ಇವರು ಪದೇ ಪದೇ ಅಧಿಕಾರಿಗಳಿಗೆ ಏಕೆ ಬಯ್ಯುತ್ತಿದ್ದಾರೆ ಗೊತ್ತೇ? ಹಣ ಬಿಡುಗಡೆ ಮಾಡತಕ್ಕಂಥ ಶಕ್ತಿ ಇವರಿಗಿಲ್ಲ, ಅದಕ್ಕಾಗಿ Deputy Commissioner ಗಳಿಗೆ ಬಯ್ಯುತ್ತಿದ್ದೀರಿ, ಅವರು ಸರಿಯಿಲ್ಲವೆಂದು ಹೇಳುತ್ತಿದ್ದೀರಿ. ಸವಾರಿ ಮಾಡತಕ್ಕಂಥವರು ಚೆನ್ನಾಗಿದ್ದರೆ, ಕುದುರೆ ತಾನೇ ಓಡುತ್ತದೆ. ನಿಮಗೆ ಕುದುರೆ ಮೇಲೆ ಕುಳಿತುಕೊಳ್ಳುವುದೂ ಗೊತ್ತಿಲ್ಲ, ಸವಾರಿ ಮಾಡುವುದೂ ಗೊತ್ತಿಲ್ಲ. ಕೆಲಸ ಮಾಡುವುದೂ ಗೊತ್ತಿಲ್ಲ.

ಅಧ್ಯಕ್ಷರು :- ಕುದುರೆ ಹೇಗಾಗಿದೆ ಎಂದರೆ, ಅದು ಹುಚ್ಚು ಕುದುರೆಯಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಹೌದು ಹಾಗಾಗಿದೆ. ಈ ಹುಚ್ಚು ಕುದುರೆ ಮೇಲೆ ಇವರು ಕುಳಿತಿದ್ದಾರೆ. ಅದು ಎಲ್ಲಿಗೆ ಬೇಕೋ ಅಲ್ಲಿಗೆ ಹೋಗುತ್ತಿದೆ. ಅದು ಇವರನ್ನು ಒಯ್ದು ಯಾವ ನದಿಗೆ ಬಿಸಾಕುತ್ತದೆಯೋ ಗೊತ್ತಿಲ್ಲ. ನಾನು ಏಕೆ ಹೇಳುತ್ತೇನೆ ಎಂದರೆ, ಇದು ಇತ್ತು. ನೀವು ಆಫೀಸರ್ ಮೇಲೆ ಹೇಳುತ್ತೀರಿ, ಆ ಆಫೀಸರ್ ಏನು ಮಾಡುತ್ತಾನೆ? ಅದೇ ಆಫೀಸರ್ ಹಿಂದೆ ಇದ್ದರು. ನಾನು ನೋಡುತ್ತಿದ್ದೇನೆ. ನನ್ನ ಕಾಲದಲ್ಲಿ, ನಾನು ಈ ಸದನಕ್ಕೆ ಕಾಲಿಟ್ಟಾಗ ಯಾರು Assistant Commissioner ಆಗಿ IAS Officer ಆಗಿ ಬಂದಿದ್ದರೋ, ಅವರು Chief Secretary ಗಳಾಗಿ ರಿಟೈರ್ ಆಗಿ ಹೋದರು. ನಾವು ಎಲ್ಲರನ್ನೂ ನೋಡದ್ದೇವೆ. ನಾವು ಅಧಿಕಾರದಲ್ಲಿದ್ದಾಗ ಹೇಗೆ behave ಮಾಡುತ್ತಾರೆ? ಇಲ್ಲದಿದ್ದಾಗ ಹೇಗೆ ಮಾಡುತ್ತಾರೆ? ನೀವು ಸ್ವಲ್ಪ powerful ಇದ್ದರೆ ಹೇಗೆ ಮಾಡುತ್ತಾರೆ? ಎಲ್ಲವೂ ನಮಗೆ ಗೊತ್ತಿದೆ. ಅದು ಅಂದ ತಕ್ಷಣವೇ, ಆ ಅಧಿಕಾರಿ ಕೆಟ್ಟವ, ಹಾಗೆ ಹೀಗೆ ಎಂದು ಹೇಳುತ್ತೀರಿ. ಅನೇಕ ಸಾರಿ ಏನಾಗುತ್ತದೆ ಎಂದರೆ, ಕೆಲಸ ಹೇಗೆ ತೆಗೆದುಕೊಳ್ಳಬೇಕು ಎನ್ನುವುದೇ ನಿಮಗೆ ಗೊತ್ತಿರುವುದಿಲ್ಲ. ಅನೇಕ ಅಧಿಕಾರಿಗಳಿಗೆ ಹುಮ್ಮಸ್ಸು ಇರುತ್ತದೆ, ಉತ್ಸಾಹ ಇರುತ್ತದೆ, ಅವರಿಗೆ ನೀವು ಟೈಮ್ ಪ್ರಕಾರ ಹಣ ಬಿಡುಗಡೆ ಮಾಡುವುದಿಲ್ಲ.

ಕೆಲವು ಸಲ ಅಧಿಕಾರಿಗಳು out of the way ಹೋಗಿ, ಜನರನ್ನು ಬದುಕಿಸುವುದಕ್ಕೋಸ್ಕರ ಕುಡಿಯುವ ನೀರಿನಗೋಸ್ಕರ ಹಣ ಬಿಡುಗಡೆ ಮಾಡುತ್ತಾರೆ. ಆಗ ಅವರಿಗೆ, 'ನೀನು ಹಣ ಹೇಗೆ ಬಿಡುಗಡೆ ಮಾಡಿದೆ? ನೀನು ಅದನ್ನು ಯಾರಿಗೆ ಕೇಳಿ ಕೊಟ್ಟೆ? ಕೊಡಬೇಕೆಂದು ಯಾವ ರೂಲ್ಸ್‌ನಲ್ಲಿದೆ?' ಎಂದೂ ಕೂಡ ಕೆಲವರು ಕೇಳುವವರಿದ್ದಾರೆ. ಅದಕ್ಕಾಗಿ ಅವರು 'ಇವರು ರೂಲ್ಸ್ ಕೇಳುತ್ತಾರೆ, ಇವರ ಮಾತು ಕೇಳದಿದ್ದರೆ, ನೀನು ರೂಲ್ಸ್ ಪ್ರಕಾರ ಏಕೆ ಮಾಡಿಲ್ಲ?' ಎಂದು ಹೆದರಿಕೊಳ್ಳುತ್ತಾರೆ. ಅಂದರೆ ಹೇಗೆ ಬೇಕೋ ಹಾಗೆ ತಿರುಚಿಕೊಳ್ಳುವುದು, ಹೇಗೆ ಬೇಕೋ ಹಾಗೆ ಹೆದರಿಸಿಕೊಳ್ಳುವುದು, ಇಲ್ಲವೇ ಕೆಲವು ಕಾನೂನು ಬಾಹಿರವಾದ ಕೆಲಸಗಳನ್ನು ಮಾಡಿ ಎಂದು ಹೇಳುವುದು ನಡೆದಿದೆ. ಏಕೆಂದರೆ, ಆಗ ಅವರಿಗೆ ಅದು ಬೇಕಾಗಿರುತ್ತದೆ. ನೀವು ಯಾವಾಗಲೂ ಕೂಡ ಅಧಿಕಾರಿಗಳಿಗೆ ಉತ್ತೇಜಿಸಬೇಕು. ನಿನ್ನಲ್ಲಿ commitment ಇದೆ ಅವರಿಗೆ ಹೇಳಬೇಕು. ಜನರಿಗಾಗಿ in good faith ಕೆಲಸ ಮಾಡಿದ್ದರೆ, ಅದನ್ನು ಬೆಂಬಲಿಸಬೇಕು. ನೀವು ಎಲ್ಲಾ ಕಾನೂನುಗಳನ್ನು ತಂದಿದ್ದೀರಿ. ಅನೇಕ ಅಧಿಕಾರಿಗಳು in good faith, if they done the work, they should not be punished. ಅಂದರೆ ಯಾವುದೇ ಅಧಿಕಾರಿ ಒಳ್ಳೆಯ ನಂಬಿಕೆಯಿಂದ ಮತ್ತು ನಿಷ್ಠೆಯಿಂದ ಮಾಡಿದ್ದರೆ ಅಥವಾ ಒಳ್ಳೆಯ ಉದ್ದೇಶದಿಂದ ಮಾಡಿದ್ದರೆ, ಅಂತಹವರಿಗೆ ಶಿಕ್ಷೆ ಮಾಡಬಾರದು. ನಾವು ಕಾನೂನುಗಳನ್ನು ಪಾಸ್ ಮಾಡುತ್ತೇವೆ, ಕಾನೂನಿನಲ್ಲಿ ಅದಕ್ಕೆ ಪ್ರೊವಿಸನ್ ಮಾಡುತ್ತೇವೆ. ಆದರೆ ಅನೇಕ ಸಾರಿ ಒಳ್ಳೆಯ ಅಧಿಕಾರಿಗಳು ಆ ನಿಮ್ಮ ಗೈಡ್‌ಲೈನ್ಸ್ follow ಮಾಡಿದರೆ, 'ನೀನು ಕೋಲಾರದಿಂದ ಶಿಕ್ಷಕಿಯನ್ನು ಏಕೆ trans`er ಮಾಡಲಿಲ್ಲ?' ಅವನ ಮೇಲೆ Action ತೆಗೆದುಕೊಳ್ಳಿ ಎಂದು ಹೇಳುತ್ತೀರಿ. ನಿಮ್ಮ ಗೈಡ್‌ಲೈನ್ಸ್ ಆ ರೀತಿ ಇದೆ ಅವನೇನು ಮಾಡಲು ಸಾಧ್ಯ? ಇಲ್ಲ, ನೋಡಪ್ಪ ನಿನಗೆ discretion ಕೊಡುತ್ತೇನೆ, You use this discretion judiciously in the interest of people, in drought monitoring works ಎಂದು ಹೇಳಿ ನೀವು ಕೊಟ್ಟರೆ, ಖಂಡಿತವಾಗಿಯೂ ಅವರು ಮಾಡುತ್ತಾರೆ.

ನಿಜವಾಗಿಯೂ ಆತ ತಪ್ಪು ಮಾಡಿದ್ದರೆ, currupt ಇದ್ದರೆ, ಮನೆಗೆ ಕಳುಹಿಸಿ. ಅದನ್ನು ಬಿಟ್ಟು, ನಿಮಗೆ ಆಫೀಸರ್ಸ್ ಮೇಲೆ ವಿಶ್ವಾಸವಿಲ್ಲ, ಶಾಸಕರ ಮೇಲೂ ವಿಶ್ವಾಸವಿಲ್ಲ. ಏಕೆಂದರೆ, Task Force Committee ಗಳನ್ನು ಮಾಡಿದ್ದೀರಿ ಅದಕ್ಕೇನು ಅಧಿಕಾರ ಇಲ್ಲ, ದುಡ್ಡಿಲ್ಲ, ಏನೂ ಇಲ್ಲ. ನಿಮಗೆ ಖುಷಿ ಬಂದಂತೆ

ಎಲ್ಲರಿಗೂ ಹಣ ಹಂಚಿಕೊಳ್ಳುತ್ತಾ ನಡೆದಿದ್ದೀರಿ. ಬಜೆಟ್‌ಗೇನೂ ಬೆಲೆಯೇ ಇಲ್ಲ. ಯಾರ ಕೈಯಲ್ಲಿ discretionary powers ಇದೆ ಅಥವಾ discretionary ಲೆಕ್ಕದಲ್ಲಿ ಕೊಡತಕ್ಕಂಥ ಹಣವಿದೆ, ಅದನ್ನು ಅವರಿಗೆ ಹೇಗೆ ಬೇಕೋ ಆ ರೀತಿ ಕೊಡುತ್ತಿದ್ದಾರೆ. ಮಾನ್ಯ ನಾಗರಾಜು ಶೆಟ್ಟರು ತಮಗೆ ಖುಷಿ ಬಂದಂತೆ ಗುಡಿಗಳಿಗೆ ಹಂಚುತ್ತಿದ್ದಾರೆ. ರೋಡ್‌ಗಳಿಗೆ ತಮಗೆ ಖುಷಿ ಬಂದಂತೆ ಮಾನ್ಯ ರೇವಣ್ಣನವರು ಹಂಚುತ್ತಿದ್ದಾರೆ. Rural Development Minister ಕೂಡ ಕುಡಿಯುವ ನೀರಿಗೆ, ಸಣ್ಣ ಪುಟ್ಟ ರಸ್ತೆಗಳಿಗೆ ಅವರಿಗೆ ಖುಷಿ ಬಂದಂತೆ ಅವರು ಕೊಡುತ್ತಿದ್ದಾರೆ. Chief Minister ರವರು ಪಟ್ಟಣಗಳಿಗೆ ದುಡ್ಡು ಹಂಚುವುದಿದ್ದರೆ, ಅವರಿಗೆ ಇಷ್ಟ ಬಂದಂತೆ ಹಂಚುತ್ತಿದ್ದಾರೆ. ನಾವೆಲ್ಲಾ ನೋಡಿದ್ದೇವಲ್ಲಾ? ಹೊಳೆನರಸೀಪುರಕ್ಕೆ 1 $^1/_2$ ಕೋಟಿ ರೂ.ಗಳು ರಾಮನಗರಕ್ಕೆ 3 ಕೋಟಿ ರೂ.ಗಳು, ಇನ್ನೊಂದಕ್ಕೆ 2 ಕೋಟಿ ರೂ.ಗಳು, ಹೀಗೆ ಕೊಡುತ್ತಿದ್ದಾರೆ. ನೀವು ಕೊಟ್ಟದೆಲ್ಲದರ ಪಟ್ಟಿ ತೆಗೆದರೆ, ಜೆಡಿ(ಎಸ್) ಮತ್ತು ಬಿ.ಜೆ.ಪಿ. ಎಂಎಲ್‌ಎಗಳು ಎಲ್ಲಿದ್ದಾರೋ, ಅಲ್ಲಿಗೆ ಮಾತ್ರ ಹಣ ಕೊಡುತ್ತಿದ್ದೀರಿ, ಬೇರೆ ಕಡೆಗೆ ನೀವು ಗಮನವನ್ನೇ ಕೊಟ್ಟಿಲ್ಲ. ಅವರೇನು ಪಾಪ ಮಾಡಿದ್ದಾರೆ?

Alright ನಿಮ್ಮ ದೃಷ್ಟಿಯಿಂದ ನಾವು ವಿರೋಧ ಪಕ್ಷದ ಶಾಸಕರುಗಳು ಇರಬಹುದು. ಆದರೆ ಅಲ್ಲಿರುವ ಜನ ನಿಮಗೆ ನಾಲ್ಕಾಣಿಯಾದರೂ ಓಟು ಕೊಟ್ಟಿಲ್ಲವೇ? 30-40 % ಓಟು ಕೊಟ್ಟಿರುವವರು ಜನರಲ್ಲವೇ? ಅವರು ಟ್ಯಾಕ್ಸ್ ಕೊಟ್ಟಿಲ್ಲವೇ? ಇಲ್ಲಿ ಮಾನವೀಯತೆಯ ದೃಷ್ಟಿ ಇರಬೇಕು. ಬೇಕಾದರೆ ನನ್ನ ಮೇಲೆ ಏನಾದರೂ ಅಸೂಯೆ ಇದ್ದರೆ, ನಾನು ಪರ್ಸ್‌ನಲ್ ಕೆಲಸಕ್ಕೆ ನಿಮ್ಮ ಹತ್ತಿರ ಏನಾದರೂ ಬಂದಿದ್ದರೆ, ಏನಾದರೂ ನಿಮ್ಮಿಂದ ಫೇವರ್ ಕೇಳಿದ್ದರೆ, ನೀವು ಅದನ್ನು ಮಾಡಬೇಡಿ. 'ನಮ್ಮ ಮಕ್ಕಳಿಗೆ appointment ಕೊಡಿ' ಎಂದು ಕೇಳಿದ್ದರೆ, ಅದನ್ನು ನೀವು ಮಾಡಬೇಡಿ.' 'ನಮಗೆ ಸೈಟು ಕೊಡಿ' ಎಂದರೆ ನೀವು ಅದನ್ನು ಮಾಡಬೇಡಿ ಅಥವಾ 'ನಮಗೆ ಜಮೀನು ಕೊಡಿ' ಎಂದು ಕೇಳಿದರೆ, ನೀವು ಅದನ್ನು ಮಾಡಬೇಡಿ. ವೈಯಕ್ತಿಕವಾಗಿ ನಾವೇನಾದರೂ ನಿಮ್ಮ ಹತ್ತಿರ favour ಕೇಳಲಿಕ್ಕೆ ಬಂದರೆ, ನೀವು ನಮಗೆ ಅದನ್ನು deny ಮಾಡಿ. ನಾವು ಬರುವುದಿಲ್ಲ. 36 ವರ್ಷದ ಅನುಭವದಲ್ಲಿ ಯಾರು ಏನೆಂಬುದು ನನಗೆ ಗೊತ್ತಿದೆ. ಮತ್ತೆ ಯಾವಾಗ ಬಂದರೇನು ಮತ್ತು ಯಾರ ಕೈ ಹೇಗೆ ಎಂಬುದೆಲ್ಲವನ್ನು ನಾವು ಲೆಕ್ಕ ಹಾಕಿಕೊಂಡು ಮತ್ತು ಸ್ವಲ್ಪ ಮಾರ್ಜಿನ ಇಟ್ಟುಕೊಂಡೇ ನಾವು ಕೆಲಸವನ್ನು ಮಾಡಿದ್ದೇವೆಂದು ನಮಗೆ ಸ್ವಲ್ಪ ನೈತಿಕ ಧೈರ್ಯ ಇದೆ.

ಅದು ಇರಲಿ ಬಿಡಿ. ಆದರೆ, ನಾನು ಹೇಳತಕ್ಕಂಥದ್ದು ಏನೆಂದರೆ, ಜನರು ಕುಡಿಯುವ ನೀರಿಗಾಗಿ ಮತ್ತು ಕೆಲಸಕ್ಕಾಗಿ ಅವರು ಮರುಗಬೇಕೇ? ನಿಮ್ಮ ಮರ್ಜಿ ಮೇಲೆ ಅವರು ಇರಬೇಕೇ? ಇದರ ಬಗ್ಗೆ ನೀವು ಚಿಂತನೆ ಮಾಡಿ. ಮಾನ್ಯ ದೇವರಾಜ ಅರಸುರವರ ಕಾಲದಲ್ಲಿ ನಾನು ಇದೇ ಸದನದಲ್ಲಿ ವಿರೋಧಪಕ್ಷದ ಕಡೆ ಡೆಪ್ಯುಟಿ ಲೀಡರ್ ಆಗಿದ್ದೆ. ಮಾನ್ಯ ಬೊಮ್ಮಾಯಿಯವರು ರೆವಿನ್ಯೂ ಮಿನಿಸ್ಟರ್ ಆಗಿದ್ದರು. ಆ ಸಂದರ್ಭದಲ್ಲಿ ನಾವು ಬರಗಾಲದ ಬಗ್ಗೆ ಸಾಕಷ್ಟು ಚರ್ಚೆ ಮತ್ತು ಗಲಾಟೆ ಮಾಡಿ ಒಂದು ಹೌಸ್ ಕಮಿಟಿ ಮಾಡಬೇಕೆಂದು ಡಿಮಾಂಡ್ ಮಾಡಿದೆವು. "ಖರ್ಗೆಯವರು ಹಿಂದೆ ರೆವಿನ್ಯೂ ಮಿನಿಸ್ಟರ್ ಆಗಿದ್ದರು, ಮತ್ತೆ ಇದರ ಬಗ್ಗೆ ಅನುಭವ ಇದೆ. ಆದ್ದರಿಂದ ಒಂದು ಹೌಸ್ ಕಮಿಟಿ ಮಾಡಿ ಅದಕ್ಕೆ ಅವರನ್ನೆ ಅಧ್ಯಕ್ಷನಾಗಿ ಮಾಡಿ ಕಳುಹಿಸುತ್ತೇನೆ" ಎಂದು ಆಗ ಅವರು ನೇರವಾಗಿ ಹೇಳಿದರು. ಆಗ ನಾವು ಇಡೀ ರಾಜ್ಯವನ್ನು ಎರಡು ತಿಂಗಳ ಕಾಲ ತಿರುಗಿ ಒಂದು ರಿಪೋರ್ಟ್‌ನ್ನು ಕೊಟ್ಟೆವು. ಅದರ ಪ್ರಕಾರ ಹಂತ ಹಂತವಾಗಿ ಹಣವನ್ನೂ ಸಹ ಬಿಡುಗಡೆ ಮಾಡಿದರು.

ಈಗ ನಾವು ಕೇಳಿದರೆ ಹಣ ಕೊಡುತ್ತಿಲ್ಲ, ಇದರ ಬಗ್ಗೆ ಕಮಿಟಿ ಮಾಡುವುದನ್ನು ಬಿಡಿ, ಕುಡಿಯುವ ನೀರಿಗಾಗಿ ಹಣವನ್ನು ಬಿಡುಗಡೆ ಮಾಡಿ ಎಂದರೆ, ನಾವು ಮಾಡುವುದಿಲ್ಲ, ನಿಮ್ಮ ಕೇಂದ್ರ ಸರ್ಕಾರ ಕೊಟ್ಟಿದೆಯೇ ಎಂದು ಕೇಳುತ್ತಾರೆ. ಅಂದರೆ, ನಾನು ನೀರು ಕುಡಿಯ ಬೇಕಾದರೆ ಕೇಂದ್ರ ಸರ್ಕಾರದಿಂದ ಹಣ ತಂದು ಕುಡಿಯಬೇಕೆ? ಅಥವಾ ಕೆಲಸ ಬೇಕಾದರೆ ಫುಡ್ ಗ್ರೈನ್ಸ್ ರಿಲೀಸ್ ಮಾಡಿದ್ದಾರೆಯೇ ಎಂದು ಕೇಳುತ್ತಾರೆ. ಇಂಥ ಸರ್ಕಾರವನ್ನು ನಾನಂತೂ ನೋಡಿಲ್ಲ. ಬಹುಶಃ ಹೊಸದಾಗಿ ಬಂದಿದ್ದಾರೆ. ಆದರೆ, ಅವರಿಗೆ ಅನುಭವ ಇಲ್ಲ ಎಂದರೆ ಅವರಿಗೆ ಸಿಟ್ಟು ಬರುತ್ತದೆ. ಏಕೆಂದರೆ, ನಮಗೆ ಗೊತ್ತಿಲ್ಲದೇ ಇದ್ದರೂ ಕೂಡ ತಿಳಿದುಕೊಳ್ಳಬೇಕಾಗುತ್ತದೆ. ಕೆಲವು ಸಲ ನಮಗೆ ನಿಜವಾಗಿಯೂ ಕೂಡ ಗೊತ್ತಿರುವುದಿಲ್ಲ. ನಮಗಿಂಥ ಬಹಳ ಒಳ್ಳೆಯ ರೀತಿಯಲ್ಲಿ ಮಾನ್ಯ ಎಂ.ಪಿ. ಪ್ರಕಾಶ್‌ರವರು ಮಾತನಾಡುತ್ತಾರೆ. fruitful debates ಮಾಡುವುದಕ್ಕೆ ನೀವು ಒಳ್ಳೆಯ ಸ್ಪೀಕರ್ ಆಗಿದ್ದೀರಿ. ಏಕೆಂದರೆ, ನೀವು ಎಲ್ಲಾ ಅಂಶಗಳನ್ನು ಕೋಟ್ ಮಾಡುತ್ತೀರಿ ಮತ್ತೆ ಯಾವುದಾದರೂ precedents ಇತ್ತೆಂದರೆ, ಒಬ್ಬ ಒಳ್ಳೆಯ ವಕೀಲ ತನ್ನ ಕೇಸನ್ನು ಯಾವ ರೀತಿಯಾಗಿ ಪ್ರಿಪೇರ್ ಮಾಡಿಕೊಂಡು ಕೋರ್ಟ್‌ಗೆ ಹೋಗುವ ಹಾಗೆ ಮಾನ್ಯ ಪ್ರಕಾಶ್‌ರವರು ಸದನಕ್ಕೆ ಬರುವಾಗ ಅವೆಲ್ಲದರ ಬಗ್ಗೆ ಕೇರ್‌ಫುಲ್

ಆಗಿ ಪ್ರಿಪೇರ್ ಮಾಡಿಕೊಂಡು ತಮ್ಮ ಮಿನಿಸ್ಟ್ರಿಯಲ್ಲಿ ಕ್ಲೈಂಟ್ಸ್ ಹತ್ತಿರ ಬ್ರೀಫ್ ತೆಗೆದುಕೊಂಡು ಬರುತ್ತಾರೆ. ಮಾನ್ಯ ಪ್ರಕಾಶ್‌ರವರೆ, 29 ನೇ ತಾರೀಖಿನ ದಿವಸ ಒಳ್ಳೆಯ ರೀತಿಯಲ್ಲಿ ಲಗ್ನ ಆಗುತ್ತದೆ. ಆದ್ದರಿಂದ ಅವರ ಜೊತೆ ತಾವು ಏನು ಚರ್ಚೆ ಮಾಡುತ್ತೀರಿ?

(ಈ ಹಂತದಲ್ಲಿ ಮಾನ್ಯ ಎಂ.ಪಿ. ಪ್ರಕಾಶ್‌ರವರು ಮತ್ತು ಮಾನ್ಯ ಬಸವರಾಜ್ ಹೊರಟ್ಟಿಯವರು ಮಾತನಾಡುತ್ತಾ ಕುಳಿತುಕೊಂಡಿದ್ದರು)

ಇರಲಿ ಬಿಡಿ. ಮಾನ್ಯ ಪ್ರಕಾಶ್‌ರವರೆ, ನಿಮ್ಮ ಕ್ಲೈಂಟ್ಸ್ ಬಗ್ಗೆ ಚೆನ್ನಾಗಿ ಬ್ರೀಫ್ ಮಾಡಿಕೊಂಡು ಬರುತ್ತೀರೆಂದು ಹೇಳುತ್ತಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಯಾವ ಲಗ್ನವೆಂದು ನಮಗೂ ಸಹ ಗೊತ್ತಾಗಲಿ. ದಯವಿಟ್ಟು ಕ್ಲಾರಿಫೈ ಮಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನಿಮಗೆ ಏಕೆ? ಅದು ನಿಮಗೆ ಸಂಬಂಧಪಡುವುದಿಲ್ಲ ಬಿಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಅವರಿಬ್ಬರು ಮಾತನಾಡುವುದನ್ನು ನೋಡಿ 29 ನೇ ತಾರೀಖಿನ ದಿವಸ ಲಗ್ನವೆಂದು ಹೇಳಿದ್ದೀರಿ. ಆದ್ದರಿಂದ, ಏನು ಲಗ್ನವೆಂದು ನಾನು ಕೇಳಿದೆಯಷ್ಟೇ?

ಶ್ರೀ ಕೆ. ಶ್ರೀನಿವಾಸ ಗೌಡ :- ನಿಮ್ಮ ಹೆಂಡತಿಯ ಜ್ಯವೆಲ್ಸ್ ಎಷ್ಟಿದೆ ಎಂದು ಡಿಕ್ಲೇರ್ ಮಾಡಿಲ್ಲವೆಂದು ಮಾನ್ಯ ಶ್ರೀರಾಮರೆಡ್ಡಿಯವರಿಗೆ ಲೋಕಾಯುಕ್ತರವರು ನೋಟೀಸ್ ಕೊಟ್ಟಿದ್ದಾರೆ. ಆದ್ದರಿಂದ, ಇವರು ಆ ಮಾಹಿತಿಯನ್ನು ಕೊಡಬೇಕಲ್ಲವೇ? ಯಾರಿಗಾದರೂ ಜ್ಯವೆಲ್ಸ್ ಕೊಟ್ಟಿದ್ದರೆ, ಅದನ್ನಾದರೂ ಹೇಳಬೇಕಲ್ಲವೇ?

ಶ್ರೀ ಕೆ.ಆರ್. ರಮೇಶ್ ಕುಮಾರ್ :- ಮಾನ್ಯ ಶ್ರೀನಿವಾಸ ಗೌಡರು ಡ್ಯಾಮೇಜಿಂಗ್ ಸ್ಟೇಟ್‌ಮೆಂಟ್ ಮಾಡುತ್ತಿದ್ದಾರೆ. ಹೆಂಡತಿಯೆಂದು ಅವರು ಕೇಳಿಲ್ಲ. ಜ್ಯುವೆಲ್ಸ್ ಮಾಹಿತಿ ಕೊಟ್ಟಿಲ್ಲವೆಂದು ಹೇಳಿದ್ದಾರಷ್ಟೇ. ಅದನ್ನು ಯಾರಿಗಾದರೂ ಕೊಟ್ಟಿರಲಿ, ಒಟ್ಟಿನಲ್ಲಿ ಸತ್ಯ ಹೇಳಬೇಕಷ್ಟೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನಾನು ಖರ್ಗೆಯವರಿಗೆ ಕೇಳುವುದೇನೆಂದರೆ, 29 ನೇ ತಾರೀಖಿನ ದಿವಸ ಎಂದು ಅವರು ಡೇಟ್ ಕೂಡ ಹೇಳುತ್ತಿದ್ದಾರೆ. ಆದ್ದರಿಂದ, ಅದು ಯಾವ ಲಗ್ನ, ಎಲ್ಲಿ ಲಗ್ನವಾಗುತ್ತದೆಂದು ನಮಗೆ ಹೇಳಿದರೆ ನಮಗೂ ಕೂಡ

ಸ್ವಲ್ಪ ಗೊತ್ತಾಗಲೆಂದು ಕೇಳಿದೆನಷ್ಟೆ. ಮಾನ್ಯ ಎಂ.ಪಿ. ಪ್ರಕಾಶ್ ಮತ್ತು ಮಾನ್ಯ ಬಸವರಾಜ್ ಹೊರಟ್ಟಿಯವರು ಮಾತನಾಡುತ್ತಿರುವಾಗ 29 ನೇ ತಾರೀಖಿನ ದಿವಸ ಲಗ್ನವಾಗುತ್ತದೆ, ಆಗ ಮಾತನಾಡಿಕೊಳ್ಳಿ. ಈಗ ಏಕೆ ಮಾತನಾಡಿಕೊಳ್ಳುತ್ತೀರೆಂದು ಹೇಳುತ್ತಿದ್ದಾರೆ. ಲಗ್ನದ ಡೇಟ್ ಕೂಡ ಹೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಜ್ಯುವೆಲ್ಸ್ ಬಗ್ಗೆ ಮೊದಲು ಕ್ಲಿಯರ್ ಮಾಡಿ. ಏಕೆಂದರೆ, ಪೊಲೀಸ್‌ನವರು ಬಂದು ಹಿಡಿದುಕೊಂಡು ಹೋದಾರು. ಲೋಕಾಯುಕ್ತರಿಗೆ ಮಾಹಿತಿ ಇಲ್ಲದಿದ್ದರೆ ನೋಟೀಸ್ ಏಕೆ ಕೊಡುತ್ತಾರೆ? ಏನಾದರೂ ಇರಬೇಕು ಅನಿಸುತ್ತೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಜ್ಯುವೆಲ್ಸ್ ಮಾಹಿತಿ ಕೊಟ್ಟಿಲ್ಲವೆಂದು ಹೇಳಿದ್ದಾರಷ್ಟೇ.

ಶ್ರೀ ಸಿದ್ಧರಾಮಯ್ಯ :- ಮದುವೆಯಾಗಿರುವವರು ಮಾತ್ರ ಜ್ಯುವೆಲ್ಸ್ ಮಾಹಿತಿ ಕೊಡಬೇಕೆಂದು ಎಲ್ಲಿದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ, ನಾನು ಹೇಳುವುದೇನೆಂದರೆ, ಯಾವಾಗಲೂ ಕೂಡ ಇಂಥ ಚರ್ಚೆಗಳು dispassionate ಆಗಿರಬಾರದು, judicious ಆಗಿರಬೇಕು. ಇದು ಬರಗಾಲದ ಕೆಲಸ, ಜನರು ಮತ್ತು ಜಾನುವಾರುಗಳು ಬದುಕಬೇಕಾಗಿರತಕ್ಕಂಥ ಪ್ರಶ್ನೆಯಾಗಿದೆ. ಆದ್ದರಿಂದ, ನಾವೆಲ್ಲರೂ ಸೇರಿ ಇಂಥ ಚರ್ಚೆಯಲ್ಲಿ ಒಂದಾಗಿ ಕೆಲಸ ಮಾಡಿದರೆ ಮಾತ್ರ ಏನಾದರೂ ಜನರು ಸ್ವಲ್ಪ ಪುಣ್ಯವನ್ನಾದರೂ ಕೊಡುತ್ತಾರೆ. ಇಲ್ಲದಿದ್ದರೆ ನಾವುಗಳು ಪ್ರತಿಯೊಂದರಲ್ಲಿಯೂ ರಾಜಕೀಯ ಮಾಡಿಕೊಂಡು ಹೋದರೆ ಕಷ್ಟವಾಗುತ್ತದೆ. ಇದು ಸರಿಯೂ ಕೂಡ ಅಲ್ಲ ಮತ್ತೆ ಇವರು ಮಾಡತಕ್ಕಂಥದ್ದನ್ನು ನೋಡಿ ಮುಂದಿನ ಪೀಳಿಗೆಯವರು ಕಲಿತರೆ ಅದು ಈ ರಾಜ್ಯಕ್ಕೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ, ನಾನು ಕೇಳುವುದೇನೆಂದರೆ, ಅವರ ಮಾಹಿತಿ ಪ್ರಕಾರ 134 ತಾಲ್ಲೂಕಿನಲ್ಲಿ ಬರಗಾಲವಿದೆ ಎಂದು ಹೇಳಿದ್ದಾರೆ. ಆದ್ದರಿಂದ, ಕನಿಷ್ಟಪಕ್ಷ ಒಂದೊಂದು ತಾಲ್ಲೂಕಿಗೆ 1 ಕೋಟಿ ರೂಪಾಯಿಗಳಾದರೂ ಕುಡಿಯುವ ನೀರಿಗೆ ಬಿಡುಗಡೆ ಮಾಡಿ. ಏಕೆಂದರೆ, ನೀವು ಬಜೆಟ್‌ನಲ್ಲಿ ಆಶ್ವಾಸನೆ ಇಲ್ಲದೇ ಇದ್ದರೂ ಸಹ 204 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಬರಗಾಲ ಪೀಡಿತ 134 ತಾಲ್ಲೂಕುಗಳಲ್ಲಿ ಹೆಚ್ಚು ಕಡಿಮೆ 4.5 ಕೋಟಿ ಜನಗಳಿಗೆ 100 ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿಗೆ ಖರ್ಚು

ಮಾಡಿ. ಕನಿಷ್ಠ ಒಂದೊಂದು ತಾಲ್ಲೂಕಿಗೆ 2 ಕೋಟಿ ರೂಪಾಯಿಗಳನ್ನಾದರೂ ಬಿಡುಗಡೆ ಮಾಡಿ.

ಎನ್‌ಸಿಸಿಎಫ್ ಮತ್ತು ಸಿಆರ್‌ಎಫ್ ಹಾಗೂ ನಿಮ್ಮ ಫಂಡ್ ಇರಬಹುದು. ಈ ಎಲ್ಲಾ ಫಂಡ್ ಇಲ್ಲದಿದ್ದರೂ ಕೂಡ ನೀವು ಈಗ ಓರಲ್ ಆಗಿ ಡಿಕ್ಲೇರ್ ಮಾಡಿರುವಂಥ ಕೆಲಸಗಳನ್ನು ಈಗ ಸ್ವಲ್ಪ ನಿಲ್ಲಿಸಿ, ಇಲ್ಲಿ ಜನರನ್ನು ಬದುಕಿಸುವಂಥ ಕೆಲಸವನ್ನು ಮಾಡಿ. ಮತ್ತೆ ಜಾನುವಾರುಗಳ ಮೇವಿಗಾಗಿ ವಿಶೇಷವಾಗಿ ಕನಿಷ್ಠ 15–20 ಕೋಟಿ ಹಣವನ್ನು ಬಿಡುಗಡೆ ಮಾಡಿ. ಮತ್ತೆ ಮೇವು ಬೆಳೆಸುವ ಬಗ್ಗೆ ಹೇಳುವುದಾದರೆ, ಇವತ್ತಿನ ದಿವಸ ಅನೇಕ ಕಡೆ ಹುಲ್ಲು ಸಿಗುತ್ತಿಲ್ಲ. ಆದ್ದರಿಂದ ನದಿ ದಂಡೆಯಲ್ಲಿ, ಅಂದರೆ ವಿಶೇಷವಾಗಿ ಡ್ಯಾಂ ಕೆಳಗಡೆ ಅಥವಾ ಎಲ್ಲೆಲ್ಲಿ ಸಣ್ಣಮಟ್ಟ ಕೆರೆಗಳಿವೆ ಅಂಥ ಕಡೆ ನೀರಿದ್ದಲ್ಲಿ ಮೇವು ಬೆಳೆಸುವುದಕ್ಕೆ ನೀವು ಪ್ರಯತ್ನ ಮಾಡಿ. ಮತ್ತೆ ಅಲ್ಲಿಗೂ ಕೂಡ ಹಣ ಬಿಡುಗಡೆ ಮಾಡತಕ್ಕಂಥಾದ್ದು ಮತ್ತು ಬೀಜ ಕೊಡತಕ್ಕಂಥ ಕೆಲಸ ಕೂಡ ಆಗಬೇಕು. ಮತ್ತೆ ಅನೇಕ ಕಡೆ ಟ್ರಾನ್ಸ್‌ಪೋರ್ಟೇಶನ್‌ಗೆ ಹಣ ಇಲ್ಲವೆಂದು ಕೆಲವು ಕಡೆ ನಿಲ್ಲಿಸಿದ್ದಾರೆ. 10–20 ಟ್ಯಾಂಕರ್ ಬಳಸುವ ಕಡೆ ಜನರಿಂದ ಎಲ್ಲಿ ಕ್ರಿಟಿಸಿಸಂ ಬರುತ್ತದೆಂದು ಅಂಥ ಕಡೆ 2–3 ಟ್ಯಾಂಕರ್‌ಗಳನ್ನು ಕಳುಹಿಸುತ್ತಿದ್ದಾರೆ. ಮತ್ತೆ ಅಲ್ಲಿ ನೀರಗಾಗಿ ಜಗಳ ಮತ್ತು ಹೊಡೆದಾಟ ನಡೆಯುತ್ತಿದೆ.

ಕೆಲವು ಊರುಗಳಲ್ಲಿ ನಾನು, ನೀನು ಎಂದು ನೀರು ತರತಕ್ಕಂಥ ಟ್ಯಾಂಕರ್ ಡ್ರೈವರ್‌ಗೆ ಹೊಡೆದಿರತಕ್ಕಂಥ ಉದಾಹರಣೆಗಳಿವೆ. ದಯವಿಟ್ಟು ಕುಡಿಯುವ ನೀರಿಗಾಗಿ ಮತ್ತು ಕೆಲಸಕ್ಕಾಗಿ ಹಾಗು ಜಾನುವಾರುಗಳ ಔಷಧಕ್ಕಾಗಿ ಮತ್ತೆ ಮೇವಿಗಾಗಿ ಸೇರಿ ತಕ್ಷಣ 300–350 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ. ಈ ಎರಡು ತಿಂಗಳಲ್ಲಿ ಇದರ ಅವಶ್ಯಕತೆ ಇದೆ. ಈ ಒಂದೂವರೆ ತಿಂಗಳಲ್ಲಿ ಹಾಗೂ–ಹೀಗೂ ಕೆಲಸ ಮಾಡದೆ ಸಮಯವನ್ನು ಕಳೆದಿದ್ದೀರಿ. ಆದ್ದರಿಂದ, ಕನಿಷ್ಠ ಈಗಲಾದರೂ warfooting ನಲ್ಲಿ ಕೆಲಸವನ್ನು ಮಾಡಬೇಕಾಗುತ್ತದೆ. ಏಕೆಂದರೆ, ಯಾವುದೇ ಕೆಲಸವನ್ನು ನೀವು warfooting ನಲ್ಲಿ ಮಾಡದಿದ್ದರೆ ಖಂಡಿತವಾಗಿ ಆ ಜನರಿಗೆ ಇದು ತಲುಪುವುದಿಲ್ಲ. ಇನ್ನೊಂದು ನನ್ನ ಸಲಹೆ ಏನೆಂದರೆ, ಜಿಲ್ಲೆಯನ್ನು ಮಾನಿಟರ್ ಮಡುವುದಕ್ಕೆ ಸೆಕ್ರೆಟರಿ ಎಂದು ಏನು ಮಾಡಿದ್ದಾರೆಯೋ ಅವರು ಅಲ್ಲಿಯೇ ಇದ್ದು ಇವೆಲ್ಲವನ್ನು ನೋಡಬೇಕಾಗುತ್ತದೆ. ಒಂದು ವೇಳೆ ಅವರಿಗೆ ಏನಾದರೂ ಫೈಲ್ಸ್ ಇದ್ದರೆ ಅಲ್ಲಿಗೆ ತರಿಸಿಕೊಳ್ಳಲಿ. ಮತ್ತೆ ಅಲ್ಲಿಯೇ ಇದ್ದುಕೊಂಡು ಪ್ರತಿಯೊಂದು ಪಂಚಾಯಿತಿಗೆ ಭೇಟಿ ಮಾಡಲಿ. ಅಂದರೆ, ಅವರಿಗೆ ಯಾವ್ಯಾವ ಜಿಲ್ಲೆಯನ್ನು

ವಹಿಸಿದ್ದಾರೆಯೋ ಅಂಥ ಕಡೆಯೇ ಅವರು ಹಾಲ್ಟ್ ಮಾಡಿ ಪ್ರತಿಯೊಂದು ಪಂಚಾಯಿತಿಯನ್ನು ಖುದ್ದಾಗಿ ನೋಡಲಿ. ಆಗಲಾದರೂ ಅವರಿಗೆ ಕಣ್ಣಾರೆ ಗೊತ್ತಾಗುತ್ತದೆ. ಅವರು ಕೊಡುವ ರಿಪೋರ್ಟ್ ಮೇಲಾದರೂ ನೀವು ನಂಬಿ. ಎರಡನೆಯದು ಏನೆಂದರೆ ಜಿಲ್ಲಾ ಉಸ್ತುವಾರಿ ಸಚಿವರು ಕೊನೇಪಕ್ಷ 8 ದಿವಸಗಳಿಗೊಮ್ಮೆ ಅಥವಾ 8 ದಿವಸಗಳಿಗೊಂದು ಸಾರಿ ಹೋಗುವುದಕ್ಕೆ ಅವರಿಗೆ ಸಮಯ ಇಲ್ಲದಿದ್ದರೆ 15 ದಿವಸಗಳಿಗೊಮ್ಮೆಯಾದರೂ ಇಂಥವುಗಳನ್ನು ರಿವ್ಯೂ ಮಾಡಬೇಕು.

ಎಲ್ಲಿ ಹಣ ಹೆಚ್ಚಿಗೆ ಮತ್ತು ಎಲ್ಲಿಗೆ ಕಡಿಮೆ ಬಂದಿದೆ ಎಂದು ಮತ್ತು ಯಾವ ಕೆಲಸಕ್ಕೆ ತೊಂದರೆ ಇದೆ ಎಂಬುದನ್ನು ಮತ್ತು ಜನರು ಏನು ಹೇಳುತ್ತಾರೆಂಬುದನ್ನು ಕೇಳಿಕೊಂಡು ಸರ್ಕಾರಕ್ಕೆ ರಿಪೋರ್ಟ್ ಮಾಡಿ, ಇಲ್ಲಿ ಹಣ ಪಡೆದುಕೊಂಡು ಹೋಗತಕ್ಕಂಥಾದ್ದು ಆಗಬೇಕು. ಏಕೆಂದರೆ, 8 ದಿವಸಗಳಿಗೊಮ್ಮೆ ಕ್ಯಾಬಿನೆಟ್ ಮೀಟಿಂಗ್ ಇರುತ್ತದೆ. ಆದ್ದರಿಂದ, ನಮ್ಮ ಜಿಲ್ಲೆಗೆ ಬಿಡುಗಡೆ ಮಾಡಿರತಕ್ಕಂಥ ಹಣದಲ್ಲಿ ಇಷ್ಟು ಖರ್ಚಾಗಿದೆ, ಇನ್ನೂ ಇಷ್ಟು ಬೇಕಾಗಿದೆ ಎಂದು ಅರ್ಧ ಅಥವಾ 1 ಗಂಟೆಯಾದರೂ ಕ್ಯಾಬಿನೆಟ್‌ನಲ್ಲಿ ಇದರ ಬಗ್ಗೆ ಬ್ರೀಫ್ ಮಾಡಿದರೆ ಮಾತ್ರ ಇದರ ಬಗ್ಗೆ ಟ್ಯಾಕಲ್ ಮಾಡುವುದಕ್ಕೆ ಆಗುತ್ತದೆ. ಇಲ್ಲದಿದ್ದರೆ, ನಾವು ಎಲ್ಲಾ ಮಾಡಿದ್ದೇವೆಂದು ಮತ್ತು ಇಷ್ಟು ಹಣ ಬಿಡುಗಡೆಮಾಡಿದ್ದೇವೆಂದು ಹೇಳುತ್ತಾ ಹೋದರೆ ಆಗುವುದಿಲ್ಲ. ಇನ್‌ಚಾರ್ಜ್ ಇರತಕ್ಕಂಥ ಸೆಕ್ರೆಟರಿಯವರು ಅಲ್ಲಿಯೇ ವಾಸ್ತವ್ಯ ಹೂಡಬೇಕು. ಇನ್‌ಚಾರ್ಜ್ ಡಿಸ್ಟ್ರಿಕ್ಟ್ ಮಿನಿಸ್ಟರ್ ಕೂಡ ಅಲ್ಲಿಯೇ ಇದ್ದು, ಪ್ರತಿ 15 ದಿವಸಕ್ಕೊಂದು ಸಾರಿ ರಿವ್ಯೂ ಮಾಡಬೇಕು. ಮತ್ತೆ ಮೂರನೆಯದಾಗಿ ಕ್ಯಾಬಿನೆಟ್ ಸಬ್ ಕಮಿಟಿಯಲಿ ಪ್ರತಿ ಜಿಲ್ಲೆಯ ಬಗ್ಗೆ ರಿವ್ಯೂ ಮಾಡಬೇಕು. ಮತ್ತೆ ಮೂರನೆಯದಾಗಿ ಕ್ಯಾಬಿನೆಟ್ ಸಬ್ ಕಮಿಟಿಯಲ್ಲಿ ಪ್ರತಿ ಜಿಲ್ಲೆಯ ಬಗ್ಗೆ ರಿವ್ಯೂ ಮಾಡಿ ಹಣ ಬಿಡುಗಡೆ ಮಾಡತಕ್ಕಂಥಾದ್ದನ್ನು ಮಾಡಬೇಕು. ಇಷ್ಟು ಹಣವನ್ನು ನೀವು ಬಿಡುಗಡೆ ಮಾಡದಿದ್ದರೆ, ಏನೂ ಪ್ರಯೋಜನವಾಗುವುದಿಲ್ಲ. ನಾವು ಕೇವಲ ಮಾತನಾಡಿ ಮನೆಗೆ ಹೋಗತಕ್ಕಂಥದ್ದಾಗುತ್ತದಷ್ಟೆ.

(4 : 00 pm)

ದಯವಿಟ್ಟು ಅದನ್ನು ಬಹಳ ಗಂಭೀರತೆಯಿಂದ ತೆಗೆದುಕೊಳ್ಳಬೇಕು. Finance Minister ಇಲ್ಲವೆಂದು ಹೇಳಿದ ಕೂಡಲೇ ಅವರಿಗೆ ಸಿಟ್ಟು ಬರುತ್ತದೆ. ಮಾನ್ಯ ಶೆಟ್ಟರ್‌ರವರು ಹೇಳಬಹುದು. ಮಾನ್ಯ ಪ್ರಕಾಶ್‌ರವರೇ ಆತ್ಮಸಾಕ್ಷಿಯಾಗಿ ಹೇಳಲಿ.

ಇವರು ಹೇಳಿದ ತಕ್ಷಣ Finance Minister ದುಡ್ಡು ಬಿಡುಗಡೆ ಮಾಡುತ್ತಾರೆ. ಎಂದರೆ ನಾನು ಒಪ್ಪುತ್ತೇನೆ. ಇಲ್ಲ ಅವರು ಎಷ್ಟೇ ಕೇಳಿಕೊಂಡರೂ ಕೂಡ ಅವರಿಗೆ ಖುಷಿ ಬಂದಾಗ ಕೊಡುವವರು, ಅವರಿಗೆ ಮರ್ಜಿ ಬಂದಾಗ ಕೊಡುವವರು. ಆ ಮಹಾರಾಜನ ಮರ್ಜಿ ಸಂಪಾದನೆ ಮಾಡಿಕೊಂಡು ಆ ಮೇಲೆ ಹಣ ಬಿಡುಗಡೆ ಆಗುತ್ತದೆ. ಅಲ್ಲಿಯವರೆಗೆ ಜನ ಬದುಕುತ್ತಾರೋ, ಸಾಯುತ್ತಾರೋ, ಜಾನುವಾರುಗಳು ಇರುತ್ತವೋ, ಹೋಗುತ್ತವೋ, ನಮಗೆ ಗೊತ್ತಿಲ್ಲ. ಕನಿಷ್ಟ ಪಕ್ಷ ತಾವು ಆದರೂ ಅಧ್ಯಕ್ಷರೆ, ಅವರಿಗೆ direction ಕೊಟ್ಟು ಕೆಲಸ ಮಾಡಬೇಕೆಂದು ಹೇಳಿ ಹೇಳಬೇಕೆಂದು ತಮ್ಮಲ್ಲಿ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :– ಮೂರು ಗಂಟೆಗೆ ಆರಂಭವಾಗಿದೆ. ಐದು ಗಂಟೆಯ ಒಳಗಡೆ ಚರ್ಚೆ ಮತ್ತು ಉತ್ತರ ಮುಗಿಸಬೇಕು.

ಶ್ರೀ ಸಿದ್ಧರಾಮಯ್ಯ (ಚಾಮುಂಡೇಶ್ವರಿ) :– ಮಾನ್ಯ ಅಧ್ಯಕ್ಷರೆ, ಕಡಿಮೆ ಮಾತನಾಡುವುದಕ್ಕೆ ಪ್ರಯತ್ನ ಮಾಡೋಣ, ಹಾಗಂತ ಇಷ್ಟೇ ಮಾತನಾಡಿ ಎಂದು ಹೇಳುವುದಕ್ಕಾಗುವುದಿಲ್ಲ. ಇದು ಬರಗಾಲಕ್ಕೆ ಸಂಬಂಧಪಟ್ಟ ವಿಚಾರ ಅಲ್ಲವೇ? ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಿ. ಅದಕ್ಕಾಗಿ ಬೆಳಿಗ್ಗೆ ತೆಗೆದುಕೊಳ್ಳಿ ಎಂದು ಹೇಳಿದ್ದು. ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಖರ್ಗೆಯವರು, ಬರಗಾಲದ ಬಗ್ಗೆ ಚರ್ಚೆಯಲ್ಲಿ ಭಾಗವಹಿಸಿ ಅನೇಕ ವಿಚಾರಗಳ ಬಗ್ಗೆ ಸರ್ಕಾರದ ಗಮನ ಸೆಳೆಯತಕ್ಕಂಥ, ಬೆಳಕು ಚೆಲ್ಲತಕ್ಕಂತಹ ಕೆಲಸವನ್ನು ಮಾಡಿದ್ದಾರೆ. ಫೆಬ್ರುವರಿಯಲ್ಲಿ ಕೂಡ ಒಮ್ಮೆ ಬಹಳ ದೀರ್ಘವಾಗಿ ಬರಗಾಲದ ಬಗ್ಗೆ ಚರ್ಚೆಯಾಯಿತು. ವಿಧಾನ ಸಭೆ ಈ ವರ್ಷ ಪ್ರಾರಂಭವಾದ ಮೇಲೆ, ರಾಜ್ಯಪಾಲರ ಭಾಷಣ ಮಾಡಿದ ಮೇಲೆ, ಒಂದು ಸಾರಿ ಮಾನ್ಯ ವಿರೋಧ ಪಕ್ಷ ನಾಯಕರು ನಿಲುವಳಿ ಸೂಚನೆ ತೆಗೆದುಕೊಂಡು ಬಂದರು. ನಿಲುವಳಿ ಸೂಚನೆಗೆ ತಾವು ನಿಯಮ 69 ರ ಅಡಿಯಲ್ಲಿ ಕನ್ವರ್ಟ್ ಮಾಡಿ ದೀರ್ಘವಾದ ಚರ್ಚೆಯಾಯಿತು. ಮಾನ್ಯ ಜಗದೀಶ್ ಶೆಟ್ಟರ್‌ರವರು ಕೂಡ ಅವತ್ತು ನಾವು ಹೇಳಿದಂತಹ ವಿಚಾರಗಳಿಗೆ ಉತ್ತರ ಕೊಟ್ಟರು. ನಮಗೆ ಅವತ್ತೂ ಸಮಾಧಾನ ಆಗಲಿಲ್ಲ. ಆವತ್ತೂ ಕೂಡ ನಾವು ಕೂಡ ನಾವು ವಾಕ್‌ಔಟ್ ಮಾಡಿದ್ದೆವು.

ಬರಗಾಲ ನಿಭಾಯಿಸುವುದರಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಬಹಳ ಬೇಜವಾಬ್ದಾರಿಯಿಂದ ಸರ್ಕಾರ ನಡೆದುಕೊಂಡಿದೆ ಎಂದು ಹೇಳಿ ಅವತ್ತೂ

ಕೂಡ ಹೇಳಿದ್ದೆವು, ಇವತ್ತು ಆ ಪದಗಳನ್ನು ಮತ್ತೆ ಬಳಸುವುದಕ್ಕೆ ಬಯಸುತ್ತೇನೆ. ನಾನು ರಾಜಕೀಯವಾಗಿ ಟೀಕೆ ಮಾಡಬೇಕು ಎನ್ನುವ ಕಾರಣಕ್ಕೋಸ್ಕರ ಈ ಮಾತುಗಳನ್ನು ಹೇಳುತ್ತಿಲ್ಲ. ಏಕೆಂದರೆ, ಮಾನ್ಯ ಅಧ್ಯಕ್ಷರೆ, ಬರಗಾಲ ರಾಜ್ಯದಲ್ಲಿ ಭೀಕರವಾಗಿದೆ. ಬಹಳ ತೀವ್ರವಾಗಿದೆ. ರಾಜ್ಯದ ಜನರು ಬಹಳ ಸಂಕಷ್ಟದಲ್ಲಿದ್ದಾರೆ ಎನ್ನುವುದನ್ನು ಸರ್ಕಾರವೇ ಒಪ್ಪಿಕೊಂಡಿದೆ. ಅದರ ಬಗ್ಗೆ ಯಾವುದೇ dispute ಇಲ್ಲ. 128 ತಾಲ್ಲೂಕುಗಳಲ್ಲಿ ಇದ್ದ ಬರಗಾಲ ಈಗ 134 ತಾಲ್ಲೂಕುಗಳಿಗೆ ಹೋಗಿದೆ. ಅಂದರೆ, 135 ತಾಲ್ಲೂಕುಗಳು ಬರಗಾಲದ ದವಡೆಗೆ ಸಿಕ್ಕಿತಕ್ಕಂತಹ ತಾಲ್ಲೂಕುಗಳು ಎಂದು ಘೋಷಣೆ ಮಾಡಿರುವುದು. ಬೇರೆ ತಾಲ್ಲೂಕುಗಳಲ್ಲಿಯೂ ಸಮಸ್ಯೆಗಳು ಇವೆ. ಆದರೆ, ಸರ್ಕಾರ ಇವತ್ತು ಬರಗಾಲದ ದವಡೆಗೆ ಸಿಕ್ಕಿಕೊಂಡು ಬಹಳ ಕಷ್ಟದಲ್ಲಿರುವ ತಾಲ್ಲೂಕುಗಳು ಎಂದು ಸರ್ಕಾರ ಘೋಷಣೆ ಮಾಡಿರುವುದು 128 ತಾಲ್ಲೂಕುಗಳು. 128 ಕ್ಕೆ confine ಆಗೋಣ. ಇನ್ನು ಜಾಸ್ತಿ ಇವೆ. ನೀವು ಘೋಷಣೆ ಮಾಡಿರುವ ಹಾಗೆ.

ಮಾನ್ಯ ಜಗದೀಶ್ ಶೆಟ್ಟರ್‌ರವರೇ ಬೇರೆ ಬೇರೆ ತಾಲ್ಲೂಕುಗಳಲ್ಲಿ ಕೂಡ ಕುಡಿಯುವ ನೀರಿನ ಸಮಸ್ಯೆ ಇದೆ. 128 ತಾಲ್ಲೂಕುಗಳು ಎಂದರೂ ಕೂಡ, ಒಟ್ಟು ತಾಲ್ಲೂಕುಗಳ 2/3 ಭಾಗದಷ್ಟು ಇದ್ದಾರೆ. ಕರ್ನಾಟಕದಲ್ಲಿ ಸುಮಾರು 2/3 ಭಾಗದಷ್ಟು ಜನ ಹಳ್ಳಿಗಾಡಿನ ಜನಜೀವನ ಮತ್ತು ಪಟ್ಟಣ ಪ್ರದೇಶಗಳಲ್ಲಿ ಇವತ್ತು ಬರಗಾಲ ಎದುರಿಸುತ್ತಿದ್ದಾರೆ. ಬಹಳ ಕಷ್ಟದಲ್ಲಿದ್ದಾರೆ. ನೀವು ಆವತ್ತು ಉತ್ತರ ಕೊಟ್ಟಮೇಲೆ ನಾವೆಲ್ಲ ಏನು ನಿರೀಕ್ಷೆ ಮಾಡಿಕೊಂಡಿದ್ದೆವು ಎಂದರೆ, ಜನರ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಕೂಡಲೇ ಸರ್ಕಾರ ಧಾವಿಸುತ್ತದೆ. ಸಮರೋಪಾದಿಯಲ್ಲಿ ಸರ್ಕಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ ಎನ್ನತಕ್ಕಂತಹ ನಂಬಿಕೆ ಮತ್ತು ವಿಶ್ವಾಸ ನಮಗೆ ಇತ್ತು. ಏಕೆಂದರೆ ನೀವು ಪದೇ ಪದೇ ಹೇಳುತ್ತೀರಿ, " ನಮ್ಮ ಸರ್ಕಾರ ಬಡವರ ಪರವಾಗಿದೆ, ನಾವು ಬಡವರ ಪರವಾಗಿರುತ್ತೇವೆ, ಹಳ್ಳಿಗಾಡಿನ ಜನರ ಪರವಾಗಿರುತ್ತೇವೆ, ಇದು ರೈತರ ಪರವಾದ ಸರ್ಕಾರ" ಎಂದು ಹೇಳುತ್ತೀರಿ. ಅದರ ಬಗ್ಗೆ ನಮ್ಮದೇನೂ dispute ಇಲ್ಲ. ನೀವು claim ಮಾಡಿಕೊಳ್ಳುವುದಕ್ಕೆ ನಮ್ಮ dispute ಇಲ್ಲ. ಆದರೆ ನೀವು ಆ ದಿಕ್ಕಿನಲ್ಲಿ ಏನು ಕೆಲಸ ಮಾಡಿದಿರಿ, ಹಾಗಂತ ಹೇಳಿಕೊಳ್ಳುವುದಕ್ಕೆ ಎನ್ನುವುದು ಬಹಳ ಮುಖ್ಯ.

ಬಡವರ ಪರ ಮಾಡಿದ್ದೇವೆ, ರೈತರ ಪರ ಮಾಡಿದ್ದೇವೆ, ರೈತರ ಸರ್ಕಾರ ಇದು, ಎಂದು ಹೇಳುತ್ತೀರಿ. ಇವತ್ತು ಸಮ್ಮಿಶ್ರ ಸರ್ಕಾರ ಬಂದ ಮೇಲೆ, ನೀವೇ

ಕೊಟ್ಟಿರತಕ್ಕಂಥ ಅಂಕಿ ಅಂಶಗಳ ಪ್ರಕಾರ 200 ಕ್ಕೂ ಹೆಚ್ಚು ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೊನ್ನೆ ಮೊನ್ನೆ ಕೂಡ ನಾನು ಪತ್ರಿಕೆಗಳಲ್ಲಿ ನೋಡಿದ್ದೇನೆ. ಗದಗ ಜಿಲ್ಲೆ ರೋಣದಲ್ಲಿ ಅನೇಕ ಜನ ರೈತರು ಆತ್ಮಹತ್ಯೆ ಮಾಡಿಕೊಂಡರು ಎಂದು ಪತ್ರಿಕೆಯಲ್ಲಿ ಬಂದಿದೆ. ನಿಮ್ಮ ಜಿಲ್ಲೆಯಲ್ಲಿ ಇತ್ತೀಚೆಗೆ 13 ಜನ ಆತ್ಮಹತ್ಯೆ ಮಾಡಿಕೊಂಡರು ಎಂದು ಪತ್ರಿಕೆಯಲ್ಲಿ ವರದಿಯಾಗಿದೆ. ದನಕರುಗಳು ಮೇವಿಲ್ಲದೆ, ಕುಡಿಯುವುದಕ್ಕೆ ನೀರಿಲ್ಲದೇ ಕಸಾಯಿ ಖಾನೆಗೆ ಒಯ್ಯುತ್ತಿದ್ದಾರೆ ಎಂದು ಪ್ರತಿದಿನ ಪತ್ರಿಕೆಗಳಲ್ಲಿ ಬರುತ್ತಿದೆ. ಇದು ಯಾರೂ ಹೇಳಿ ಬರೆಸುವುದಿಲ್ಲ. ಪತ್ರಿಕೆಗಳಲ್ಲಿ ಬರುತ್ತಿದೆ. ಜನ ಗುಳೆ ಹೋಗುತ್ತಿದ್ದಾರೆ, ಕೆಲಸ ಹುಡುಕಿಕೊಂಡು ಬೆಂಗಳೂರಿಗೆ ಬರುತ್ತಿದ್ದಾರೆ, ಬಿಜಾಪುರ ಬಾಗಲಕೋಟೆ ಆ ಭಾಗಗಳಿಂದ ಪೂನ ಕಡೆಗೆ ಮತ್ತು ಗೋವ ಕಡೆಗೆ ಹೋಗುತ್ತಿದ್ದಾರೆಂದು ದಿನಾ ಪತ್ರಿಕೆಗಳಲ್ಲಿ ಬರುತ್ತಿದೆ. ಇದು ಪ್ರತಿದಿನ ನಡೆಯುತ್ತಲೇ ಇದೆ. ನೀವೇ ಹೇಳಿರುವ ಪ್ರಕಾರ 4,465 ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ಬಹಳ ಕಷ್ಟ ಇದೆ. 451 ಹಳ್ಳಿಗಳಲ್ಲಂತೂ ಕುಡಿಯುವುದಕ್ಕೆ ನೀರೇ ಇಲ್ಲ. ಈ ತರಹ ಪರಿಸ್ಥಿತಿ ಇದೆ.

ಈ ಪರಿಸ್ಥಿತಿಯಲ್ಲಿ ನೀವು ಏನು ಹೇಳುತ್ತೀರಿ, ಅನೇಕ ಸಾರಿ ಹೊರಗಡೆ ಎಲ್ಲ ಮಾತನಾಡುವಾಗ ಏನು ಹೇಳುತ್ತೀರಿ, ಕೇಂದ್ರ ಸರ್ಕಾರ ನಮ್ಮ ಸಹಾಯಕ್ಕೆ ಬರಲಿಲ್ಲ. ಕೇಂದ್ರ ಸರ್ಕಾರ ನಮಗೆ ದುಡ್ಡು ಕೊಡಲಿಲ್ಲ. ಕೇಂದ್ರ ಸರ್ಕಾರ ಮಲತಾಯಿ ಧೋರಣೆ ತೋರಿಸುತ್ತದೆ, ರಾಜ್ಯ ಸರ್ಕಾರ ಬರಗಾಲದಲ್ಲಿ ಇದ್ದಾಗ ಪ್ರವಾಹ ಬಂದಾಗ ಕೇಂದ್ರ ಸರ್ಕರ ರಾಜ್ಯ ಸರ್ಕಾರದ ಸಹಾಯಕ್ಕೆ ಬರಬಾರದು ಎಂದು ನಾನು ಹೇಳುವುದಿಲ್ಲ. ಕೇಂದ್ರ ಸರ್ಕಾರವೂ ಸಹಾಯಕ್ಕೆ ಬರಬೇಕಾಗುತ್ತದೆ. ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳು ತೊಂದರೆಗೆ ಒಳಗಾದಾಗ ಇಂತಹ ಪರಿಸ್ಥಿತಿಯಲ್ಲಿ ಅವರ ಸಹಾಯಕ್ಕೆ ಬರಬೇಕು ಅದರ ಬಗ್ಗೆ ನಾವು ಕೂಡ ಒತ್ತಾಯ ಮಾಡುತ್ತೇವೆ. ಅದರ ಬಗ್ಗೆ ಎರಡನೇ ಮಾತಿಲ್ಲ. ಆದರೆ, ನೀವು ಕೊಟ್ಟಿರತಕ್ಕಂತಹ ಅಂಕಿ ಅಂಶಗಳು, ಖರ್ಚು ಮಾಡಿರತಕ್ಕಂತಹ ಹಣ ಇವೆಲ್ಲಾ ನೋಡಿದರೆ ಮೇಲ್ಮನೆಯಲ್ಲಿ ಒಂದು ಉತ್ತರ ಕೊಟ್ಟಿದ್ದೀರಿ.

ಬರ ಮತ್ತು ಪ್ರವಾಹ ಹಾವಳಿ ಎರಡೂ ಕಾರ್ಯಕ್ರಮಗಳಿಗೆ ಕೇಂದ್ರದಿಂದ ಬಂದಿರತಕ್ಕಂತಹ ಹಣ, 1,103 ಕೋಟಿ ರೂಪಾಯಿಗಳು ಬಂದಿವೆ ಎಂದು ಹೇಳಿದ್ದೀರಿ. 2005-06, 2006-07 ರವರೆಗೆ ಎರಡು ವರ್ಷಗಳಲ್ಲಿ 1,103 ಕೋಟಿ ರೂಪಾಯಿಗಳು ಬಂದಿವೆ ಎಂದು ಅವರೇ ಹೇಳಿದ್ದಾರೆ. ಮೇಲ್ಮನೆ ಸದಸ್ಯರಾದ

ಶ್ರೀ ವೀರಕುಮಾರ್‌ರವರು ಪ್ರಶ್ನೆ ಕೇಳಿದಾಗ ಇವರೇ ಉತ್ತರ ಕೊಟ್ಟಿದ್ದಾರೆ. ಅದರ ಪ್ರಕಾರ ಅಷ್ಟು ಆಗಿದೆ. 6-03-2007 ರವರೆಗೆ ಹೋದ ಆರ್ಥಿಕ ವರ್ಷದಲ್ಲಿ ಹಣ ಬಿಡುಗಡೆ ಮಾಡಿರುವುದು 494 ಕೋಟಿ 5 ಲಕ್ಷ ರೂಪಾಯಿಗಳು. ಇದರಲ್ಲಿ ವಾಸ್ತವವಾಗಿ ಖರ್ಚಾಗಿರುವುದು 276 ಕೋಟಿ ರೂಪಾಯಿಗಳು.

ಶ್ರೀ ಜಗದೀಶ್ ಶೆಟ್ಟರ್ :- 2005-06, 2006-07 ಇದು ಎರಡು ವರ್ಷದ್ದು. 494 ಕೋಟಿ ಹಣ 2006-07 ರಲ್ಲಿ ರಿಲೀಸ್ ಮಾಡಿರುವುದು. 2005-06 ರಲ್ಲಿ ರಿಲೀಸ್ ಮಾಡಿದ ಹಣ ಬೇರೆ. ನನಗೆ ಇರುವ ಮಾಹಿತಿ ಪ್ರಕಾರ ನೀವೇ ಕೊಟ್ಟಿರತಕ್ಕಂಥ ಪ್ರಕಾರ ಹೇಳಿಲ್ಲದೇ ನಾವು ಫಿಗರ್ಸ್ ತಪ್ಪು ಹೇಳಿದ್ದರೆ ನೀವು ಹೇಳಬಹುದಿತ್ತಲ್ಲ ನಿಮ್ಮ ಹತ್ತಿರ ಇರುವ ಕರೆಕ್ಟ್ ಫಿಗರ್ಸ್‌ನ್ನು. ಇದು ನೀವೇ ಕೊಟ್ಟಿರತಕ್ಕಂಥ ಫಿಗರ್ಸ್, ರೆವಿನ್ಯೂ ಇಲಾಖೆಯವರು ಕೊಟ್ಟಿರತಕ್ಕಂಥ ಫಿಗರ್ಸ್. ಇದನ್ನು ರೆವಿನ್ಯೂ ಇಲಾಖೆಯವರೇ ಕೊಟ್ಟಿರತಕ್ಕಂಥಾದ್ದು. 2005-06 ರಲ್ಲಿ 445 ಕೋಟಿ ರೂಪಾಯಿ ಬಂದಿದೆ. ಅದೇ ರೀತಿ 2006-07 ರಲ್ಲಿ 340 ಕೋಟಿ ರೂಪಾಯಿ ಬಂದಿದೆ. ಎರಡೂ ಸೇರಿದರೆ 785 ಕೋಟಿ ರೂಪಾಯಿಯಾಯಿತಲ್ಲ. ಅದಾದ ಮೇಲೆ ಇತ್ತೀಚೆಗೆ 76 ಕೋಟಿ ರೂಪಾಯಿ ಬಂದಿದೆ, ಆದರೆ 50 ಸಾವಿರ ಟನ್ ಅಕ್ಕಿ ಬಂದಿಲ್ಲವೆಂದು ಹೇಳಿದ್ದೀರಿ.

ಶ್ರೀ ಎಂ.ಪಿ. ಪ್ರಕಾಶ್ :- ಆಜ್ಞೆ ಆಗಿದೆಯೆಂದು ಹೇಳಿದ್ದು.

ಶ್ರೀ ಸಿದ್ಧರಾಮಯ್ಯ :- ಆಜ್ಞೆಯಾಗಿದೆಯೆಂದು ನೀವೇ ಹೇಳಿದಿರಿ. ಹೋಗಿ ತರಬೇಕೋ ಬೇಡವೋ? ನೀವು ಹೋದರೆ ಕೊಡುತ್ತಾರೆ.

ಶ್ರೀ ಎಂ.ಪಿ. ಪ್ರಕಾಶ್ :- ಹೋಗಿ ಬಂದೆವು. ಮುಖ್ಯಮಂತ್ರಿಗಳೇ ಭೇಟಿಯಾಗಿ ಕಂಡರು. ನಾನೂ ಹೋಗಿ ಬಂದೆ.

ಶ್ರೀ ಸಿದ್ಧರಾಮಯ್ಯ :- ಇದಾದ ಮೇಲೆ ನೀವು ಹೋಗಿ ಕೇಳಿಯೇ ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್ :- ಮುಖ್ಯಮಂತ್ರಿಗಳು ಎರಡು ಸಭೆಗಳಿಗೆ ಹೋಗಿ ಅವರನ್ನು ಕಂಡುಬಂದಿದ್ದಾರೆ. ಮಾನ್ಯ ಪ್ರಧಾನ ಮಂತ್ರಿಗಳನ್ನು ಕಂಡುಬಂದಿದ್ದಾರೆ.

ಶ್ರೀ ಸಿದ್ಧರಾಮಯ್ಯ :- ಆಯಿತು ಬಿಡಿ. ಮಾನ್ಯ ಯಡಿಯೂರಪ್ಪನವರು ಹಣಕಾಸಿನ ಮಂತ್ರಿಗಳಾಗಿದ್ದಾರೆ. ಈಗ ಅವರ ಪಕ್ಷದ ಕೆಲಸ ಮಾಡಬಾರದು ಎಂದು ನಾನೇನೂ ಹೇಳುವವನಲ್ಲ. ಒಂದು ರಾಜಕೀಯ ಪಕ್ಷದಲ್ಲಿ ಅವರು ಕೆಲಸ

ಮಾಡಲಿ. ನಾವೂ ಕೂಡ ಪಕ್ಷ ಕಟ್ಟುವ ಕೆಲಸವನ್ನು ಮಾಡಿದ್ದೇವೆ. ಜನರ ಬಳಿಗೆಲ್ಲಾ ಹೋಗಿದ್ದೇವೆ. ಆದರೆ ಅಸೆಂಬ್ಲಿ ನಡೆಯುವಾಗ ಇವರು ಕೇಂದ್ರಸರ್ಕಾರಕ್ಕೆ ಹೋಗಿ ದುಡ್ಡು ತೆಗೆದುಕೊಂಡು ಬರಬೇಕೋ ಅಥವಾ ಕರ್ನಾಟಕ ವಿಕಾಸಯಾತ್ರೆ ಎಂದು ಹೇಳಿಕೊಂಡು ಅವರ ಪಕ್ಷದ ಕೆಲಸವನ್ನು ಮಾಡುವುದಕ್ಕೆ ಹೋಗಬೇಕೋ? ಇದು ಮುಖ್ಯವೋ ಅಥವಾ ಅದು ಮುಖ್ಯವೋ? ಬರಗಾಲ ಇಂಪಾರ್ಟೆಂಟೋ ಅಥವಾ ಪಕ್ಷದ ಕೆಲಸ ಇಂಪಾರ್ಟೆಂಟೋ? ಅದೂ ಸೆಶನ್ ನಡೆಯುತ್ತಿರುವಾಗ ಹೋಗಬೇಕೇ?

ಶ್ರೀ ಜಗದೀಶ್ ಶೆಟ್ಟರ್ :– ಅದು ಮೊದಲೇ ನಿಗದಿಯಾಗಿದ್ದಂಥ ಕಾರ್ಯಕ್ರಮ. ನೀವು ಯಾವುದಕ್ಕೆ ಯಾವುದನ್ನೋ ಹೋಲಿಕೆ ಮಾಡುವುದಕ್ಕೆ ಹೋಗಬೇಡಿ. ಏನು ಪ್ರಯತ್ನಗಳನ್ನು ಮಾಡಬೇಕೋ ಅವೆಲ್ಲವನ್ನೂ ಮಾಡಲಾಗಿದೆ. ನೀವೇನಾದರೂ ಸ್ವತಂತ್ರ್ಯವಾಗಿ ಪ್ರಯತ್ನವನ್ನೇನಾದರೂ ಮಾಡಿದ್ದೀರ? ಒಂದು ಪ್ರತಿಪಕ್ಷದ ಜವಾಬ್ದಾರರಾಗಿ ಕೇಂದ್ರ ಸರ್ಕಾರಕ್ಕೆ ಹೋಗಿ ಪ್ರಯತ್ನವನ್ನು ಮಾಡಿದ್ದೀರ? ಹಿಂದೆ ಎನ್.ಡಿ.ಎ ಸರ್ಕಾರವಿದ್ದಾಗ ನಾನು ಪ್ರತಿಪಕ್ಷದವನಾಗಿ ವಿರೋಧ ಪಕ್ಷದ ನಾಯಕನಾಗಿದ್ದೆ. ಆಗ ನಾವು ಬಿ.ಜೆ.ಪಿ. ಡೆಲಿಗೇಶನ್ ಕರೆದುಕೊಂಡು ಹೋಗಿ 10 ಲಕ್ಷ ಮೆಟ್ರಿಕ್ ಟನ್ ಆಹಾರವನ್ನು ತಂದಿದ್ದೆವು. ಇವೊತ್ತು ನಿಮ್ಮವರು ಒಂದೈವತ್ತು ಸಾವಿರ ನೀವು ಬಿಡುಗಡೆ ಮಾಡಿಸಿ ನೋಡೋಣ. ಪ್ರತಿಪಕ್ಷದಲ್ಲಿರುವ ನಿಮ್ಮದೇನೂ ಸ್ವತಂತ್ರ ಪ್ರಯತ್ನವಿದೆ ಹೇಳಿ.

ಶ್ರೀ ಸಿದ್ಧರಾಮಯ್ಯ :– ಪ್ರತಿ ಪಕ್ಷದವರಾಗಿ ಈಗ ಮಾಡುತ್ತಿದ್ದೇವಲ್ಲ. ನಾವು ಮಾಡಲಿಲ್ಲ ಎಂದರೆ ನೀವೇನೂ ಮಾಡಬಾರದೋ? ನಿಮಗೆ ಏಕೆ ಅಲ್ಲಿ ಜಾಗ? ನೀವ್ಯಾಕೆ ಅಲ್ಲಿ ಕುಳಿತಿದ್ದೀರಿ ಮತ್ತೆ? ಜವಾಬ್ದಾರಿ ಇಲ್ಲವೆಂದು, ನಮಗೇನೂ ಜವಾಬ್ದಾರಿ ಇಲ್ಲ, ಎಲ್ಲವನ್ನೂ ನೀವೇ ಮಾಡಿ ಎಂದೆ?

ಶ್ರೀ ಎಂ.ಪಿ. ಪ್ರಕಾಶ್ :– ಹಾಗಲ್ಲ. ನೀವೂ ಸಹಾಯ ಮಾಡಲಿ ಎಂದು ಹೇಳುತ್ತಿರುವುದು.

ಶ್ರೀ ಸಿದ್ಧರಾಮಯ್ಯ :– ನಾವು ಸಹಾಯ ಮಾಡುವುದಕ್ಕೆ ತಯಾರಿದ್ದೇವೆ. We are ready to co-operate.

ಶ್ರೀ ಎಂ.ಪಿ. ಪ್ರಕಾಶ್ :– ಕಂದಾಯ ಸಚಿವರು ಹಿಂದೆ ಪ್ರತಿ ಪಕ್ಷದಲ್ಲಿದ್ದಾಗ ಎಲ್.ಕೆ. ಅಡ್ವಾಣಿಯವರ ಹತ್ತಿರ ಹೋಗಿ ಮಾತನಾಡಿ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೋದಂಥ ಸಂದರ್ಭದಲ್ಲಿ ಅವರು ಇದೇ ಸದನದಲ್ಲಿ ಅವರ ಬಗ್ಗೆ

ಅಭಿನಂದನೆಯನ್ನು ಸಲ್ಲಿಸಿದ್ದಾರೆ. ಅಡ್ವಾಣಿಯವರು ಈ ರೀತಿ ನಮಗೆಲ್ಲ ಕೊಟ್ಟರು ಎಂದು ಹೇಳಿ. ಅದೇ ರೀತಿ ತಾವೂ ಕೂಡ ನಮ್ಮ ಜೊತೆಗೆ ಸೇರಿದರೆ,

ಶ್ರೀ ಸಿದ್ಧರಾಮಯ್ಯ :- ನಾವೂ ಬರಬೇಕೆ. ಆಯಿತು. ನಿಮ್ಮ ಜೊತೆಗೆ ನಾವೂ ಬರುತ್ತೇವೆ. ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡುವುದಕ್ಕೆ ನಾವು ನಿಮ್ಮ ಜೊತೆ ಬರುತ್ತೇವೆ.

ಶ್ರೀ ಎಂ.ಪಿ. ಪ್ರಕಾಶ್ :- ಆ ರೀತಿ ಹೇಳಿ.

ಶ್ರೀ ಸಿದ್ಧರಾಮಯ್ಯ :- We will be with You. ಅದರ ಬಗ್ಗೆ ಎರಡನೇ ಮಾತಿಲ್ಲ. ರಾಜ್ಯಕ್ಕೆ ಹಣ ತೆಗೆದುಕೊಂಡು ಬರುವುದಕ್ಕೆ ಬರಗಾಲ ಎದುರಿಸಲಿಕ್ಕೆ ನಾವು ಇರುತ್ತೇವೆ. ಆದರೆ ನೀವು ಕೈಕಟ್ಟಿಕೊಂಡು ಕುಳಿತುಕೊಳ್ಳುವುದಕ್ಕಾಗುವುದಿಲ್ಲವಲ್ಲ ಪ್ರಕಾಶ್‌ರವರೆ. ಕೇವಲ ನೀವು ಕೇಂದ್ರ ಸರ್ಕಾರದ ಕಡೆ ತೋರಿಸಿಬಿಟ್ಟು ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರ ಕೊಡಲಿಲ್ಲವೆಂದು ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ನೀವು ನಮಗೆ ವಿರೋಧ ಪಕ್ಷದವರಾಗಿ ಪ್ರಯತ್ನವನ್ನೇ ಮಾಡೇ ಇಲ್ಲವೆಂದು ಹೇಳಿ ನೀವು ಸುಮ್ಮನೆ ಕುಳಿತು ಕೊಳ್ಳುವುದಕ್ಕಾಗುವುದಿಲ್ಲ. ನಿಮಗೆ ಸಹಕಾರ ಕೊಡುವುದಕ್ಕೆ, ಕೇಂದ್ರದ ಮೇಲೆ ಒತ್ತಾಯ ಮಾಡುವುದಕ್ಕೆ ನಾವು ಸದಾ ಸಿದ್ಧರಿದ್ದೇವೆ. ನಾಳೇಯೇ ಹೋಗೋಣ ನಡೆಯಿರಿ ಬೇಕಾದರೆ. ಪಿ.ಎಂ. ರವರನ್ನು ಭೇಟಿ ಮಾಡುವುದಕ್ಕೆ ಹೋಗೋಣ. ಆದರೆ ಯಡಿಯೂರಪ್ಪನವರು ಯಾತ್ರೆ ಬಿಟ್ಟು ಈ ಕಡೆ ಬರಬೇಕಲ್ಲ?

ಶ್ರೀ ಎಂ.ಪಿ. ಪ್ರಕಾಶ್ :- ಅದು ಬೇರೆ ವಿಷಯ. ಆಮೇಲೆ ಮಾತನಾಡಿ. ಆದರೆ ಮುಖ್ಯಮಂತ್ರಿಗಳು ಪತ್ರ ಬರೆದಿದ್ದಾರೆ. ಮುಂದೆ ಸರ್ವ ಪಕ್ಷಗಳ ನಿಯೋಗವನ್ನೇ ಕರೆದುಕೊಂಡು ಹೋಗುತ್ತೇವೆ.

ಶ್ರೀ ಎಂ. ಮಹದೇವ್ ಪ್ರಸಾದ್ :- ಪ್ರತಿಯೊಂದು ಮಾತಿಗೂ ತಾವು ಯಡಿಯೂರಪ್ಪನವರ ಕಡೆಗೇ ಹೋಗುತ್ತಿದ್ದೀರಲ್ಲ ಏಕೆ?

ಶ್ರೀ ಸಿದ್ಧರಾಮಯ್ಯ :- ನಾನು ಏಕೆ ಹೇಳಿದೆನೆಂದರೆ, ಯಡಿಯೂರಪ್ಪನವರ ಬಗ್ಗೆ ನನಗೆ ಬಹಳ ಗೌರವವಿದೆ. ಏಕೆಂದರೆ ನಾವು ಅಧಿಕಾರದಲ್ಲಿದ್ದಾಗ ಅವರು ವಿರೋಧ ಪಕ್ಷದ ನಾಯಕರಾಗಿ ಬಹಳಷ್ಟು ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ, ಬಹಳ ಆರೋಗ್ಯಕರವಾದಂಥ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಆದುದರಿಂದ

ಅವರ ಬಗ್ಗೆ ನಮಗೆ ಬಹಳ ಗೌರವವಿದೆ. ಅದೂ ಅಲ್ಲದೇ ಅವರು ಮುಂದಿನ ಮುಖ್ಯಮಂತ್ರಿಗಳಾಗುವವರು. ಅಂದಮೇಲೆ ಅವರ ಮೇಲೆ ನಾವು ಗೌರವ ಇಟ್ಟುಕೊಳ್ಳಲೇಬೇಕು. ಅದರಲ್ಲಿ ಎರಡನೇಯ ಮಾತೇ ಇಲ್ಲ. ಸೆಪ್ಟೆಂಬರ್‌ನಲ್ಲೋ, ಅಕ್ಟೋಬರ್‌ನಲ್ಲಿಯೇ ಅವರು ಮುಖ್ಯಮಂತ್ರಿಗಳಾಗುತ್ತಾರೆ. How can I disrespect him?

ಮಾನ್ಯ ಸದಸ್ಯರು :– ನೀವೇ ಮೊನ್ನೆ ಮಾತನಾಡುವಾಗ ಯಡಿಯೂರಪ್ಪನವರೆ ನೀವಂತೂ ಮುಖ್ಯಮಂತ್ರಿಗಳಾಗುವುದಿಲ್ಲ, ರೇವಣ್ಣ ಗ್ಯಾರಂಟಿಯಾಗಿ ಮುಖ್ಯಮಂತ್ರಿ ನೀನು ಆಗುತ್ತಿ ಎಂದು ಹೇಳಿದಿರಿ.

ಶ್ರೀ ಸಿದ್ಧರಾಮಯ್ಯ :– ಆ ಪ್ರಯತ್ನ ಆ ಕಡೆ ನಡೆಯುತ್ತಿದೆ. ಯಡಿಯೂರಪ್ಪನವರು ಮುಖ್ಯಮಂತ್ರಿಯಾದರೆ ನಮಗೇನು ತೊಂದರೆಯಾಗುವುದು? ಪಾಪ ಅವರು ಆಗಲಿ. ಸತ್ಯವಾಗಿ ನಾನು ಹೇಳುತ್ತಿದ್ದೇನೆ, ಯಡಿಯೂರಪ್ಪನವರು ಮುಖ್ಯಮಂತ್ರಿಯಾದರೆ ನಮಗೇನೂ ತೊಂದರೆ ಇಲ್ಲ. ಆದರೆ ಇಷ್ಟು ಮಾತ್ರ ನಿಜ, ಇಷ್ಟು ಮಾತ್ರ ನಿಜ, ಯಡಿಯೂರಪ್ಪನವರನ್ನು ಮುಖ್ಯಮಂತ್ರಿ ಆಗಲು ಬಿಡೋಲ್ಲ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ :– ಯಡಿಯೂರಪ್ಪನವರು ಮುಖ್ಯಮಂತ್ರಿ ಆಗಿಯೇ ಆಗುತ್ತಾರೆ. ಆದರೆ ನೀವು ಏಕೆ ಕನಸು ಕಾಣುತ್ತಿದ್ದೀರಿ? ಅವರು ಆಗಬೇಕೆಂದು ನಿಮಗೆ ಆಸೆ ಇದೆಯೋ ಇಲ್ಲವೋ?

ಶ್ರೀ ಸಿದ್ಧರಾಮಯ್ಯ :– ಯಾವಾಗಲೂ ಮನುಷ್ಯನಿಗೆ ಕನಸುಗಳಿದ್ದರೆ ಮಾತ್ರ ಅವರು ಒಳ್ಳೆಯ ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಹೆಚ್.ಸಿ ಬಾಲಕೃಷ್ಣ :– ಆ ರೀತಿ ಒಳ್ಳೆಯ ಕನಸು ಇರಲಿ. ಕೆಟ್ಟ ಕನಸು ಇರಬಾರದಷ್ಟೆ.

ಶ್ರೀ ಸಿದ್ಧರಾಮಯ್ಯ :– ಕನಸನ್ನು ನಾನು ಯಾವಾಗಲೂ ಕಟ್ಟಿಕೊಂಡೇ ಇರುತ್ತೇನೆ. ಮನುಷ್ಯ ಯಾವುದಾದರೂ ದೊಡ್ಡ ಸಾಧನೆ ಮಾಡಬೇಕಾದರೂ, ಒಳ್ಳೆಯ ಕೆಲವನ್ನು ಮಾಡಬೇಕಾದರೂ, ಸಮಾಜದಲ್ಲಿ ಉತ್ತಮವಾದಂಥ ಕೆಲಸಗಳನ್ನು ಮಾಡಬೇಕಾದರೂ ಒಳ್ಳೆಯ ಕನಸುಗಳನ್ನು ಕಾಣುತ್ತಿರಬೇಕು. ಈಗ ನಿನ್ನ ಬಗ್ಗೆ ನನಗೇನನ್ನಿಸುತ್ತಿದೆಯೆಂದರೆ, ನೀನು ಶಿವಕುಮಾರ್ ಜೊತೆ ಕುಳಿತುಕೊಂಡಿದ್ದಿ. ನನಗೆ

ನಿನ್ನ ಮೇಲೆ ಅನುಮಾನ ಬಂದುಬಿಟ್ಟಿದೆ. ಅಲ್ಲಿ ಶಿವಕುಮಾರ್ ಜೊತೆ ಮಾತನಾಡುತ್ತಿದ್ದೀಯಾ ಎಂದರೆ ಬೇರೆ ಏನೋ ಕನಸು ನಿನಗೆ ಇರಬೇಕು.

ಶ್ರೀ ಎನ್. ಧರ್ಮಸಿಂಗ್ :– ಬಾಲಕೃಷ್ಣ, ಯಡಿಯೂರಪ್ಪನವರನ್ನು ಸಿ.ಎಂ. ಮಾಡಬಾರದು ಎನ್ನುವ ಸಂಚಿನಲ್ಲಿ ನೀನೂ ಕೂಡ ಇರುವೆ. ಸುಮ್ಮನೆ ಏಕೆ ಮಾತನಾಡುತ್ತಿ?

ಶ್ರೀ ಸಿದ್ಧರಾಮಯ್ಯ :– ಮಾನ್ಯ ಅಧ್ಯಕ್ಷರೆ, ನಾನು ಟೀಕೆ ಮಾಡುವುದಕ್ಕೋಸ್ಕರ ಯಡಿಯೂರಪ್ಪನವರ ಮೇಲೆ ಮಾತನಾಡುತ್ತಿಲ್ಲ. ಇಲ್ಲಿ ಈಗ ಸದನ ನಡೆಯುತ್ತಿದೆ. ಸದನದಲ್ಲಿ ನೀವೇ ತೀರ್ಮಾನ ಮಾಡಿದ್ದೀರಿ. ಸರ್ಕಾರಕ್ಕೆ ನಿಮ್ಮ ಮೂಲಕ ಹೇಳಿ ನಾಲ್ಕು ದಿವಸ ಸದನ ನಡೆಸಬೇಕು ಎಂದು ತೀರ್ಮಾನವಾಗಿದೆ. ಜಗದೀಶ್ ಶೆಟ್ಟರ್, ನಿಮ್ಮ ಯಾತ್ರೆಯನ್ನು ಮುಂದಕ್ಕೆ ಹಾಕಬಹುದಿತ್ತು. ಮುಂದಕ್ಕೆ ಹಾಕಿದ್ದರೆ ಅವಕಾಶವೇನೂ ತಲೆಕೆಳಗಾಗುತ್ತಿರಲಿಲ್ಲ. ಪ್ರವಾಹ ಬರುತ್ತಿರಲಿಲ್ಲ. 13 ನೇಯ ತಾರೀಖಾದ ಮೇಲೆ ಇಟ್ಟುಕೊಂಡಿದ್ದರೆ ಏನೂ ಆಗುತ್ತಿರಲಿಲ್ಲ. ನಾವೇನು ನಿಮಗೆ ವಿಕಾಸ ಯಾತ್ರೆ ಮಾಡಬೇಡಿ ಎಂದು ಹೇಳುವುದಿಲ್ಲ. ಆದರೆ ಸರ್ಕಾರದಲ್ಲಿ ಬಿ.ಜೆ.ಪಿ ಮುಖ್ಯಸ್ಥರಾಗಿ, ಸರ್ಕಾರದ ಪಾಲುದಾರರಾಗಿ, ಉಪ ಮುಖ್ಯಮಂತ್ರಿಯಾಗಿ, ಸದನದಲ್ಲಿ ಬರಗಾಲದ ಚರ್ಚೆ ನಡೆಯುತ್ತಿದೆ, ರಾಜ್ಯದ 128 ತಾಲ್ಲೂಕುಗಳಲ್ಲಿ ತೀವ್ರವಾದ ಬರಗಾಲವಿದೆ. ಎಂತೆಂಥ ವಿಚಾರಗಳು ಬರಗಾಲದ ಚರ್ಚೆಯಲ್ಲಿ ಬರುತ್ತದೆ.

ಮಾನ್ಯ ಪ್ರಕಾಶ್‌ರವರೆ, ನೀವು ಅಸಮರ್ಥರು ಎಂದು ನಾನು ಹೇಳುವುದಿಲ್ಲ. ನೀವು ಉತ್ತರ ಕೊಡುವುದಕ್ಕಾಗುವುದಿಲ್ಲ, ಜಗದೀಶ್ ಶೆಟ್ಟರ್‌ರವರು ಉತ್ತರ ಕೊಡುವುದಕ್ಕಾಗುವುದಿಲ್ಲ, ಆಚಾರ್ಯರವರು ಉತ್ತರ ಕೊಡುವುದಕ್ಕಾಗುವುದಿಲ್ಲವೆಂದು ನಾನು ಹೇಳುವುದಕ್ಕಾಗುವುದಿಲ್ಲ. ಆದರೆ ಪ್ರಜಾಪ್ರಭುತ್ವ ವ್ಯವಸ್ಥೆಯೊಳಗೆ ಅಸೆಂಬ್ಲಿ ನಡೆಯುವಾಗ ಯಾರೋ ಮಂತ್ರಿಗಳು ಉತ್ತರ ಕೊಟ್ಟುಕೊಳ್ಳುತ್ತಾರೆ, ನನಗೂ ಉತ್ತರ ಕೊಡುವುದಕ್ಕೆ ಶಕ್ತಿ ಇದೆ. ಜಗದೀಶ್ ಶೆಟ್ಟರ್‌ರವರಿಗೂ ಉತ್ತರ ಕೊಡುವುದಕ್ಕೆ ಶಕ್ತಿ ಇದೆಯೆಂದು ಹೇಳಿ ಉಪ ಮುಖ್ಯಮಂತ್ರಿಯಾಗಿರುವವರು ಹಣಕಾಸಿನ ಮಂತ್ರಿಗಳು ಅಸೆಂಬ್ಲಿಗೆ ಬರದೇ ಹೊರಗಡೆ ಪ್ರವಾಸ ಮಾಡಿ ಪಕ್ಷವನ್ನು ಕಟ್ಟುತ್ತೇವೆ ಎಂದು ಹೋದರೆ ಇದು ಈ ಸದನಕ್ಕೆ ಗೌರವ ತರತಕ್ಕಂಥ ವಿಚಾರವೇ ತಾವೇ ಹೇಳಿ ನೋಡೋಣ.

ಶ್ರೀ ವಾಟಾಳ್ ನಾಗರಾಜ್ :- ಈಗ ಯಡಿಯೂರಪ್ಪನವರು ವಿಕಾಸ ಯಾತ್ರೆ ಎಂದು ಹೊರಗಡೆ ಇದ್ದಾರೆ. ಆದರೆ ಬೆಂಗಳೂರಿನಲ್ಲಿಯೇ ಇರತಕ್ಕಂಥ ಮುಖ್ಯಮಂತ್ರಿಗಳು ಸದನದಲ್ಲಿ ಇಲ್ಲವಲ್ಲ. ಅದನ್ನು ನೀವು ಹೇಳುತ್ತಲೇ ಇಲ್ಲವಲ್ಲ. ಮೊದಲು ಅದನ್ನು ನೀವು ಹೇಳಿ. ಮುಖ್ಯಮಂತ್ರಿಗಳು ಯಾವ ಯಾತ್ರೆಗೆ ಹೋಗಿದ್ದಾರೆ?

ಶ್ರೀ ಸಿದ್ಧರಾಮಯ್ಯ :- ಅದರ ಬಗ್ಗೆ ನೀವೇ ಹೇಳಲಿ ಎಂದು ನಾನು ನಿಮಗೆ ಬಿಟ್ಟುಬಿಟ್ಟಿದ್ದೇನೆ. ನೀವು ಅದನ್ನು ಹೇಳಿಯೇ ಹೇಳುತ್ತೀರಿ ಎಂದು ನಾನು ನಿಮಗೆ ಬಿಟ್ಟುಬಿಟ್ಟೆ.

ಶ್ರೀ ವಾಟಾಳ್ ನಾಗರಾಜ್ :- ಒಳ್ಳೆಯದಾಯಿತು.

ಶ್ರೀ ಸಿದ್ಧರಾಮಯ್ಯ :- ಮಾನ್ಯ ಅಧ್ಯಕ್ಷರೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇವರು ಈ ರೀತಿ ಮಾಡಿರುವುದು ಈ ಸದನಕ್ಕೆ ಗೌರವ ತರತಕ್ಕಂಥ ವಿಚಾರವಲ್ಲ. ಅದನ್ನೇ ಹೇಳಿದ್ದು ಮಾನ್ಯ ವಿರೋಧ ಪಕ್ಷದ ನಾಯಕರು. ಇದು ಹಕ್ಕುಚ್ಯುತಿಯಾಗುತ್ತದೆ ಎಂದು ಹೇಳಿದರೆ ಅವರಿಗೆ ಕೋಪ. ಯಾವ ಹಕ್ಕುಚ್ಯುತಿ? ಏನು ಹಕ್ಕುಚ್ಯುತಿ ? ಏನು ಹೇಳುತ್ತಾರೆ? ಎಂದು ಹೇಳುತ್ತಾರೆ. ನಾನು ಯಾವಾಗಲೂ ನೋಡಿದ್ದೇನೆ. ಉತ್ತರ ಕೇಳಿದರೆ, 220 ಕೋಟಿ ರೂಪಾಯಿಗೆ ಕಾರ್ಯಕ್ರಮವನ್ನು ಅನೌನ್ಸ್ ಮಾಡಿಬಿಟ್ಟು, ಅದನ್ನು ಬಜೆಟ್‌ನಲ್ಲಿ ಹೇಳಿಲ್ಲ, ಸುಮ್ಮನೆ ಈಗ ಅನೌನ್ಸ್ ಮಾಡಿದ್ದೇನೆ ಎಂದು ಹೇಳುವುದು. ಅದು Finance Bill ನಲ್ಲಿ ಇಲ್ಲ, appropriation Bill ನಲ್ಲಿ ಇಲ್ಲವೆಂದು ಹೇಳುವುದು. ಬಿಲ್‌ಗಳು ಬಹಳ ಮುಖ್ಯ ಎಂದು ವಾದ ಮಾಡುತ್ತೀರಿ. ಬೆಳಿಗ್ಗೆ ಏನು appropriation Bill ಇತ್ತೇ? ಅದನ್ನು ಆಮೇಲೆ ಮಾಡಿಕೊಳ್ಳಬಹುದಾಗಿತ್ತು ಅಥವಾ Ordinance ಮಾಡಿಕೊಳ್ಳಬಹುದು, replace ಮಾಡುವ ಬಿಲ್ ಇತ್ತೇ? ಈ ರೀತಿ ಕೋಪ ಮಾಡಿಕೊಂಡು "ನೀವೆಲ್ಲ irresponsible ಆಗಿ ಮಾತನಾಡುತ್ತೀರಿ" ಎಂದು ನಮ್ಮ ಮೈಮೇಲೆ ಬಿದ್ದುಬಿಟ್ಟಿರಿ. ಮಾನ್ಯ ಅಧ್ಯಕ್ಷರೆ, ನಿಮಗೆ ಇದ್ದಕ್ಕಿದ್ದ ಹಾಗೆ ಏಕೆ ಕೋಪ ಬರುತ್ತದೆಯಲ್ಲ.

ಅಧ್ಯಕ್ಷರು :- ಎಲ್ಲಾ ನೀವು ತಿವಿದು, ತಿವಿದು....

ಶ್ರೀ ಎಸ್. ಸಿದ್ಧರಾಮಯ್ಯ :- ನೀವು ಅವರಿಗೆ ಛೀಮಾರಿ ಹಾಕುವುದು ಬಿಟ್ಟು ನಮ್ಮ ಕಡೆ ತಿರುಗಿಕೊಳ್ಳುತ್ತೀರಿ. ನಿನ್ನೆ adjournment motion ತೆಗೆದುಕೊಂಡು ಬಂದಾಗ ಅದನ್ನು ನೀವು ಕನ್ವರ್ಟ್ ಮಾಡಿ ಬೆಳಿಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ ಎಂದು ಹೇಳಿದಿರಿ. ಇಂತಹ ವಿಚಾರ ಬಿಟ್ಟು ಇನ್ನೆಂತಹ

ವಿಚಾರವನ್ನು ಚರ್ಚೆ ಮಾಡುತ್ತೀರಿ. ಈ ರೀತಿಯಾದರೆ ಹೇಗೆ? ಅವರು ಒಪ್ಪಿಕೊಂಡು......

ಅಧ್ಯಕ್ಷರು :- ಸುಳ್ಳು ಹೇಳಿದರೆ ಹೇಗೆ? ಬೆಳಿಗ್ಗೆ ಎಂದು ಹೇಳಿಲ್ಲ.

ಶ್ರೀ ಸಿದ್ಧರಾಮಯ್ಯ :- ನಾಳೆ ಎಂದು ಹೇಳಿದ್ದಾರೆ. ನಾಳೆ ಎಂದರೆ ಬೆಳಿಗ್ಗೆ ಎಂದು ಅಲ್ಲವೇ? ನಾಳೆ ಎಂದರೆ first opportunity ಎಂದು.

ಡಾ|| ಹೆಚ್.ಸಿ. ಮಹಾದೇವಪ್ಪ :- ಮಾನ್ಯ ಅಧ್ಯಕ್ಷರೆ, ನೀವು ಹಿಂದೆ ತುಂಬಾ ಸ್ನೇಹದಿಂದ ಇದ್ದೀರಿ, ಇತ್ತೀಚೆಗೆ ಏಕೋ ಬರುತ್ತಾ ಬರುತ್ತಾ ಸಂಪೂರ್ಣವಾಗಿ change ಆಗಿಬಿಟ್ಟಿದ್ದೀರಿ. ನೀವು ಈ ರೀತಿ change ಆಗಿರುವುದು ಸರಿಯಲ್ಲ.

ಶ್ರೀ ಎಸ್. ಸಿದ್ಧರಾಮಯ್ಯ :- ಮಾನ್ಯ ಅಧ್ಯಕ್ಷರು ಏನೇ ಮಾಡಿದರೂ ನಾವು ಸ್ನೇಹ ಬಿಡುವ ಹಾಗೆ ಇಲ್ಲವಲ್ಲ. Human relations ಏನಿದೆ ಅದನ್ನು ಕಳೆದುಕೊಳ್ಳುವ ಹಾಗೆ ಇಲ್ಲ. ಅದು ಹೋಗಿಬಿಟ್ಟರೆ ಮಾನವನಾಗುವುದಕ್ಕೆ ಆಗುವುದಿಲ್ಲವಲ್ಲ. ಆ ಕಾರಣದಿಂದ ಏನಾದರೂ ಇರಲಿ, ನೀವು ಕೋಪಿಸಿಕೊಳ್ಳಿ, ಆದರೆ ಮಾನ್ಯ ಯಡಿಯೂರಪ್ಪನವರನ್ನು ಕೂಡಲೇ ಇಲ್ಲಿಗೆ ಕರೆಸಿರಿ ಎಂದು ಹೇಳಿ ಆ ಕೆಲಸವನ್ನು ಅವರಿಗೆ ಮಾಡಬೇಕಾಗಿತ್ತು. ಅದುಬಿಟ್ಟು ನಮ್ಮ ಮೇಲೆ ನೀವು ರೇಗಿಕೊಂಡು ಕುಳಿತುಕೊಂಡುಬಿಟ್ಟರೆ, ಕುಡಿಯುವುದಕ್ಕೆ ನೀರಿಲ್ಲವೆಂದು ಹೇಳುತ್ತಾರಲ್ಲ., ನಾಳೆ ನಾವು ಜನಗಳಿಗೆ ಹೋಗಿ ಏನು ಹೇಳಬೇಕು? ಮಾನ್ಯ ಜಗದೀಶ್ ಶೆಟ್ಟರ್‌ರವರೆ ನೀವು ಹೇಳಿರುವ ಪ್ರಕಾರ ಕುಡಿಯುವ ನೀರಿಗೆ 13.50 ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಿದ್ದೀರಿ. Task Force ಗೆ 7 ರಿಂದ 8 ಲಕ್ಷ ಮಾತ್ರ ಕೊಟ್ಟಿರುವುದು. ಕುಡಿಯುವ ನೀರಿಗೆ ಅವರಿಗೆ ಬರ ಇಲ್ಲವೇ?

ಮಾನ್ಯ ಸದಸ್ಯರು :- ಅದು ಹಳೇ balance ಗೆ ಆಗುತ್ತದೆ.

ಶ್ರೀ ಸಿದ್ಧರಮಯ್ಯ :- ಕುಡಿಯುವ ನೀರಿಗೆ ತೊಂದರೆ ಇಲ್ಲವೇ? Last six months ನಿಂದ 7 ಲಕ್ಷ ರೂಪಾಯಿ ಕೊಟ್ಟಿದ್ದೇವೆಂದು ಹೇಳಿದಿರಲ್ಲ, ಕರ್ನಾಟಕದಲ್ಲಿ ಕುಡಿಯುವ ನೀರಿನ ಸಮಸ್ಯೆ ಇಲ್ಲವೆಂದು ಆಯಿತು, ಬರ ಇಲ್ಲವೆಂದಾಯಿತು. 128 ತಾಲ್ಲೂಕುಗಳಲ್ಲಿ 4,500 ಹಳ್ಳಿಗಳಲ್ಲಿ ನೀರು ಇಲ್ಲವೆಂದು ಏಕೆ ಹೇಳಿದಿರಿ. ನೀವೇ 451 ಹಳ್ಳಿಗಳಲ್ಲಿ ಬಹಳ ಕಷ್ಟವೆಂದು ಹೇಳಿದ್ದೀರಿ. ಮೇವಿಗೆ 2,87,000,00 ರೂಪಾಯಿ ಬಿಡುಗಡೆ ಮಾಡಿದ್ದೇವೆಂದು ಹೇಳಿ, ನೀವು

ಜಾನುವಾರುಗಳಿಗೆ ಮೇವನ್ನು ಯಾವ್ಯಾವ ತಾಲ್ಲೂಕಿನಲ್ಲಿ, ಎಷ್ಟೆಷ್ಟು ಕೊಟ್ಟಿದ್ದೀರಿ? ಎಷ್ಟು ಮೇವು ಬೆಳೆದಿದ್ದೀರಿ? ಎಷ್ಟು ಮೇವು ಒದಗಿಸಿದ್ದೀರಿ ಹೇಳಿ. ಅದಕ್ಕೆ ಉತ್ತರ ಇಲ್ಲ. ಜಾನುವಾರುಗಳು ಕಸಾಯಿ ಖಾನೆಗೆ ಹೋಗುತ್ತವೆ, ಅವುಗಳಿಗೆ ಮೇವಿಲ್ಲ, ಕುಡಿಯುವುದಕ್ಕೆ ನೀರಿಲ್ಲ, ಇಷ್ಟೆಲ್ಲವಾದರೂ ಕೂಡ ನೀವು ಗೋಶಾಲೆಗಳನ್ನು ಎಷ್ಟು ತೆಗೆದಿದ್ದೀರಿ ಎಂದು ಮಾನ್ಯ ಜಗದೀಶ್ ಶೆಟ್ಟರ್‌ರವರು ಹೇಳಬೇಕು. ಅಲ್ಲಿ ಎಷ್ಟು ಜಾನುವಾರುಗಳು ಇವೆ? ಎಷ್ಟು ನೀರು ಖರ್ಚು ಮಾಡಿದ್ದೀರಿ? ಎಷ್ಟು ಬೋರ್‌ವೆಲ್‌ಗಳನ್ನು ತೋಡಿಸಿದ್ದೀರಿ? ಎಂದು ಅದರ ಬಗ್ಗೆ ಎಲ್ಲಾ ಹೇಳಬೇಕು. ಗೋಶಾಲೆಗಳಲ್ಲಿ ಜಾನುವಾರುಗಳು ಇವೆಯೋ, ಇಲ್ಲವೋ ಎಂದು ನೋಡಬೇಕು.

ಚಿತ್ರದುರ್ಗದ ಹತ್ತಿರ ಒಂದು ಗೋಶಾಲೆ ಇದೆ, ಅಲ್ಲಿ ನೋಡಿದೆ ನಾಲ್ಕೈದು ಹಸುಗಳು ಇದ್ದವು. 128 ತಾಲ್ಲೂಕುಗಳಲ್ಲಿ 16 ಗೋಶಾಲೆಗಳು. ಆಯಿತು, ಆದರೆ ಮೇವಿಗೆ ಬಿಡುಗಡೆ ಮಾಡಿರುವ ಹಣವೆಷ್ಟು ಎಂದರೆ 2,87,000,00 ರೂಪಾಯಿ. ಆದರೆ ಎಲ್ಲಿ ಮೇವು ತೆಗೆದುಕೊಂಡಿದ್ದೀರಿ. ಹೇಳಿ ನೋಡೋಣ. ಎಲ್ಲೂ ಇಲ್ಲ. ಈಗ ನಿಮ್ಮ Constituency ನಲ್ಲಿ ಕೂಡ ಬರಗಾಲವಿದೆ. ನಮಗೆ ಮೇವು ಕೊಟ್ಟಿರುವುದು ಗೊತ್ತಿಲ್ಲ. Animal Husbandry Department ನವರು ಮೇವು ಬೆಳೆದು ಎಲ್ಲೂ ಕೊಟ್ಟಿಲ್ಲ. ಹಾಗಾದರೆ ನೀವು ಗೋವುಗಳನ್ನು ರಕ್ಷಣೆ ಮಾಡುವುದು ಹೇಗೆ? ಜಾನುವಾರುಗಳ ರಕ್ಷಣೆಯಾಗಬೇಕಲ್ಲ. ಕುಡಿಯುವುದಕ್ಕೆ ನೀರಿಲ್ಲ, ಜಾನುವಾರುಗಳ ರಕ್ಷಣೆಯಿಲ್ಲ.

ಇನ್ನು ಜನರಿಗೆ ಕೆಲಸ, ನೀವು D.C ಗಳ ಹತ್ತಿರ P.D. account ನಲ್ಲಿ 221 ಕೋಟಿ ರೂಪಾಯಿಯಿದೆ. ಆದರೆ ಅವರು ಕಳೆದ ವರ್ಷಕ್ಕೆ , ಬರಗಾಲಕ್ಕೆ ನಮಗೆ ಇಷ್ಟು ದುಡ್ಡು ನಿಭಾಯಿಸುವುದಕ್ಕೆ ಬೇಕಾಗುತ್ತದೆ ಎಂದು ಇವರಿಗೆ 1,262 ಕೋಟಿ ರೂಪಾಯಿ ಕೇಳಿದ್ದಾರೆ. ನೀವು 494 ಕೋಟಿ ರೂಪಾಯಿ ಕೊಟ್ಟಿದ್ದೀವಿ ಎಂದು ಹೇಳುತ್ತೀರಿ. ನಿಮ್ಮ ಸರ್ಕಾರದಿಂದ ಖರ್ಚುಮಾಡಿರುವುದು ಎಷ್ಟು? 150 ಕೋಟಿ ರೂಪಾಯಿ. ಮಾನ್ಯ ಜಗದೀಶ್ ಶೆಟ್ಟರ್‌ರವರೆ ರಾಜ್ಯ ಸರ್ಕಾರದ ಬೊಕ್ಕಸದಿಂದ ಕೊಟ್ಟಿರುವುದು ಅಷ್ಟೇ ಅಲ್ಲವೇ? ದುಡ್ಡು ತುಂಬಿ ತುಳುಕುತ್ತಿದೆ ಎಂದ ಮೇಲೆ ಅಷ್ಟಕ್ಕೆ ಏಕೆ ನಿಲ್ಲಿಸಿಬಿಟ್ಟಿದ್ದೀರಿ? ಇನ್ನೂ ಒಂದು ಸ್ವಲ್ಪ ಹೆಚ್ಚಾಗಿ ಕೊಡಿ. ದುಡ್ಡು ಬೇಕಾದಷ್ಟು ಇದೆಯಲ್ಲ, ಎಲ್ಲೆಲ್ಲೋ ತೆಗೆದುಕೊಂಡು ಖರ್ಚು ಮಾಡುತ್ತೀರಲ್ಲ? Non plan ಕಡೆ ಎಲ್ಲಾ ಖರ್ಚು ಮಾಡುತ್ತಿದ್ದೀರಿ. ಕಾರ್ಯಕ್ರಮಗಳನ್ನು ಅನೌನ್ಸ್ ಮಾಡುತ್ತಿದ್ದೀರಿ. ನಿಮಗೆ ದುಡ್ಡಿಗೆ ತೊಂದರೆ ಇಲ್ಲ, ಇಲ್ಲಿ ಕೊಡಿ. ಕೇಂದ್ರ ಸರ್ಕಾರದ ಕಡೆ ಏಕೆ ಕೈ

ತೋರಿಸಿಕೊಂಡು ಕುಳಿತುಕೊಂಡಿದ್ದೀರಿ? ರಾಜ್ಯ ಸರ್ಕಾರದಿಂದ 150 ಕೋಟಿ ರೂಪಾಯಿ, ಕೇಂದ್ರ ಸರ್ಕಾರದಿಂದ 340 ಕೋಟಿ ರೂಪಾಯಿ ಬಂದಿದ್ದರೂ ಕೂಡ, ನಾವು 150 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ, ಕೇಂದ್ರ ಸರ್ಕಾರದವರು ಕೊಟ್ಟಿಲ್ಲವೆಂದರೆ, ಹಾಗಾದರೆ ನಿಮ್ಮದು commitment ಏನು? ನೀವು ಏನು ಮಾಡಿದಿರಿ? 128 ತಾಲ್ಲೂಕುಗಳಲ್ಲಿ ಎಷ್ಟು ಜನರಿಗೆ ಕೆಲಸವನ್ನು ಕೊಟ್ಟಿದ್ದೀರಿ? ಎಷ್ಟು man days ಅನ್ನು creat ಮಾಡಿದಿರಿ?

ನಮ್ಮ ಕನಾಟಕದ ಹಳ್ಳಿಗಾಡಿನಲ್ಲಿರುವ 70 ಲಕ್ಷ ಕುಟುಂಬಗಳಲ್ಲಿ ಶೇಕಡ 62 ರಷ್ಟು ಕೂಲಿ ಕಾರ್ಮಿಕರು ಇದ್ದಾರೆ. ಅದರಲ್ಲಿ 58% ಮಹಿಳೆಯರಿದ್ದಾರೆ. 42% ಪುರುಷರಿದ್ದಾರೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ Agricultural labourers ಇರುವಾಗ, ನೀವು ಎಷ್ಟು ದುಡ್ಡು ಕೊಟ್ಟಿದ್ದೀರಿ? ಯಾವ್ಯಾವ ತಾಲ್ಲೂಕಿನಲ್ಲಿ ಎಷ್ಟು ಜನರಿಗೆ ಕೆಲಸ ಕೊಡಬೇಕಾಗಿತ್ತು? ಯಾವ್ಯಾವ ಬಾಬ್ತಿಗೆ ಖರ್ಚು ಮಾಡಿದ್ದೀರಿ? ಆಸ್ಪತ್ರೆಗಳಲ್ಲಿ ಔಷಧಿಗಳಿಗೆ ದುಡ್ಡು ಕೊಟ್ಟಿದ್ದೀರಾ, ಇಲ್ಲವೇ? ಜಾನುವಾರುಗಳ ಕಾಯಿಲೆ ರಕ್ಷಣೆಗೆ ದುಡ್ಡು ಕೊಟ್ಟಿದ್ದೀರಾ ಇಲ್ಲವೇ? ಜನರಿಗೆ ಕೆಲಸಕ್ಕೆ ಎಷ್ಟು ದುಡ್ಡು ಬೇಕಾಗಿತ್ತು, ಅದಕ್ಕೆಲ್ಲಾ ದುಡ್ಡು ಕೊಟ್ಟಿದ್ದೀರೋ ಇಲ್ಲವೋ? ಎಷ್ಟು man days ಅನ್ನು creat ಮಾಡಿದ್ದೀರಿ? ದವಸಧಾನ್ಯ ಎಷ್ಟು ಕೊಟ್ಟಿದ್ದೀರಿ? ಅದೆಲ್ಲ ಇರಬೇಕಲ್ಲ.

ಇದೆಲ್ಲಾವನ್ನು warfooting ನಲ್ಲಿ ಮಾಡಬೇಕೆಂದು ಒತ್ತಾಯ ಮಾಡಿದರೂ ಕೂಡ, ಎಲ್ಲೂ ಕೂಡ ಈ ಬರ ಪರಿಹಾರದ ಬಗ್ಗೆ ರಿವ್ಯೂ ಮಾಡುವುದಾಗಲಿ ಇನ್ಸ್‌ಪೆಕ್ಷನ್ ಮಾಡುವುದಾಗಲಿ, ಹಳ್ಳಿಗಳಿಗೆ ಹೋಗುವುದಾಗಲಿ ಎಲ್ಲೂ ಕೂಡ ಮಾಡುತ್ತಿಲ್ಲ. ಜಿಲ್ಲಾ ಮಂತ್ರಿಗಳಿದ್ದಾರೆ, ಕಂದಾಯ ಮಂತ್ರಿಗಳಿದ್ದಾರೆ, ರೂರಲ್ ಡೆವಲಪ್‌ಮೆಂಟ್ ಮಂತ್ರಿಗಳಿದ್ದಾರೆ, ಕೃಷಿ ಮಂತ್ರಿಗಳಿದ್ದಾರೆ, ಮತ್ತು ಹಣಕಾಸಿನ ಮಂತ್ರಿಗಳಿದ್ದಾರೆ. ನನಗೆ ಗೊತ್ತಿರುವ ಮಟ್ಟಿಗೆ ಮಾನ್ಯ ಜಗದೀಶ್ ಶೆಟ್ಟರ್‌ರವರು, ನನ್ನ ಚುನಾವಣೆ ಸಮಯದಲ್ಲಿ ಮೈಸೂರಿಗೆ ಬಂದಿದ್ದೆ, ಅದಾದಮೇಲೆ ಬರುವುದಕ್ಕಾಗಲಿಲ್ಲವೆಂದು ಹೇಳಿದರು. ನೀವು Assembly ಬಂದ ಮೇಲೆ ಮನಃ ಎಲ್ಲೂ ಹೋದ ಹಾಗೆ ಕಾಣುವುದಿಲ್ಲ. ನೀವೇನೋ Assembly ನಲ್ಲಿ ಇದ್ದೀರಿ, ನಿಮ್ಮ ಅಧಿಕಾರಿಗಳಾದರೂ ಹೋಗಿದ್ದಾರೆ? ಅದರಲ್ಲೂ ಬರಗಾಲದ ದುಡ್ಡು ಎಂದರೆ ತಿನ್ನುವವರು ಬಹಳ ಇದ್ದಾರೆ. ಬರಗಾಲ ಎಂದರೆ ಹಬ್ಬ ಇದ್ದಹಾಗೆ ಕೆಲವು ಅಧಿಕಾರಿಗಳಿಗೆ, ಅಧಿಕಾರಿಗಳಿಗೆ ಏಕೆ ಹೇಳುವುದು? ರಾಜಕಾರಣಿಗಳಿಗೆ, ಕಾಂಟ್ರಾಕ್ಟರುಗಳಿಗೆ, ಹುಚ್ಚಿ ಮದುವೆಯಲ್ಲಿ ಉಂಡವನೇ ಜಾಣ. ಈ ರೀತಿಯಾಗುತ್ತಿದೆ.

ನಾನು ಒಂದು ವಾರದ ಹಿಂದೆ ಅಥಣಿಗೆ ಹೋಗಿದ್ದೆ. ಮಾನ್ಯ ಜಗದೀಶ್ ಶೆಟ್ಟರ್‌ರವರೆ ಅಲ್ಲಿ ಪ್ರವಾಹ ಬಂದಿತ್ತು. 90 ಹಳ್ಳಿಗಳು ಪ್ರವಾಹ ಪೀಡಿತವಾಗಿವೆ, ಅವುಗಳು ಪದೇಪದೇ ಪ್ರವಾಹಕ್ಕೆ ಸಿಕ್ಕಿಹಾಕಿಕೊಳ್ಳುತ್ತವೆ, ಜನ ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳುತ್ತಿದ್ದಾರೆ, ಅವುಗಳನ್ನು ಶಿಫ್ಟ್ ಮಾಡಬೇಕು ಎಂದು ಹೇಳಿದರಿ. ಆದರೆ ಇವತ್ತಿನವರೆಗೆ ಅದಕ್ಕೆ ಜಾಗವನ್ನು ತೆಗೆದುಕೊಂಡಿಲ್ಲ. 23 ಕೋಟಿ ರೂಪಾಯಿ ಜಮೀನು ಕ್ರಯ ಮಾಡುವುದಕ್ಕೆ ಬಿಡುಗಡೆ ಮಾಡಿದ್ದೀವಿ ಎಂದು ಹೇಳಿದ್ದೀರಿ. ಆದರೆ ಅದು ಇನ್ನೂ ಕೂಡ ಹಾಗೇ ಇದೆ. ಅಲ್ಲಿ ಜಮೀನು acquire ಮಾಡಲಿಲ್ಲ, ಅವರಿಗೆ ಮನೆ ಕಟ್ಟಿಕೊಡಲಿಲ್ಲ. ಅಲ್ಲಿ rehabilitation ಕೆಲಸ ಆಗಲೇ ಇಲ್ಲ. ಅಲ್ಲಿ ಪ್ರವಾಹ ಬಂದು ಬೆಳೆ ನಷ್ಟವಾಯಿತಲ್ಲ, ಅದಕ್ಕೆ ಒಂದೊಂದು ಎಕರೆಗೆ ಒಂದೊಂದು ಸಾವಿರ ರೂಪಾಯಿ ಕೊಡುತ್ತೇವೆಂದು ಎಂದು ಹೇಳಿ ಸರ್ಕಾರ ಒಪ್ಪಿಕೊಂಡು ಬಂದಿದ್ದೀರಿ. ಐದು ಎಕರೆಯಲ್ಲಿ ಬೆಳೆ ನಷ್ಟವಾದರೆ ಐದು ಸಾವಿರ ರೂಪಾಯಿ ಕೊಡುತ್ತೇವೆಂದು ಒಪ್ಪಿಕೊಂಡಿದ್ದೀರಿ. ಅನೇಕ ಜನರಿಗೆ ಪರಿಹಾರವೇ ಸಿಕ್ಕಿಲ್ಲ.

(4 : 30 pm)

5 ಎಕರೆಯವರಿಗೆ 5 ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು ಒಪ್ಪಿಕೊಂಡಿದ್ದಿರಾ, ಅನೇಕ ಜನರಿಗೆ ಪರಿಹಾರವೇ ಸಿಕ್ಕಿಲ್ಲ. ನನಗೆ ಬಂದು ಅರ್ಜಿಯನ್ನು ಕೊಟ್ಟಿದ್ದಾರೆ.

ಡಾ॥ ಹೆಚ್.ಸಿ. ಮಹದೇವಪ್ಪ :- ಮಾನ್ಯ ಬಿ.ಎಸ್. ಯಡಿಯೂರಪ್ಪನವರು ವಿರೋಧಪಕ್ಷದ ನಾಯಕರಾಗಿ ಇದ್ದಾಗ, ಪ್ರವಾಹ ಬಂದಾಗ ಒಂದು ಎಕರೆಗೆ 10, 15 ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದರು. ಈಗ ಒಂದು ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಸಿದ್ಧರಾಮಯ್ಯ :- ಆಗ ನನ್ನ ಜೊತೆಯಲ್ಲಿ ಡಾ॥ ಹೆಚ್.ಸಿ. ಮಹದೇವಪ್ಪನವರು ಇದ್ದರು. ಮಾನ್ಯ ಬಿ.ಎಸ್.ಯಡಿಯೂರಪ್ಪನವರು ವಿರೋಧಪಕ್ಷದ ನಾಯಕರಾಗಿದ್ದಾಗ, ಬೆಳಗಾಂ D.C.ಕಛೇರಿ ಮುಂದೆ ಹತ್ತು ಸಾವಿರ ರೂಪಾಯಿಗಳನ್ನು ಒಂದು ಎಕರೆಗೆ ಕೊಡಬೇಕೆಂದು, ಕಬ್ಬು ಬೆಳೆ ನಷ್ಟವಾಗಿದೆಯೆಂದು, ಅವರು ಧರಣೀ ಕುಳಿತಿದ್ದರು. ಈಗ ಇವರೇ Finance Minister ಆಗಿದ್ದಾರೆ. ಅವರಿಗೆ ಎಷ್ಟೆ ಬೆಳೆ ನಷ್ಟವಾಗಿರಲಿ, ಅವರಿಗೆ 10 ಸಾವಿರ ರೂಪಾಯಿಗಳನ್ನು, that is the maximum. ಅವರು ವಿರೋಧಪಕ್ಷದಲ್ಲಿದ್ದಾಗ D.C ಕಛೇರಿ ಮುಂದೆ ಧರಣಿ ಕುಳಿತು, ಈಗ ಅಧಿಕಾರದಲ್ಲಿ ಹಣಕಾಸಿನ ಮಂತ್ರಿಯಾದಾಗ, ಇಲ್ಲ ಇದಕ್ಕಿಂತ ಹೆಚ್ಚಿಗೆ

ಕೊಡುವುದಕ್ಕಾಗುವುದಿಲ್ಲವೆಂದರೆ, ಇವತ್ತು ಇವರು ಪ್ರವಾಹದಿಂದ ನೊಂದಂಥ ಜನರಿಗೂ ಕೂಡ ಪರಿಹಾರಗಳನ್ನು ಸರಿಯಾಗಿ ಕೊಟ್ಟಿಲ್ಲ. ಮಾನ್ಯ ಅಧ್ಯಕ್ಷರೆ, ಬರದಿಂದ ಕಷ್ಟದಲ್ಲಿ ಸಿಕ್ಕಿಕೊಂಡಿರುವಂತಹ ಜನರಿಗೆ ಕೆಲಸವನ್ನು ಕೊಡುವುದಾಗಲಿ, ಕುಡಿಯುವುದಕ್ಕೆ ನೀರು ಕೊಡುವುದಾಗಲಿ, ಏನೇನೂ ಮಾಡಿಲ್ಲ.

ಇದು ಒಂದು ಕಡೆಯಾದರೆ, ಮಾನ್ಯ ಎಂ.ಪಿ. ಪ್ರಕಾಶ್‌ರವರೆ, ಹಳ್ಳಿಗಾಡಿನಲ್ಲಿ ವಿದ್ಯುತ್ ವಿಚಾರದಲ್ಲಂತೂ ದೊಡ್ಡ ಕಷ್ಟಕ್ಕೆ ಬಂದು ಬಿಟ್ಟಿದೆ. ನೀವು ಆವತ್ತು ವಿದ್ಯುತ್ ಅನ್ನು purchase ಮಾಡುತ್ತಿದ್ದೇವೆಂದು ಹೇಳಿದ್ದೀರಿ. ಹಳ್ಳಿಗಳಲ್ಲಿ ಭಾರೀ ಕಷ್ಟದಲ್ಲಿದೆ, ದಿನಕ್ಕೆ ಎರಡು ಗಂಟೆಗಳೂ ವಿದ್ಯುತ್ ಇಲ್ಲ. ವಿದ್ಯುತ್ ಇಲ್ಲವೆಂದರೆ ಕುಡಿಯುವ ನೀರಿಗೆ ಏನು ಮಾಡುವುದು? ಬೋರ್‌ವೆಲ್‌ಗಳಿಗೆ ಪಂಪ್‌ಗಳನ್ನು ಹಾಕಿಕೊಂಡು ಹೊಡೆದುಕೊಳ್ಳುವುದು ಬೇರೆ. ನೀರಿನ ಟ್ಯಾಂಕ್‌ಗಳಿಗೆ ವಿದ್ಯುತ್ ಬೇಕಲ್ಲಾ, ಪಂಪ್‌ಸೆಟ್‌ಗಳಿಗೆ ವಿದ್ಯುತ್ ಬೇಕಲ್ಲಾ, ಇವತ್ತು ಬಹಳ ಭೀಕರವಾದಂಥ ವಿದ್ಯುತ್ ಕ್ಷಾಮ ಇದೆ. ಪ್ರೈವೇಟ್‌ನವರು ಸುಮಾರು ಮೂರು ಸಾವಿರ ಚಿಲ್ಲರೆ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುತ್ತಿದ್ದಾರೆ. ಅವರ ಹತ್ತಿರ ವಿದ್ಯುತ್‌ಅನ್ನು ಕೊಂಡುಕೊಳ್ಳಿ, ಅವರು ಹೊರಗಡೆ ಮಾರಾಟ ಮಾಡುವುದನ್ನು ನಿಲ್ಲಿಸಿ, ಬರಗಾಲವಿದೆಯೆಂದು ಹೇಳಿ, ನಾವೇ ವಿದ್ಯುತ್ ತೆಗೆದುಕೊಳ್ಳುತ್ತೇವೆಂದು ಹೇಳಿ ಅವರಿಂದ ತೆಗೆದುಕೊಳ್ಳಿ, ಪ್ರೈವೇಟ್‌ನವರು ಸುಮಾರು ಮೂರು ಸಾವಿರ ಚಿಲ್ಲರೆ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯನ್ನು ಮಾಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :- ಅದು ಒಂದು ದೊಡ್ಡ ದುರಂತ.

ಶ್ರೀ ಸಿದ್ಧರಾಮಯ್ಯ :- ಅದು ಏನೇ ಇರಲಿ, ದುರಂತಗಳಿಗೆ ಆಮೇಲೆ ಹೋಗೋಣ. ಈಗ ಸದ್ಯಕ್ಕೆ ವಿದ್ಯುತ್ ಅನ್ನು ಕೊಡಬೇಕಲ್ಲಾ, ಕುಡಿಯುವ ನೀರನ್ನು ಕೊಡಬೇಕಲ್ಲಾ, ರೈತರಿಗೆ ಇಷ್ಟೊಂದು ತೊಂದರೆಗಳು ಇರುವಾಗ, ಇವರಿಗೆ seriousness ಕಾಣುವುದಿಲ್ಲ ನೋಡಿ, seriousness ಇದ್ದಿದ್ದರೆ ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಪ್ರವಾಸಕ್ಕೆ ಹೋಗುತ್ತಿರಲಿಲ್ಲ. ಅವರ ಪಕ್ಷದ ಕೆಲಸವನ್ನು ಮಾಡುವುದಕ್ಕೆ ಹೋಗಿದ್ದಾರೆ. ಅವರ ಪಕ್ಷದ ಕೆಲಸವನ್ನು 13 ನೇ ತಾರೀಖು ಆದಮೇಲೆ ಮಾಡಿಕೊಳ್ಳಬಹುದಾಗಿತ್ತು. ಯಾವ ಮಂತ್ರಿಗಳಿಗೂ ಕೂಡ seriousness ಇಲ್ಲ, ಜಿಲ್ಲಾ ಉಸ್ತುವಾರಿ ಮಂತ್ರಿಗಳು ಅಲ್ಲೇ ಜಿಲ್ಲೆಗಳಲ್ಲಿ ಕುಳಿತುಕೊಳ್ಳಬೇಕಾಗಿತ್ತು. ಒಂದೊಂದು ಜಿಲ್ಲೆಗಳಿಗೆ ಒಬ್ಬೊಬ್ಬ ಅಧಿಕಾರಿಗಳನ್ನು

incharge ಹಾಕಿದ್ದಾರೆ. ಅವರು ಎಷ್ಟು ದಿವಸ ಹೋಗಿದ್ದಾರೆಂಬ ಮಾಹಿತಿಯನ್ನು ಕೊಡಲಿ, ಯಾವ್ಯಾವ ಅಧಿಕಾರಿಗಳು ಎಷ್ಟೆಷ್ಟು ದಿವಸ ಹೋಗಿಬಂದಿದ್ದಾರೆಂಬುದನ್ನು ಕೊಡಲಿ, ರಿವ್ಯೂ ಮಾಡಿದ್ದಾರೆ, ಎಷ್ಟು inspection ಮಾಡಿದ್ದಾರೆ, ಎಷ್ಟು ಕೆಲಸ ಅಲ್ಲಿ ಮಾಡಿದ್ದಾರೋ, ಇಲ್ಲವೋ, ಎಂಬುದನ್ನು ನೋಡಿಕೊಂಡು ಬಂದಿದ್ದಾರೆ? ಎಂಬುದು ರಿಪೋರ್ಟ್ ಇರಬೇಕಲ್ಲಾ. ಯಾರು ಹೋಗಿಲ್ಲ, ಇದು ವಾಸ್ತವಿಕವಾದಂಥ ಚಿತ್ರ.

ಆ ಕಾರಣದಿಂದ ಸರ್ಕಾರ ನೀವು ಮೈ ಮರೆತಿದ್ದೀರಿ, ಬರಗಾಲದ ಬಗ್ಗೆ ನಿಮಗೆ ಗಂಭೀರವಾಗಿ ಯೋಚನೆ ಇಲ್ಲ. ನೀವು ಸಮರೋಪಾದಿಯಲ್ಲಿ ಇದನ್ನು ಎದುರಿಸುತ್ತಿಲ್ಲವೆನ್ನುವಂಥಾದ್ದು ನಮ್ಮ ಆರೋಪವಾಗಿದೆ. ಜನಗಳು ಕಷ್ಟದಲ್ಲಿರುವಾಗ, ಕುಡಿಯುವುದಕ್ಕೆ ನೀರು ಇಲ್ಲದೇ ಇರುವಾಗ, ಕೆಲಸವಿಲ್ಲದೆ ಇರುವಾಗ, ಹಳ್ಳಿಗಾಡಿನಲ್ಲಿ ವಿದ್ಯುತ್ ಇಲ್ಲದೇ ಇರುವಾಗ, ಅವರು ಬಹಳ ತೊಂದರೆಗೆ ಸಿಕ್ಕಿಹಾಕಿಕೊಂಡಿದ್ದಾರೆ. ಮಾನ್ಯ ಅಧ್ಯಕ್ಷರೆ, ನಿಮ್ಮ constituency ಯಲ್ಲೂ ಕೂಡ ಇದೆ. ನೀವು ಹೇಳುವ ಹಾಗೆ ಇಲ್ಲ, ಬಿಡುವ ಹಾಗೆ ಇಲ್ಲ. ಕೆ.ಆರ್. ಪೇಟೆಗೆ ಹೇಮಾವತಿ ನದಿಯ ನೀರು ಬಂದ ಮೇಲೆ ಸ್ವಲ್ಪ ಸರಿಯಾಗಿದೆ.

ಶ್ರೀ ಸಿ.ಬಿ. ಕೃಷ್ಣ ಭೈರೇಗೌಡ :- ನಾವು ಬರದ ಬಗ್ಗೆ ಹೆಚ್ಚಿನ ಗಮನ ಕೊಡಬೇಕೆಂದು ಅಧ್ಯಕ್ಷರನ್ನು ಕೇಳಿಕೊಳ್ಳುತ್ತಿದ್ದೇವೆ. ತಾವು ಜನರ ಮತ್ತು ಸದಸ್ಯರ rescue ಗೆ ಬರಬೇಕೆಂದು ನಾವು ಪದೇ ಪದೇ ಕೇಳಿಕೊಂಡೆವು. ಅವರ area ದಲ್ಲಿ ಏನು ಸಮಸ್ಯೆ ಇದ್ದಹಾಗೆ ಇಲ್ಲ. ಅದಕ್ಕೆ ಅವರು ಆರಾಮವಾಗಿ ಇದ್ದಾರೆ.

ಶ್ರೀ ಸಿದ್ಧರಾಮಯ್ಯ :- ಅವರ ಸ್ವಂತ ಹುಟ್ಟೂರಿನಲ್ಲೇ ಬರಗಾಲವಿದೆ. ಕೆ.ಆರ್. ಪೇಟೆಯಲ್ಲೂ ಇದೆ, ಹೇಮಾವತಿ ನೀರು ಸ್ವಲ್ಪ ಬಂದಿದೆ, ಹಾಗೆಂದು ಅಲ್ಲಿ ಬರಗಾಲ ಇಲ್ಲವೆ? ನಿಮ್ಮ ಊರಿನ ಕಡೆಯಲ್ಲಿ ಹಳ್ಳಿಗಳಲ್ಲಿ ಎಷ್ಟು ಭಾಗದಲ್ಲಿ ಕುಡಿಯುವುದಕ್ಕೆ ನೀರು ಇಲ್ಲವಲ್ಲಾ........

ಅಧ್ಯಕ್ಷರು :- ನೀರೇ ಇಲ್ಲ.

ಮಾನ್ಯ ಸದಸ್ಯರು :- ಮಾನ್ಯ ಅಧ್ಯಕ್ಷರೆ, ನೀರು ಇಲ್ಲದಿದ್ದರೆ ಹೋಗಲಿ, ನಿಮಗೆ ಹಣವನ್ನು ಕೊಟ್ಟಿದ್ದಾರ?

ಶ್ರೀ ಸಿದ್ಧರಾಮಯ್ಯ :- ಮಾನ್ಯ ಅಧ್ಯಕ್ಷರೆ, ಇಷ್ಟೆಲ್ಲಾ ಹೇಳುವುದಕ್ಕೆ ಯಾರ permission ಅನ್ನು ತೆಗೆದುಕೊಳ್ಳಬೇಕಾಗಿಲ್ಲ, ಹೇಳಿ ಅಧ್ಯಕ್ಷರೆ, ಏಕೆ ಹೇಳುವುದಿಲ್ಲ. ನೀವು ಧೈರ್ಯವಾಗಿ ಹೇಳಿ. ಈ ಸಾರಿ ಮಳೆ ಬಹಳ ಕಡಿಮೆ ಆಯಿತು. ನಾನು ವರದಿಯನ್ನು ನೋಡಿದೆ, ಕಳೆದ ವರ್ಷದಲ್ಲಿ ಮಳೆ 36 ವರ್ಷಗಳಿಗಿಂತ ಕಡಿಮೆ ಮಳೆ ಬಿದ್ದಿದೆ. ಜೂನ್, ಜುಲೈ, ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್, ಎಲ್ಲಾ ತಿಂಗಳಲ್ಲೂ ಮಳೆ ಕಡಿಮೆಯಾಗಿ, ಸುಮಾರು 33, 34 ಲಕ್ಷ ಹೆಕ್ಟೇರ್ ಬೆಳೆಯಾಗಿರುವಂಥ ಪ್ರದೇಶಗಳಲ್ಲಿ ಹಾನಿಯಾಗಿದೆ. ಮುಂಗಾರಿನಲ್ಲಿ 25 ಲಕ್ಷ ಹೆಕ್ಟೇರ್, ಹಿಂಗಾರಿನಲ್ಲಿ ಸುಮಾರು 6 ಲಕ್ಷ ಹೆಕ್ಟೇರ್ ಬೆಳೆ ಹಾನಿಯಾಗಿದೆ. 33 ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಬೆಳೆ ಹೋಯಿತು. ಕಳೆದ ಸಾರಿ 114 ಲಕ್ಷ ಟನ್ ಆಹಾರ ಧಾನ್ಯ ಉತ್ಪಾದನೆಯಾಗುತ್ತದೆಂದು ಲೆಕ್ಕ ಹಾಕಿಕೊಂಡಿದ್ದರು, ಆಗಿರುವುದು ಎಷ್ಟು? Not even 80 lakh tonnes, ಶೇ. 25 ಕ್ಕಿಂತ ಹೆಚ್ಚಿಗೆ ಹಾನಿ ಆಗಿದೆ. ಆದರೆ ಜೊತೆಗೆ ಎಣ್ಣೆಕಾಳುಗಳು 19 ಲಕ್ಷ ಟನ್ ಬರುತ್ತದೆಂದು ಲೆಕ್ಕ ಹಾಕಿಕೊಂಡಿದ್ದರು. ಇದು 9 ಲಕ್ಷ, 10 ಲಕ್ಷ ಚಿಲ್ಲರೆ ಟನ್ ಆಗಿದೆ. ಸುಮಾರು ಶೇ 40 ಖೋತಾ, ಈಗ ರೈತರು ಎಷ್ಟು ಕಷ್ಟದಲ್ಲಿದ್ದಾರೆಂಬುದನ್ನು ಊಹಿಸಿಕೊಳ್ಳಬಹುದು.

ಆಹಾರ ಉತ್ಪಾದನೆ ಒಂದು ಕಡೆ ಕಡಿಮೆಯಾಗಿ, ಇದು ಒಂದು ಕಡೆಯಾದರೆ, ಇನ್ನೊಂದು ಕಡೆ ಕೂಲಿಕಾರರ ಮೇಲೆ ಎಂಥ ಪರಿಣಾಮ ಬೀರುತ್ತದೆಂದರೆ, ಕೊಂಡುಕೊಳ್ಳುವವರಿಗೆ ಭಾರಿ ಕಷ್ಟವಾಗುತ್ತದೆ. ಹಾಲು ಉತ್ಪಾದನೆ ಕಡಿಮೆ ಆಯಿತು. ಈಗ ಪದಾರ್ಥಗಳ ಬೆಲೆಗಳು ಜಾಸ್ತಿಯಾಗಿದೆ, ಮತ್ತೆ ನೀವು ಅವರಿಗೆ ಕೆಲಸವನ್ನು ಕೊಡದೇ ಹೋದರೆ, ಅವರು ಎಲ್ಲಿಗೆ ಹೋಗಬೇಕು? ಆ ಜನರಿಗೆ ಕೂಲಿ ಬೇಕಾದವರಿಗೆ ಕೆಲಸವನ್ನು ಕೊಡಬೇಕಾದರೆ, ಏಕೆ ಮಾಡುವುದಕ್ಕಾಗುವುದಿಲ್ಲ. ಕುಡಿಯುವ ನೀರಿಗೆ ಕೇಂದ್ರಸರ್ಕಾರದಿಂದ ಎಷ್ಟು ಬೇಕಾದರೂ ದುಡ್ಡನ್ನು ಕೊಡುತ್ತೇವೆಂದು ಹೇಳುತ್ತಾರೆ. ನೀವು ಕುಡಿಯುವ ನೀರಿಗೆ ದುಡ್ಡನ್ನು ಚರ್ಚೆ ಮಾಡಿಲ್ಲ. Utilisation certificate ಅನ್ನು ಕೊಡಬೇಕು. ಕೇಂದ್ರ ಸಚಿವರಾದಂಥ ಶ್ರೀ ರಘುವಂಶ ಪ್ರಸಾದ್‌ರವರು ನಾನು ದೆಹಲಿಗೆ ಹೋಗಿದ್ದಾಗ ಸಿಕ್ಕಿದ್ದರು. ಅವರು ಕುಡಿಯುವ ನೀರಿಗೆ ಎಷ್ಟು ಬೇಕಾದರೂ ಹಣವನ್ನು ಕೊಡುತ್ತೇವೆಂದು ಹೇಳುತ್ತಾರೆ. ಇವತ್ತು ಕುಡಿಯುವ ನೀರಿಗೆ ಹಣವನ್ನು ತಂದು ಖರ್ಚು ಮಾಡುವುದಕ್ಕೆ ಸರ್ಕಾರ ಮನಸ್ಸು ಮಾಡದೇ ಹೋದರೆ, ಏನು ಮಾಡಬೇಕು ಹೇಳಿ. ಈ ರೀತಿ ಒಂದು ಕೆಟ್ಟ

ಪರಿಸ್ಥಿತಿ ರಾಜ್ಯದಲ್ಲಿ ಇದೆ. ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ 10 ನೇ ಪಂಚವಾರ್ಷಿಕ ಯೋಜನೆಯಲ್ಲಿ ಒಂದು ಬಿಟ್ಟರೆ ನಾಲ್ಕು ವರ್ಷ ಬರಗಾಲ ಇದೆ.

ಶ್ರೀ ಎನ್. ಧರ್ಮಸಿಂಗ್ :- ಮಾನ್ಯ ಎಂ.ಪಿ. ಪ್ರಕಾಶ್‌ರವರೆ, ಬರಗಾಲದ ಬಗ್ಗೆ ಗಂಭೀರವಾಗಿ ಚರ್ಚೆ ನಡೆಯುತ್ತಿದೆ. ತಾವು ಇದ್ದೀರಿ, ಮಾನ್ಯ ಕಂದಾಯ ಸಚಿವರು ಇದ್ದಾರೆ, ರಾಜ್ಯದ ಮುಖ್ಯಕಾರ್ಯದರ್ಶಿಯವರು ಏನು ಮಾಡುತ್ತಿದ್ದಾರೆ? File ನೋಡುತ್ತಿದ್ದಾರೆ? ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬಂದಿದೆ? ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಬೇಕಾಗಿದೆ. Where is the Chief Secretary? ನಿಮ್ಮ ಕಂದಾಯ ಇಲಾಖೆಯ Principal Secretary ಎಲ್ಲಿದ್ದಾರೆ? ನೀರಾವರಿ ಇಲಾಖೆಯವರು ಎಲ್ಲಿ ಇದ್ದಾರೆ? ಶ್ರೀಮತಿ ಲತ ಕೃಷ್ಣರಾವ್‌ರವರನ್ನು ತೋರಿಸಬೇಡ. ಇಲ್ಲಿ ಒಬ್ಬರೂ ಇಲ್ಲ, ಅವರಿಗೆ seriousness ಇಲ್ಲ. ಯಾರ ಮುಂದೆ ಹೇಳಬೇಕು? ಸುಮ್ಮನೆ ಇವತ್ತು ಏನೋ ಒಂದು ನೆಪಕ್ಕೆ ಚರ್ಚೆಯಾಗಬೇಕೆನ್ನುವಂಥಾದ್ದು ಅಲ್ಲ. ನಾವು ಪದೇ ಪದೇ ಹೇಳುತ್ತಿದ್ದೇವೆ. ನಾನು ಆವಾಗಿನಿಂದ ನೊಂದ ಮನಸ್ಸಿನಿಂದ ನೋಡುತ್ತಾ ಇದ್ದೆ. ನಾನು ಮಾತನಾಡಿದ್ದೇನೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡಿದ್ದಾರೆ, ಮಾನ್ಯ ಸಿದ್ಧರಾಮಯ್ಯನವರು ಬಹಳಷ್ಟು ಬೆಳಕನ್ನು ಚೆಲ್ಲುತ್ತಿದ್ದಾರೆ. Chief Secretary ಯವರು ಮೇಲೆ ಕುಳಿತುಕೊಂಡು ಫೈಲ್ ನೋಡುತ್ತಿದ್ದಾರ? ಅವರನ್ನು ಇಲ್ಲಿಗೆ ಕರೆಸಬೇಕು. You tell him to come here. ಅವರು ಗ್ಯಾಲರಿಯಲ್ಲಿ ಕುಳಿತುಕೊಂಡು, ನಮ್ಮ ಭಾವನೆಗಳನ್ನು ಅವರು ನೋಡಬೇಕು, ನಾವು ಏನು ಹೇಳುತ್ತೇವೆನ್ನುವಂಥಾದ್ದನ್ನು ನೋಡಬೇಕು. ಅವರು ಈ ಸದನ ನಡೆಯುವ ಸಮಯದಲ್ಲಿ ಫೈಲ್ ನೋಡುತ್ತಾ ಕುಳಿತುಕೊಳ್ಳುತ್ತಾರ? ಒಬ್ಬರು, ಇಬ್ಬರಾ, ನಿಮ್ಮವರು ಇಲ್ಲಿ ಯಾರು ಇದ್ದಾರೆ ಹೇಳಿ. This is very bad.

ಶ್ರೀ ಸಿ.ಬಿ. ಕೃಷ್ಣ ಭೈರೇಗೌಡ :- ಮಾನ್ಯ ಅಧ್ಯಕ್ಷರೆ, You have your say, We have our way, ಎಂದು ಆಗುವುದಾದರೆ, ನಿಜವಾಗಿಯೂ ಚರ್ಚೆ ಬೇಕಾಗಿಲ್ಲ. ನಾವು ನಿನ್ನೆಯೂ ಹೇಳಿದ್ದೇವೆ, ಚರ್ಚೆಗೋಸ್ಕರ ಚರ್ಚೆ ಬೇಡ. ನಮಗೆ ಪರಿಹಾರ ಬೇಕು, ಚರ್ಚೆ ಮಾಡುವುದೇ ಬೇಡ, ನೀವು ಏನು ಬೇಕಾದರೂ ಮಾಡುತ್ತೇವೆಂದು ನಿರ್ದಿಷ್ಟವಾಗಿ ಹಣ ಬಿಡುಗಡೆ ಮಾಡಿಯೆಂದು ನಿನ್ನೆಯೂ ಹೇಳಿದ್ದೇವೆ. ನೀವು ತೀಟೆ ತೀರಿಸಿಕೊಳ್ಳಬೇಕೆಂಬ approach ಅನ್ನು ಸರ್ಕಾರ ತೆಗೆದುಕೊಂಡ ಹಾಗೆ ಇದೆ.

ಶ್ರೀ ಎಂ. ಮಹದೇವ :- ಮಾನ್ಯ ಸಭಾಧ್ಯಕ್ಷರೇ, ಈ ಚಾಳಿ ಪ್ರತಿಸಾರಿಯೂ ಕೂಡ ನಡೆಯುತ್ತಿದೆ. ಬರಗಾಲದ ವಿಷಯ ಮಾತ್ರವಲ್ಲ, ಕಾವೇರಿ ವಿಚಾರವನ್ನು ಮಾತನಾಡಿದಾಗಲೂ ಕೂಡ ಮುಂದಿನ Treasury bench ನಲ್ಲಿ ಯಾರೂ ಕೂಡ ಕುಳಿತಿರಲಿಲ್ಲ. ಇವರಿಗೆ ಸದನದ ಬಗ್ಗೆ ಗೌರವ ಇದ್ದ ಹಾಗಿಲ್ಲ. ಈಗ ಇಲ್ಲಿ ಚರ್ಚೆ ನಡೆಯುತ್ತಿದೆ. ಯಡಿಯೂರಪ್ಪನವರು ಹೊರಗಡೆ ಇದ್ದಾರೆ. ಮುಖ್ಯಮಂತ್ರಿಗಳು ಇಲ್ಲೇ ಇದ್ದರೂ ಕೂಡ ಒಳಗೆ ಬಂದಿಲ್ಲ. ಇದು ಇವರಿಗೆ ಇರತಕ್ಕಂಥ Commitment

ಶ್ರೀ ಹೆಚ್.ಡಿ. ಬಸವರಾಜು :- ಮಾನ್ಯ ಸಭಾಧ್ಯಕ್ಷರೇ, ಒಂದು ಮಾತನ್ನು ನಾನು ಇಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ.....

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು :- ನೀವು ಮಾತನಾಡುವಾಗ ನಾನು ಸುಮ್ಮನಿರುವುದಿಲ್ಲವೇ? ನೀವು ಮಾತ್ರ ಮಾತನಾಡಬೇಕು. ನಾವು ಮಾತನಾಡಬಾರದೇ? ನಾನು ಒಂದು ಮಾತನ್ನು ಹೇಳುತ್ತೇನೆ. ತಾವು ಹಿರಿಯರಿದ್ದೀರಿ.

ಶ್ರೀ ಎಂ.ಪಿ. ವೆಂಕಟೇಶ್ :- ಮುಖ್ಯಮಂತ್ರಿಗಳು ನಿನ್ನೆ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಇರಲಿಲ್ಲವೇ? ನೀವು ಮಾತನಾಡುವಾಗಲೆಲ್ಲ ಮುಖ್ಯಮಂತ್ರಿಗಳು ಇರಬೇಕೇ?

(ಗೊಂದಲ)

ಒಬ್ಬ ಮಾನ್ಯ ಸದಸ್ಯರು :- ಯಾರನ್ನೋ ಮೆಚ್ಚಿಸುವುದಕ್ಕೆ ಏನೋ ಮಾತನಾಡಬೇಡಿ.

(ಗೊಂದಲ)

ಅಧ್ಯಕ್ಷರು :- ದಯಮಾಡಿ ಕುಳಿತುಕೊಳ್ಳಿ, ಅವರು ಮಾತನಾಡಲಿ.

ಶ್ರೀ ಹೆಚ್.ಡಿ. ಬಸವರಾಜು :- ಒಂದೇ ಒಂದು ನಿಮಿಷ ಮಾನ್ಯ ಅಧ್ಯಕ್ಷರೆ, ನೀವು ಟೀಕೆ ಮಾಡುತ್ತಿದ್ದೀರಿ. ಅದು ಕಡತಕ್ಕೆ ಹೋಗುತ್ತಿದೆ. ನೀವು ಏನು ಹೇಳಬೇಕೆಂದುಕೊಂಡಿದ್ದೀರೋ ಅವಷ್ಟು ಚುಚ್ಚು ನುಡಿಗಳು ಕಡತಕ್ಕೆ ಹೋಗಿವೆ. ನೀವು ಏನು ಸಂದೇಶವನ್ನು ಸಮಾಜಕ್ಕೆ ಕಳುಹಿಸಬೇಕೆಂದಿದ್ದೀರೋ, ರಾಜ್ಯಕ್ಕೆ ಕಳುಹಿಸಬೇಕೆಂದಿದ್ದಿರೋ ಅದು ಹೋಗಿದೆ. ಬರದ ವಿಷಯಕ್ಕೆ ಸಂಬಂಧಪಟ್ಟಂಥವರು

ಕಂದಾಯ ಮಂತ್ರಿಗಳು. ಕಂದಾಯ ಸಚಿವರು ಈಗ ಇಲ್ಲಿ ಕುಳಿತಿದ್ದಾರಲ್ಲ. ಕಾನೂನು ಸಚಿವರೂ ಕುಳಿತಿದ್ದಾರೆ. ನಿಮಗೆ ಇವರಿಗಿಂತ ಇನ್ನೇನು ಬೇಕಾಗಿದೆ.

(ಗೊಂದಲ)

ಅಧ್ಯಕ್ಷರು :– ಸಿದ್ಧರಾಮಯ್ಯನವರೇ ನೀವು ಮಾತನಾಡಿ.

(ಗೊಂದಲ)

ಶ್ರೀ ಹೆಚ್.ಡಿ .ಬಸವರಾಜು :– ಬರಗಾಲದ ವಿಚಾರ ಬಂದಾಗ ಸಂಬಂಧಪಟ್ಟ ಮಂತ್ರಿಗಳು ಮುಖ್ಯ. ಕಂದಾಯ ಮಂತ್ರಿಗಳು ಇಲ್ಲಿ ಕುಳಿತಿದ್ದಾರೆ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ :– ಬರಗಾಲದ ಬಗ್ಗೆ ಉತ್ತರ ಕೊಡಲಿಕ್ಕೆ ಕಂದಾಯ ಸಚಿವರು ಕುಳಿತಿದ್ದಾರೆ.

(ಗೊಂದಲ)

ಅಧ್ಯಕ್ಷರು :– ಸಿದ್ಧರಾಮಯ್ಯನವರೇ, ನೀವು ಮಾತನಾಡಿ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು :– ಇದು ಮೊಸರಿನಲ್ಲಿ ಕಲ್ಲು ಹುಡುಕತಕ್ಕಂಥ ಪ್ರಯತ್ನ ಅಷ್ಟೇ. ಏಕೆ ಹಾಗೆ ಮಾಡುತ್ತಿದ್ದೀರಿ? ನೀವು ಏನು ಹೇಳಬೇಕೋ ಅದನ್ನು ದಯವಿಟ್ಟು ಹೇಳಿ, ಅದಕ್ಕೆ ಕಂದಾಯ ಸಚಿವರು ಉತ್ತರ ಕೊಡುತ್ತಾರೆ. ಸರ್ಕಾರದಿಂದ ಏನು ಪರಿಹಾರ ಬೇಕಾಗಿದೆ ಅದನ್ನು ಪಡೆಯಿರಿ, ಯಾರು ಬೇಡವೆಂದರು.

ಅಧ್ಯಕ್ಷರು :– ಆಯಿತು, ಕುಳಿತುಕೊಳ್ಳಿ, ಅವರು ಮಾತನಾಡುತ್ತಿದ್ದಾರೆ. ಏಕೆ ನೀವು ಪರಸ್ಪರ ಕಿತ್ತಾಡುತ್ತಿದ್ದೀರಿ?

(ಗೊಂದಲ)

ಶ್ರೀ ಸಿದ್ಧರಾಮಯ್ಯ :– ಮುಖ್ಯಮಂತ್ರಿಗಳು ಇರುವಾಗಲೇ ಚರ್ಚೆಗೆ ಅವಕಾಶ ಕೊಡಿ ಎಂದರೆ ಅದನ್ನು ಮಾಡಲಿಲ್ಲವಲ್ಲ. ಆಯಿತು ಬಿಡಿ.

ಅಧ್ಯಕ್ಷರು :- ಎಲ್ಲರೂ ದಯಮಾಡಿ ಕುಳಿತುಕೊಳ್ಳಿ, ಅವರು ಮಾತನಾಡಲಿ.

ಡಾ॥ ಹೆಚ್.ಸಿ. ಮಹಾದೇವಪ್ಪ :- ಮಾನ್ಯ ಅಧ್ಯಕ್ಷರೇ, ಈಗ ರಾಜ್ಯ ಗಂಭೀರವಾದಂಥ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಮಾನ್ಯ ಸದಸ್ಯರ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕೆ ಸರ್ಕಾರದಲ್ಲಿ ಯಾರು ಇಲ್ಲದಿದ್ದರೂ ಕೂಡ ನಮ್ಮ ಹಿರಿಯ ನಾಯಕರಾದಂಥ ಸನ್ಮಾನ್ಯ ಎಂ.ಪಿ. ಪ್ರಕಾಶ್‌ರವರೊಬ್ಬರೇ ಸಾಕು. ಯಾವ ವಿಷಯ ಇದ್ದರೂ, ಅವರು ಯಾರನ್ನು ಬೇಕಾದರೂ convince ಮಾಡಬಹುದು, ಅವರು ಅದನ್ನು ಮಾಡುತ್ತಾರೆ. ಅದರ ಬಗ್ಗೆ ಅನುಮಾನವಿಲ್ಲ. ಅವರೊಬ್ಬರೇ ಸಾಕು. ಆದರೆ ಏಕೆ ನಾವು ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಮುಖ್ಯ ಕಾರ್ಯದರ್ಶಿಗಳು, ಕಂದಾಯ ಇಲಾಖೆಯ ಕಾರ್ಯದರ್ಶಿಗಳು, Additional Chief Secretary, Development Commissionerಎಲ್ಲರೂ ಇರಬೇಕೆಂದು ಕೇಳುತ್ತೇವೆ ಎಂದರೆ ಈ ಸರ್ಕಾರ ರಚನೆಯಾದಾಗಿನಿಂದ ಮೊನ್ನೆಯತನಕವೂ ಕೂಡ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಅಧಿಕಾರಿಗಳು ನಮ್ಮ ಮಾತು ಕೇಳುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಇವರಿಗೆ ಹಿಡಿತವಿಲ್ಲ.

ಅಧ್ಯಕ್ಷರು :- ಮಹದೇವಪ್ಪನವರೇ, ಯಾವ ಮಂತ್ರಿಯ ಕಾಲದಲ್ಲೂ ಅವರು ಕೇಳುತ್ತಿಲ್ಲ. ನೀವು ಮಂತ್ರಿಗಳಾಗಿದ್ದಲೂ ಕೇಳುತ್ತಿರಲಿಲ್ಲ. ಈಗಲೂ ಕೇಳುತ್ತಿಲ್ಲ. ಯಾರ ಕಾಲದಲ್ಲೂ ಕೇಳಿಲ್ಲ, ನೀವು ಕುಳಿತುಕೊಳ್ಳಿ. ಈ ವ್ಯವಸ್ಥೆಯಲ್ಲಿ ಅವರನ್ನು ಏಕೆ strengthen ಮಾಡಿದರು? ಸುಮ್ಮನೆ ಏಕೆ ಮಾತನಾಡುತ್ತೀರಿ? ನಿಮಗೆ ಬೇಕಾದಾಗ ನೀವು ಒಂದು ತರಹ ಮಾತನಾಡುತ್ತೀರಿ, ಅವರಿಗೆ ಬೇಕಾದಾಗ ಅವರು ಒಂದು ತರಹ ಮಾತನಾಡುತ್ತಾರೆ. ಆ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಯಾರೂ ಸರಿಯಾದ ಉತ್ತರವನ್ನು ಕೊಡುವುದಿಲ್ಲ.

ಡಾ॥ ಹೆಚ್.ಸಿ. ಮಹದೇವಪ್ಪ :- ಬಜೆಟ್‌ನಲ್ಲಿ ಅಮಾರ್ತ್ಯಸೇನ್ ಬಗ್ಗೆ ವ್ಯಾಖ್ಯಾನ ಮಾಡಿದ್ದಾರೆ.

ಅಧ್ಯಕ್ಷರು :- ರಾಜಕಾರಣ ಮಾಡುವುದು ಬೇಕಿಲ್ಲ. ಈಗ ಏನಾಗಿದೆ ಎಂದರೆ bureaucracy ಯವರು democratic system ನವರ ಮಾತನ್ನು ಕೇಳುತ್ತಿಲ್ಲ. ಅದಕ್ಕೇನು ಮಾಡಬೇಕು ಹೇಳಿ.

ಡಾ॥ ಹೆಚ್.ಸಿ. ಮಹದೇವಪ್ಪ :- ಅಮಾರ್ತ್ಯಸೇನ್‌ರವರು ಒಂದು ಆರ್ಥಿಕ ಪುಸ್ತಕವನ್ನು ಬರೆದು Noble Prize ಅನ್ನು ಪಡೆದಿದ್ದಾರೆ. ಅಂಥ ಕಾರ್ಯಕ್ರಮಗಳನ್ನು, ಕೊಡುವುದಕ್ಕೆ ಇವರೆಲ್ಲ ಇರಬೇಕೋ ಬೇಡವೋ?

(ಗೊಂದಲ)

ಅಧ್ಯಕ್ಷರು :– ಆಯಿತು, ನೀವು ಮಾತನಾಡಿ ಸ್ವಾಮಿ. ಸಿದ್ಧರಾಮಯ್ಯನವರೇ, ಆ ಕಡೆ ಈ ಕಡೆ ಕುಸ್ತಿ ಮಾಡುವುದಕ್ಕೆ ಅವರು ಇದ್ದೇ ಇದ್ದಾರೆ. ನೀವು ಮಾತನಾಡಿ.

ಶ್ರೀ ಸಿದ್ಧರಾಮಯ್ಯ :– ನಾವು ಹೇಳಿದುದನ್ನೆಲ್ಲಾ ನೀವು ಬಹಳ ಲಘುವಾಗಿ ತೆಗೆದು ಕೊಳ್ಳುತ್ತೀರಲ್ಲ, ಅದರಿಂದ ಹೀಗಾಗಿದೆ.

ಅಧ್ಯಕ್ಷರು :– ನಾನು ಲಘುವಾಗಿ ತೆಗೆದುಕೊಳ್ಳುವುದಲ್ಲ. ವಿರೋಧ ಪಕ್ಷದ ನಾಯಕರು ಹೇಳಿದರಲ್ಲ, ಅವರು ಚೆನ್ನಾಗಿದೆಯೇ ಇರುತ್ತಾರೆ.

ಶ್ರೀ ಸಿದ್ಧರಾಮಯ್ಯ :– Chief Secretary ಬಂದಿಲ್ಲ ಎಂದು ಹೇಳಿದರೆ ಆಯಿತು ಬಿಡಿ ಎಂದು ಹೇಳಿದರಲ್ಲ.

(ಗೊಂದಲ)

ಅಧ್ಯಕ್ಷರು :– ಆಯಿತು, ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ಅವರು ಮಾತನಾಡಲಿ. ಈಗಾಗಲೇ ಐದು ಗಂಟೆಯಾಗುತ್ತಾ ಬಂತು. ಇದಾದ ಮೇಲೆ ನಿಯಮ 69 ರ ಕೆಳಗೆ ತೆಗೆದುಕೊಳ್ಳತಕ್ಕಂಥ ವಿಷಯಗಳನ್ನು ಇನ್ನೂ ಎರಡಿವೆ. ಬಹಳಷ್ಟು ಮುಖ್ಯವಾದ ವಿಚಾರಗಳಿವೆ. ಬೇಗ ಮುಗಿಯಬೇಕು. ತಾವು ಮಾತನಾಡಿ ಸ್ವಾಮಿ.

ಶ್ರೀ ಸಿದ್ಧರಾಮಯ್ಯ :– ನಾನು ಏನು ಹೇಳುತ್ತೇನೆ ಎಂದರೆ, ಬರಗಾಲದ ಬಗ್ಗೆ ಚರ್ಚೆ ಮಾಡುವಾಗ ಇಲ್ಲಿ Chief Secretary ಇರಬೇಕೋ, ಬೇಡವೋ? ಹೇಳಿ ನೋಡೋಣ. ಅವರನ್ನು ಕರೆಸುವುದಕ್ಕೂ ನಿಮ್ಮ ಕೈಯಲ್ಲಿ ಆಗುವುದಿಲ್ಲವೇ? ಪ್ರಕಾಶ್‌ರವರೇ ಹೇಳಿ, ಅವರನ್ನು ಕರೆಸುವುದಕ್ಕೆ ಆಗುವುದಿಲ್ಲವೇ?

ಅಧ್ಯಕ್ಷರು :– ನೀವು ಹೇಳಿದ ಮೇಲೆ ಅದು ಪ್ರಕಾಶ್‌ರವರ ಗಮನಕ್ಕೆ ಹೋಗಿದೆ. ಅದಕ್ಕೆ ಸೂಕ್ತವಾದ ಕ್ರಮವನ್ನು ಅವರು ತೆಗೆದುಕೊಳ್ಳುತ್ತಾರೆ. ನೀವು ಮಾತನಾಡಿ.

ಶ್ರೀ ಸಿದ್ಧರಾಮಯ್ಯ :– ಸೂಕ್ತ ಎಂದರೆ ಯಾವ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ :- ಈಗ ನೀವು ಅವರನ್ನು ಕರೆಸುವುದಕ್ಕೆ ಆಗುವುದಿಲ್ಲವೇ? ಅವರು ನಾಡಿದ್ದು ಬರುವುದಾದರೆ ನಮ್ಮ ಗತಿ ಏನು? ಇಲ್ಲಿ ಅಧ್ಯಕ್ಷರಿಗೇ ಕಷ್ಟವಾಗಿದೆ. ಆದರೆ ಅವರ ಕಷ್ಟವನ್ನು ಅವರು ಇಲ್ಲಿ ಬಹಿರಂಗವಾಗಿ ಹೇಳುವ ಹಾಗಿಲ್ಲ.

ಶ್ರೀ ಸಿದ್ಧರಾಮಯ್ಯ :- ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕೆಲಸ ಮಾಡುವ ನಾವೇ ಈ ರೀತಿ ಅಸಹಾಯಕತೆಯನ್ನು ತೋಡಿಕೊಳ್ಳಬಾರದು. ವ್ಯವಸ್ಥೆ ಕೆಟ್ಟು ಹೋಗಿದೆ ಎನ್ನುವುದು ಬೇರೆ.

ಅಧ್ಯಕ್ಷರು :- ನಾವು ಅಸಹಾಯಕರಲ್ಲ.

ಶ್ರೀ ಸಿದ್ಧರಾಮಯ್ಯ :- ನಿಮಗಲ್ಲ ಹೇಳುವುದು. ನಾನು ಹೇಳುವುದನ್ನು ಕೇಳಿ, ಹಿಂದೆ ನೀವೂ ಮಂತ್ರಿಯಾಗಿದ್ದಿರಿ. ನೀವು ಮಂತ್ರಿಯಾಗಿದ್ದಾಗ ಅಧಿಕಾರಿಗಳು ನಿಮ್ಮ ಮಾತನ್ನು ಕೇಳುತ್ತಿರಲಿಲ್ಲವೆ?

ಅಧ್ಯಕ್ಷರು :- ನಾನು ಮಂತ್ರಿಯಾಗಿದ್ದುದು ಮರೆತೇ ಹೋಗಿದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ :- ಧರಂಸಿಂಗ್‌ರವರಿಗೆ, ಸಿದ್ಧರಾಮಯ್ಯನವರಿಗೆ ಎಲ್ಲ ಗೊತ್ತಿದ್ದೂ ಸುಮ್ಮನೇ ಮಾತನಾಡುತ್ತಾರೆ. ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಅವರ ಅತ್ಯಂತ ಆತ್ಮೀಯರು. ಒಂದು ಕ್ಷಣ ಒಬ್ಬರನ್ನು ಬಿಟ್ಟು ಒಬ್ಬರು ಇರಲಾರರು. ಉಪ ಮುಖ್ಯಮಂತ್ರಿಗಳು ಆ ಕಡೆಗೆ ಹೊರಟು ಹೋದರಲ್ಲ, ಆ ವಿರಹ ವೇದನೆಯಲ್ಲಿ ಮಾತನಾಡುತ್ತಿದ್ದಾರೆ. ಮುಖ್ಯಮಂತ್ರಿಗಳು ತಮ್ಮಷ್ಟಕ್ಕೆ ತಾವು ಹೊರಟು ಹೋಗಿದ್ದಾರೆ. ವಿರಹ ವೇದನೆ ಅರ್ಥವಾಯಿತಲ್ಲ.

ಶ್ರೀ ಎಂ.ಪಿ. ವೆಂಕಟೇಶ್ :- ನಿನ್ನೆಯಲ್ಲ ಇದ್ದರಲ್ಲ. ಹಾಗಾದರೆ 24 ಗಂಟೆಯೂ ಇರುವುದಕ್ಕಾಗುತ್ತದೆಯೇ?

ಶ್ರೀ ಕೆ.ಆರ್. ರಮೇಶ್‌ಕುಮಾರ್ :- ಸಂಸಾರ ಏನು ಹೀಗಾಯಿತಲ್ಲ, ಒಬ್ಬೊಬ್ಬರು ಒಂದೊಂದು ದಿಕ್ಕಿಗೆ ಹೋದರಲ್ಲ ಎನ್ನುವ ಯೋಚನೆಯಲ್ಲಿ ಪ್ರಕಾಶ್‌ರವರು ಕುಳಿತಿದ್ದಾರೆ.

ಅಧ್ಯಕ್ಷರು :- ಆಯಿತು, ಬೇಗ ಮುಗಿಸಿ.

ಶ್ರೀ ಸಿದ್ಧರಾಮಯ್ಯ :- ಅದಕ್ಕಾಗಿ ನಾನು ಏನು ಹೇಳುತ್ತೇನೆ ಎಂದರೆ, ಇನ್ನು ಮುಂದೆ ಮಂತ್ರಿಗಳು ಇಲ್ಲಿ ದಯವಿಟ್ಟು, ಅಧಿಕಾರಿಗಳು ನಮ್ಮ ಮಾತನ್ನು ಕೇಳುವುದಿಲ್ಲ ಎಂದು ಹೇಳುವುದಕ್ಕೆ ಹೋಗಬಾರದು. ಹಾಗೆ ಅಧಿಕಾರಿಗಳು ಮಾತನ್ನು ಕೇಳದೇ ಹೋದರೆ, ಅಧಿಕಾರಿಗಳು ನನ್ನ ಮಾತನ್ನು ಕೇಳುವುದಿಲ್ಲ, ನಾನೇಕೆ ಮಂತ್ರಿಯಾಗಿರಲಿ ಎಂದು ಮಂತ್ರಿಗಳು ತಮ್ಮ ಕೆಲಸವನ್ನೇ ಬಿಟ್ಟುಬಿಡುವುದು ಒಳ್ಳೆಯದು. ಪ್ರಕಾಶ್‌ರವರೇ ಅಧಿಕಾರಿಗಳು ನಿಮ್ಮ ಮಾತನ್ನು ಕೇಳುವುದಿಲ್ಲವೇ? ನಿಮ್ಮ ಮಾತನ್ನು ಕೇಳೇ ಕೇಳುತ್ತಾರೆ. ಅಲ್ಲವೇ. ಜಗದೀಶ್ ಶೆಟ್ಟರ್‌ರವರೇ ಅಧಿಕಾರಿಗಳು ನಿಮ್ಮ ಮಾತನ್ನು ಕೇಳುವುದಿಲ್ಲವೇ? (ಕೇಳುತ್ತಾರೆ ಎನ್ನುವಂತೆ ಸಚಿವರು ತಲೆಯಾಡಿಸಿದರು.) ಹಾಗಾದರೆ, Revenue Commissioner ಎಲ್ಲಿ? ಅವರು ಇಲ್ಲಿ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ :- ಈ ವಿಷಯಕ್ಕೆ ಸಂಬಂಧಪಟ್ಟಂಥ ಕಂದಾಯ ಇಲಾಖೆ ಕಾರ್ಯದರ್ಶಿಯವರು ಇದ್ದಾರೆ.

ಶ್ರೀ ಸಿದ್ಧರಾಮಯ್ಯ :- ಅವರು ಬರೀ ಅಷ್ಟಕ್ಕೇನಾ ಇರುವುದು?

ಶ್ರೀ ಜಗದೀಶ್ ಶೆಟ್ಟರ್ :- Definitely.

ಶ್ರೀ ಸಿದ್ಧರಾಮಯ್ಯ :- ಹಾಗೆಲ್ಲ defend ಮಾಡುವುದಕ್ಕೆ ಹೋಗಬೇಡಿ.

ಶ್ರೀ ಎಂ.ಪಿ. ಪ್ರಕಾಶ್ :- ವಿಪತ್ತು ನಿರ್ವಹಣೆ ಮತ್ತು ಬರಗಾಲದ ಸಂಪೂರ್ಣ ಜವಾಬ್ದಾರಿ ಅವರದ್ದಾಗಿದೆ.

ಶ್ರೀ ಸಿದ್ಧರಾಮಯ್ಯ :- ಅದು ಇರಲಿ. ಪ್ರಕಾಶ್‌ರವರೇ Chief Secretary ಯವರಿಗೆ ಏನೂ ಕೆಲಸವಿಲ್ಲವೆ? ನಿಮ್ಮ ಸಬ್ ಕಮಿಟಿಯಲ್ಲಿ ಅವರೇ ತಾನೇ ಬಹಳ ಮುಖ್ಯವಾದಂಥ ಅಧಿಕಾರಿ.

ಶ್ರೀ ಎಂ.ಪಿ. ಪ್ರಕಾಶ್ :- ಅವರನ್ನು ಕರೆಸೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ :- Chief Secretary ಸರ್ವಪಕ್ಷಗಳ ಸಭೆಯ ಮುಂದೆ ಬಂದು ಹೇಳಿದರು, ನಾನು ಶಾಸನ ಸಭೆಗೆ ಬರಬೇಕಾಗಿಲ್ಲ, ನಾನು protocol ನಲ್ಲಿ ಇಲ್ಲ. ನನ್ನ ಕೆಲಸವೇನಿದ್ದರೂ ಯಾವ ಯಾವ ದಿವಸ ಯಾವ ಯಾವ ಅಧಿಕಾರಿಗಳು ಅಲ್ಲಿಗೆ ಹೋಗಿ ಕುಳಿತುಕೊಳ್ಳಬೇಕು ಎಂದು allot ಮಾಡುವುದು. ವಿಶೇಷವಾಗಿ ನಾನು ಬರುವಂಥ ಪ್ರಕರಣಗಳಲ್ಲಿ ಬರುತ್ತೇನೆ. ಎಂದು ಎಲ್ಲರ ಎದುರಿಗೆ

ಹೇಳಿ ಆಗಿದೆ. ಅದಕ್ಕೆ ಹೇಳುತ್ತಿರುವುದು, in front of all of us, ನಾನು ಶಾಸನಸಭೆಗೆ ದಿವಸ ಬಂದು ಕುಳಿತುಕೊಳ್ಳುವ ಅಗತ್ಯವಿಲ್ಲ ಎಂದು ಹೇಳಿಬಿಟ್ಟಿದ್ದಾರೆ.

ಶ್ರೀ ಸಿದ್ಧರಾಮಯ್ಯ :- ನನಗೆ ಗೊತ್ತಿಲ್ಲ ಇದು. ಪ್ರಜಾತಂತ್ರ ವ್ಯವಸ್ಥೆ ಇರತಕ್ಕಂಥ, Parliamentary System of Government ನಲ್ಲಿ ಕೆಲಸ ಮಾಡುತ್ತಿದ್ದಾರೋ ಏನೋ ಗೊತ್ತಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಸಿದ್ಧರಾಮಯ್ಯನವರೇ, ಅವರು ಆ ರೀತಿ ಹೇಳುವಾಗ, Rules ಪ್ರಕಾರ "ನಾನು attend ಆಗುವ ಅವಶ್ಯಕತೆ ಇಲ್ಲ" ಎಂದು ಸ್ಪಷ್ಟವಾಗಿ ಹೇಳಿದ್ದಾರೆ. Rules not say that Chief Secretary should be present in the House ಎಂದು ಭಾರಿ ಸ್ಪಷ್ಟವಾಗಿ ಹೇಳಿದ್ದಾರೆ. ಅದು ಈಗಿನ Chief Secretary ಯವರು ಬಂದ ಮೇಲೆ ಆಗಿದ್ದಲ್ಲ. ಮೊದಲಿದ್ದವರು ನಮ್ಮ ಎದುರಿಗೇ, according to Rules Chief Secretary need not be present ಎಂದು ಹೇಳಿಬಿಟ್ಟು ಹೋಗಿದ್ದಾರೆ.

ಶ್ರೀ ಸಿದ್ಧರಾಮಯ್ಯ :- ಹಾಗಿದ್ದಲ್ಲಿ ಇಲ್ಲಿ ನಿಮಗೆ ಜಾಗವೇ ಇಲ್ಲ ಎಂದು ಅವರಿಗೆ ಹೇಳಬೇಕು. You have no business ಎಂದು ಹೇಳಬೇಕು. ಅವರ ಸಂಬಳವನ್ನೆಲ್ಲಾ ಇಲ್ಲಿ pass ಮಾಡಿಕೊಡಬಾರದು. ಏಕೆಂದರೆ ಅವರು ಇಲ್ಲಿಗೆ ಬರುವುದಿಲ್ಲ. ಅವರಿಗೆ ಕೊಡುವ ಸಂಬಳ. T.A., D.A. ಯಾವುದನ್ನೂ House ನಲ್ಲಿ ಯಾರೂ pass ಮಾಡಬಾರದು.

ಶ್ರೀ ವಾಟಾಳ್ ನಾಗರಾಜ್ :- ಮುಖ್ಯ ಕಾರ್ಯದರ್ಶಿ ಆ ತರಹ ಹೇಳುವ ಹಾಗಿಲ್ಲ. ಇಲ್ಲಿಗೆ ಅವರನ್ನು ಕರೆಸಬೇಕಾಗುತ್ತದೆ, ಮುಖ್ಯ ಕಾರ್ಯದರ್ಶಿಯವರ ಬಗ್ಗೆಯೇ ಇಲ್ಲಿ ಚರ್ಚೆಯಾಗಬೇಕಾಗುತ್ತದೆ. ಹಾಗೆಲ್ಲ ಬೇಜವಾಬ್ದಾರಿಯಿಂದ ಮಾತನಾಡುವುದಕ್ಕಾಗುವುದಿಲ್ಲ. ಈ ಸದನಕ್ಕೆ ಸಾರ್ವಭೌಮತ್ವವಿದೆ. ಮುಖ್ಯ ಕಾರ್ಯದರ್ಶಿ ಸದನಕ್ಕೆ ಬರುವುದಕ್ಕೆ ಸಾಧ್ಯವಿಲ್ಲವೆಂದು ಹೇಳುವುದಕ್ಕೆ ಸಾಧ್ಯವೇ ಇಲ್ಲ. ಅವರು ಬರಲೇಬೇಕಾಗುತ್ತದೆಂದು ತಮ್ಮ ಗಮನಕ್ಕೆ ಮತ್ತು ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರ ಗಮನಕ್ಕೆ ತರುತ್ತಿದ್ದೇವೆ. ಆ ರೀತಿ ಹೇಳಿದ್ದರೆ ಅದು ಅಕ್ಷಮ್ಯ ಅಪರಾಧವಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು, ನ್ಯಾಯ, ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :- ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ನಿಮಗೆ ಗೊತ್ತಿದ್ದಂತೆ ಎಲ್ಲಾ ಕಾಲದಲ್ಲಿಯೂ ಕೂಡ, ಬಹಳ ವರ್ಷಗಳ ಕಾಲ ದೀರ್ಘ ಕಾಲದಲ್ಲಿ ಮಂತ್ರಿಗಳಾಗಿ ಕೆಲಸ ಮಾಡಿದಂಥವರು ಸಹ ಇದ್ದಾರೆ. ಅದಕ್ಕೆ ಸಂಬಂಧಪಟ್ಟಂಥ ಇಲಾಖೆಯವರು ಬರಬೇಕಾಗುತ್ತದೆ. ಮತ್ತು ರಾಜ್ಯಕ್ಕೆ ಸಂಬಂಧಿಸಿದ ಗುರುತರವಾದ ವಿಷಯುಗಳಿದ್ದಾಗ ಎಲ್ಲ ಕಾರ್ಯದರ್ಶಿಗಳು, ಮುಖ್ಯ ಕಾರ್ಯದರ್ಶಿಗಳು ಬರಬೇಕೆಂದು ಬಯಸುವುದು ಸಹಜ. ಆ ದೃಷ್ಟಿಯಿಂದ ವಿರೋಧ ಪಕ್ಷದ ನಾಯಕರು ತಾವೆಲ್ಲ ಮುಖ್ಯ ಕಾರ್ಯದರ್ಶಿಗಳು ಬರಲಿ ಎಂದು ಹೇಳಿದಿರಿ. ಆದರೆ, ಎಲ್ಲ ಕಾಲದಲ್ಲಿ ಎಲ್ಲರೂ ಇರಬೇಕೆನ್ನುವುದಾದರೆ ದೈನಂದಿನ ಕೆಲಸಗಳನ್ನು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಆ ವಿಚಾರಗಳಿಗೆ ಸಂಬಂಧಪಟ್ಟಿರತಕ್ಕಂಥದ್ದೇನಿದೆ, ಹಿಂದಿನ ಒಬ್ಬ ಮುಖ್ಯ ಕಾರ್ಯದರ್ಶಿ ಹಾಗೆ ಹೇಳಿದರೆಂದು ಹೇಳಿದರು. ಆದರೆ, ಅವರು ಹೇಳಿದ್ದರೆ ಯಾವ context ನಲ್ಲಿ ಹೇಳಿದರೋ ಅದು ನನಗೆ ಗೊತ್ತಿಲ್ಲ. ನಾವಂತೂ ಆ ಸಂದರ್ಭದಲ್ಲಿರಲಿಲ್ಲ. ಎಲ್ಲ ಕಾರ್ಯದರ್ಶಿಗಳೂ ಕೂಡ ಬರಬೇಕಾಗುತ್ತದೆ. ಆದರೆ, ತಮ್ಮ ತಮ್ಮ ಇಲಾಖೆಯ ಬೇಡಿಕೆಗೆ ಸಂಬಂಧ ಇಲ್ಲದಿರತಕ್ಕಂಥವರು ಬಂದಾಗ ತೊಂದರೆಯಾಗುತ್ತದೆ. ಅವರು ಅನೇಕ ಕಛೇರಿ ಕೆಲಸಗಳನ್ನು ಅವರು ಮಾಡಲೇಬೇಕಾಗುತ್ತದೆ. ಆ ಸಂದರ್ಭದಲ್ಲಿ ಅವರು ಹೋಗಿರುತ್ತಾರೆ. ಹಿಂದೆ ಕೂಡ ನಾವೆಲ್ಲ ಅಧಿಕಾರದಲ್ಲಿದ್ದಾಗ ಆ ತರಹದ್ದು ಆಗಿದೆ. ಈಗಲೂ ಕೂಡ ನಮ್ಮ ಅಭಿವೃದ್ಧಿ ಇಲಾಖೆಯ ಆಯುಕ್ತರು ಬಂದಿದ್ದಾರೆ ಮತ್ತು ತಾವು ಕೇಳಿದ ಹಾಗೆ ಪ್ರಧಾನ ಕಾರ್ಯದರ್ಶಿಗಳು ಕೂಡ ಬಂದಿದ್ದಾರೆ. ಇಲ್ಲಿಯೂ ಕೂಡ ಎಲ್ಲರನ್ನು ಕರೆಸಬೇಕೆಂದು ತಾವು ಹೇಳತಕ್ಕಂಥ ಮಾತನ್ನು ನಾನು ಒಪ್ಪುತ್ತೇನೆ. ಆ context ನಲ್ಲಿ ಹೇಳಿದ್ದಾರೆಯೇ ವಿನಃ ಮತ್ತೇನಲ್ಲ ಎಂದು ಭಾವಿಸಿಕೊಳ್ಳಬೇಕಾಗಿ ಕೋರುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) :- ಮಾನ್ಯ ಅಧ್ಯಕ್ಷರೆ, usually ಇದು Practice. ಇದು rules ನಲ್ಲಿಯೇ ಇರಬೇಕೆಂದೇನೂ ಇಲ್ಲ. ವಿಶೇಷವಾಗಿ ಬರಗಾಲದ ಬಗ್ಗೆ ಚರ್ಚೆ ನಡೆದಾಗ ಕುಡಿಯುವ ನೀರಿನ ವ್ಯವಸ್ಥೆ ಮಾಡತಕ್ಕಂಥವರು Rural Development Secretary, ಕಾಮಗಾರಿಗೆ ಸಂಬಂಧಪಟ್ಟವರು PWD Secretary, ನಂತರ Agriculture Secretary, Revenue ಗೆ ಸಂಬಂಧಪಟ್ಟಂಥ Revenue Secretary, ಹೀಗೆ ಇಂಥ ಪ್ರಮುಖ

ಖಾತೆಗಳ ಸೆಕ್ರೆಟರಿಗಳು ಏನಿದ್ದಾರೆ, ಅವರೆಲ್ಲ ಸದನದಲ್ಲಿರಬೇಕೆಂದು ಇಲ್ಲಿಯವರೆಗೆ ಆ ಪದ್ಧತಿ ನಡೆದುಕೊಂಡು ಬಂದಿದೆ. ಇತ್ತೀಚೆಗೆ ನಾವು ಕೂಡ ಇದೇ ರೀತಿಯಾಗಿ ಕೆಲಸ ಇರಬಹುದೆಂದು defend ಮಾಡುತ್ತಿದ್ದೇವೆ. ಅದರಿಂದೇನಾಗುತ್ತದೆಂದರೆ, ನಾವು ಹೋಗದಿದ್ದರೂ ನಡೆಯುತ್ತದೆ ಎಂದು ತಿಳಿದುಕೊಂಡು ಅಧಿಕಾರಿಗಳು ಬರುವುದಿಲ್ಲ. ಆದ್ದರಿಂದ ದಯವಿಟ್ಟು, ಸಂಬಂಧಪಟ್ಟವರು, ಈ ಚರ್ಚೆಗೆ ಸಂಬಂಧಪಟ್ಟವರು, Animal Husbandry Department ಬರುತ್ತದೆ, ಕುಡಿಯುವ ನೀರಿನದು ಬರುತ್ತದೆ, ಕುಡಿಯುವ ನೀರಿನದು ಬರುತ್ತದೆ, Finance ಬರುತ್ತದೆ. Naturally, work ಗೆ ಸಂಬಂಧಪಟ್ಟ ಹಾಗೆ Rural Development Department ಬರುತ್ತದೆ. ಈಗ DPAR Secretary ಯವರನ್ನು ಕೇಳಿದರೆ ಅವರು ಏಕೆ ಬರಬೇಕೆಂದು ಹೇಳಬಹುದು, ಅಥವಾ statistical Department Secretary, Commerce and Industry Department Secretary ರವರನ್ನು ಕೇಳಿದರೆ ಅವರು ಬೇಕಾಗಿಲ್ಲ. ಆದರೆ ಬರಗಾಲ ಕಾಮಗಾರಿಗೆ ಸಂಬಂಧಪಟ್ಟ ಹಾಗೆ, ಕುಡಿಯುವ ನೀರಿಗೆ ಸಂಬಂಧಪಟ್ಟ ಹಾಗೆ ಕೆಲಸಕ್ಕೆ ಸಂಬಂಧಪಟ್ಟ ಹಾಗೆ, they should be present here and naturally, ಅವರು ಕೇಳುವಾಗ ನಿಮಗೂ feed ಮಾಡುತ್ತಾರೆ. ಇಲ್ಲಿ ಏನೋ serious discussion ನಡೆದಿಲ್ಲ. ಅನೇಕ ಸಲ ಇಂಥ ಹಳ್ಳಿಯಲ್ಲಿ ಇಷ್ಟು ಜಾನುವಾರು ಸತ್ತವು ಅಥವಾ ಇಂಥ ಹಳ್ಳಿಯಲ್ಲಿ ಕುಡಿಯುವ ನೀರು ಇಲ್ಲವೆಂದು ಹೇಳಿದಾಗ ತಕ್ಷಣ ಹೇಳುವುದಕ್ಕೆ ನಿಮಗೆ ಗೊತ್ತಾಗುವುದಿಲ್ಲ, ಅದಕ್ಕೆ ಸಂಬಂಧಪಟ್ಟಂಥ Rural Development Department Secretary ಯವರೇ ಆ information ಅನ್ನು ನಿಮಗೆ feed ಮಾಡಬೇಕಾಗುತ್ತದೆ. ಆದರೆ ನಮ್ಮಲ್ಲಿ ಗಂಭೀರವಾದ ವಿಷಯಗಳು ಇಲ್ಲದ ಕಾರಣ ಯಾರೂ ಕೂಡ ಅದನ್ನು serious ಆಗಿ ತೆಗೆದುಕೊಳ್ಳುತ್ತಿಲ್ಲ. ದಯವಿಟ್ಟು ಸಂಬಂಧಪಟ್ಟ ಕಾರ್ಯದರ್ಶಿಗಳಿಗೆ ನೀವು ಕ್ಯಾಬಿನೆಟ್‌ನಲ್ಲಾದರೂ ಹೇಳಿ, ಅಥವಾ ಸಂಬಂಧಪಟ್ಟ ಕಾರ್ಯದರ್ಶಿಗಳಾದರೂ ಇಲ್ಲಿರಬೇಕೆಂದು ಇಲ್ಲಿಂದಾದರೂ warning ಕೊಡಿ.

ಶ್ರೀ ಎಂ.ಪಿ. ಪ್ರಕಾಶ್ :- ಮಾನ್ಯ ಅಧ್ಯಕ್ಷರೆ, ಬಹಳ ಮುಖ್ಯವಾಗಿ selected ಅಧಿಕಾರಿಗಳು ಇರಲೇಬೇಕೆಂಬುದು ನಮ್ಮ ಸರ್ಕಾರದ ವಾದ ಕೂಡ ಇದೆ. ಅದನ್ನು ನಾವು ಹೇಳಿದ್ದೇವೆ. ಆದರೆ, ಒಂದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇವತ್ತು ದಿನನಿತ್ಯದ ಕಾರ್ಯಕಲಾಪಗಳ ಪಟ್ಟಿಯಂತೆ ಎಲ್ಲ ನಡೆಯುತ್ತಿದ್ದರೆ ಆ ಕಾರ್ಯಕಲಾಪಗಳ ಪಟ್ಟಿ ಎತ್ತಿಕೊಂಡು ಯಾರು ಅದಕ್ಕೆ ಬರುವುದಿಲ್ಲ ಅವರ

ಮೇಲೆ ಕ್ರಮ ತೆಗೆದುಕೊಳ್ಳಬಹುದಾಗಿತ್ತು. ಆದರೆ ಅಜೆಂಡಾದಲ್ಲಿ ಇವತ್ತು ವಿಷಯ ಇದ್ದು ಇದು ಸಾಯಂಕಾಲ ಚರ್ಚೆಗೆ ಬರುತ್ತದೆ ಎನ್ನುವುದು ಇತ್ತು. ಆ ಕಾರಣಕ್ಕಾಗಿಯೇ ಅದು ಕೆಲವರು ಬಂದು ಹಾಗೆಯೇ ಹೊರಟುಹೋಗಿರತಕ್ಕಂಥಾದ್ದು ಇದೆ. We will bring them. ನಾವೂ ಸಹ ಸರಿಯಾದ ರೀತಿಯಲ್ಲಿ ಕಾರ್ಯಕಲಾಪಗಳ ಪಟ್ಟಿಯಂತೆ ನಡೆಸಿದರೆ ಸರಿಯಾಗುತ್ತದೆ.

(ಶ್ರೀ ಎನ್. ಯೋಗೀಶ್ ಭಟ್‌ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಸಿದ್ಧರಾಮಯ್ಯ :- ದಯವಿಟ್ಟು ನೀವು ಇದನ್ನೂ ಸಹ defend ಮಾಡಬೇಕಾದ ಅಗತ್ಯವಿಲ್ಲ. Because, ಇದು ಅಜೆಂಡಾದಲ್ಲಿರುವುದು. ನಾನೇನು ಹೇಳುತ್ತೇನೆಂದರೆ ಮೊನ್ನೆ ಮಾನ್ಯ ಖರ್ಗೆಯವರು ಹೇಳಿದ ಹಾಗೆ......

ಶ್ರೀ ಎಂ.ಪಿ. ಪ್ರಕಾಶ್ :- ಹಾಗಾದರೆ ಸಾಯಂಕಾಲದ ಪ್ರಕಾರವೇ ಮಸೂದೆ ಪ್ರಕಾರ, ಕಾರ್ಯಕಲಾಪಗಳ ಪಟ್ಟಿಯ ಪ್ರಕಾರ ಇರಬೇಕಾಗಿತ್ತಲ್ಲವೇ?

(ಗೊಂದಲ)

ಶ್ರೀ ಸಿದ್ಧರಾಮಯ್ಯ :- ಹಾಗಾದರೆ ನಾವೇನೂ ಹೇಳಬಾರದೆ? ನೀವು ಹೇಳಿದ ಹಾಗೆ ಕೇಳಿಕೊಂಡು ಇದ್ದುಬಿಡಬೇಕೇ?

ಶ್ರೀ ಎಂ.ಪಿ. ಪ್ರಕಾಶ್ :- ಇಲ್ಲ, ಇಲ್ಲ, ನೀವು ಹೇಳಿದ ಹಾಗೆ ನಾವೇಕೆ ಕೇಳಬೇಕು?

ಶ್ರೀ ಸಿದ್ಧರಾಮಯ್ಯ :- ನಾವು ಹೇಳಿದ ಹಾಗೆ ಕೇಳಬೇಡಿ. ನಾವು ಹೇಳಿದ ಹಾಗೆ ಕೇಳುವ ಅಗತ್ಯತೆ ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್ :- ದಯವಿಟ್ಟು ತಾವು ಈ ಕಡೆ ಬಂದುಬಿಡಿ ಸರ್. ನಾವು ಆ ಕಡೆ ಹೋಗಿಬಿಡುತ್ತೇವೆ.

ಶ್ರೀ ಸಿದ್ಧರಾಮಯ್ಯ :- ಇಲ್ಲ. ದಯವಿಟ್ಟು ನೀವು ಅಲ್ಲಿಯೇ ಇರಬೇಕು. ಇನ್ನೂ ಸ್ವಲ್ಪ ಆ ಕಡೆಗೆ ಹೋಗಬೇಕೆಂದು ನಮ್ಮ ಆಸೆ.

ಶ್ರೀ ಎಂ.ಪಿ. ಪಕಾಶ್ :- ಇಲ್ಲ ಸರ್. ಹಾಗೇನಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :- ಬಾವಿ ಇರುವುದೇ ಬೀಳುವುದಕ್ಕೆ

ಶ್ರೀ ಎಂ.ಪಿ. ಪ್ರಕಾಶ್ :- ಬಾವಿ ಇರುವುದು ನೀರನ್ನು ಸೇದಿಕೊಂಡು ಬರಗಾಲದಲ್ಲಿ ಕುಡಿಯಬೇಕೆಂದಿರುವುದು. ಆದರೆ, ಅದರಲ್ಲಿ ಬೀಳುತ್ತಿದ್ದೀರಲ್ಲಾ.

ಶ್ರೀ ವಾಟಾಳ್ ನಾಗರಾಜ್ :- ಈ ಬಾವಿ ಬರಗಾಲದಲ್ಲಿದೆಯಲ್ಲ. ಈ ಬಾವಿಯಲ್ಲಿ ನೀರೇ ಇಲ್ಲವೇ.

ಶ್ರೀ ಸಿದ್ಧರಾಮಯ್ಯ :- ನಿಮ್ಮ ಕಾಲದಲ್ಲಿ ನಮಗೆ ಹಾಳು ಬಾವಿಗೆ ಬೀಳುವ ಪರಿಸ್ಥಿತಿ ಬಂದುಬಿಟ್ಟಿದೆ. ಈಗ ವಿಷಯಕ್ಕೆ ಬರುವುದಾದರೆ, ಬರಗಾಲ ಕೇವಲ ಕಂದಾಯ ಇಲಾಖೆಗೆ ಮಾತ್ರ ಸೀಮಿತವಾಗಿರುವುದಿಲ್ಲ. ಅನೇಕ ಸೆಕ್ರೆಟರಿಗಳಿಗೆ ಜಿಲ್ಲೆಗಳ ಜವಾಬ್ದಾರಿ ಕೊಟ್ಟು in charge ಕೊಟ್ಟು ಕಳುಹಿಸಲಾಗಿದೆ. ಈ ತರಹ ಶಾಸಕರ ಅಭಿಪ್ರಾಯಗಳಿವೆ, ಸದನದಲ್ಲಿ ಈ ತರಹ ಅಭಿಪ್ರಾಯ ಬಂದಿದೆ, ಹೀಗೆ ಚರ್ಚೆ ಆಯಿತೆಂದು ಇವರಿಗೆಲ್ಲ instructions ಕೊಡುವವರು, ಹೇಳುವವರು ಯಾರು? Chief Secretary, invariably ಬರಗಾಲದಂಥ ಗಂಭೀರವಾದ ವಿಷಯದ ಬಗ್ಗೆ ಚರ್ಚೆ ಮಾಡುವಾಗ ಇರಲೇಬೇಕು. ಅವರು ಸದನದಲ್ಲಿ ಇರಬೇಕಾಗಿಲ್ಲವೆಂದು ಹೇಳಿರುವುದು ಮಾನ್ಯ ಮಾಧುಸ್ವಾಮಿಯವರು ಹೇಳಿದ ಹಾಗೆ ನನಗೂ ಗೊತ್ತಿಲ್ಲ. ಸದನದಲ್ಲಿರಬೇಕಾದ ಅವಶ್ಯಕತೆಯಿಲ್ಲವೆಂದು ಅವರು ಹೇಳುವುದಕ್ಕಾಗುವುದಿಲ್ಲ. ಒಂದು ವೇಳೆ ಹೇಳಿದ್ದರೆ ಅದಕ್ಕಿಂತ ಉದ್ಧಟತನ ಇನ್ನೊಂದಿಲ್ಲ. ಈ ರೀತಿ ಆದರೆ ಪ್ರಜಾಪ್ರಭುತ್ವದಲ್ಲಿ ಅವರು ಕೆಲಸ ಮಾಡಲಿಕ್ಕೆ ಆಗುವುದಿಲ್ಲ. ಇಲ್ಲಿ ಬಜೆಟ್ ಪಾಸ್ ಮಾಡಿ ಅವರಿಗೆ ಸಂಬಳ ಕೊಡಬೇಕಲ್ಲವೇ? ಬರಗಾಲ ಬಹಳ ಗಂಭೀರವಾದ ವಿಚಾರ. Agriculture Department, Rural Development Department, Revenue Department, P.W.D. Department, Animal Husbandry Department, Forest Department ಈ ಎಲ್ಲ ಇಲಾಖೆಗಳು ಕೂಡ ಇದಕ್ಕೆ ಸಂಬಂಧಪಟ್ಟಿದ್ದಾಗಿರುತ್ತದೆ. ಅವರಿಗೆಲ್ಲ ಮೇವು ಬೆಳೆಯುವುದಕ್ಕೆ ಎಂದು ಕೊಟ್ಟಿರುತ್ತೀರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಎಲ್ಲಾ ಇಲಾಖೆಯ ಅಧಿಕಾರಿಗಳು ಇರಬೇಕೆಂದು ಇಲ್ಲಿ ಹಲವಾರು ಸಲ ಚರ್ಚೆಯಾಗಿದೆ. ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳನ್ನು ಒಂದು ದಿವಸ ಸಹ ಈ ಸದನದಲ್ಲಿ ನಾವು ನೋಡಿಲ್ಲ. ಅವರು ಯಾರು ಎನ್ನುವುದೇ ಗೊತ್ತಿಲ್ಲ. ಬಜೆಟ್ ಮಂಡನೆ ಮಾಡುವಾಗ, ಆಯವ್ಯಯ ಮಂಡನೆ ಮಾಡುವಾಗ, ಯಾವುದೇ ಸಂದರ್ಭದಲ್ಲಿ ಒಂದೇ ಒಂದು ದಿವಸ ಸಹ

ಈ ಅಧಿಕಾರಿಗಳ ಗ್ಯಾಲರಿಯಲ್ಲಿ ನಾವು ನೋಡಿಲ್ಲ. Chief Secretary ಯವರು ಸಹ ಒಂದೆರಡು ಸಲ ಬಂದು ಕುಳಿತು ಹೋಗಿದ್ದಾರೆ. ಆದರೆ ಕೈಗಾರಿಕಾ ಇಲಾಖೆಯ ಸೆಕ್ರೆಟರಿಯವರು ಮಾತ್ರ ಒಂದು ದಿವಸ ಸಹ ಈ ಸದನಕ್ಕೆ ಬಂದಿರುವುದನ್ನು ನಾವು ನೋಡಲೇ ಇಲ್ಲ. ಅದರ ಬಗ್ಗೆ ಯಾರೂ ಸಹ ಚರ್ಚೆ ಮಾಡಲೇ ಇಲ್ಲ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಛೇರ್ಮನ್‌ರವರೆ, ಯಾರು ಅವರು? ಎಂದು ಸರ್ಕಾರ ನಮಗೆ ತಿಳಿಸಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ :- ಆ ಕಾರ್ಯದರ್ಶಿಯವರು ಬರೀ Court ನಲ್ಲಿದ್ದಾರೆಯೇ ಅಥವಾ ಜೈಲಿನಲ್ಲಿದ್ದಾರೆಯೇ? ಅಥವಾ ಇಲ್ಲಿಗೇನಾದರೂ ಬರುತ್ತಾರೆಯೇ ಎಂದು ಸ್ವಲ್ಪ ಹೇಳಿ ಸರ್.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಅಥವಾ ಅವರ ಮೇಲೇನಾದರೂ contempt case ಆಗಿ Court, ಅಲ್ಲಿಗೆ ಇಲ್ಲಿಗೆ ಏನಾದರೂ ಓಡಾಡುತ್ತಿದ್ದಾರೆಯೇ? ಒಂದು ದಿವಸವಾದರೂ ಈ ಗ್ಯಾಲರಿಯಲ್ಲಿ ನೋಡಲಿಲ್ಲ. ಮಾನ್ಯ ಪ್ರಕಾಶ್‌ರವರೇ, ತಾವೇನಾದರೂ ನೋಡಿದ್ದೀರಾ ಹೇಳಿ. ಮಾನ್ಯ ಪ್ರಕಾಶ್‌ರವರು ಆ ಕಾರ್ಯದರ್ಶಿಯವರು ಸದನಕ್ಕೆ ಬಂದಿರುವುದನ್ನು ನೋಡಿದ್ದೇವೆಂದು ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ.

Sri J.C. MADHUSWAMY :- Where is the Principal Secretary, Commerce and Industries Department ?

ಶ್ರೀ ವಾಟಾಳ್ ನಾಗರಾಜ್ :- ಈಗ ಸರ್ವೋಚ್ಛ ನ್ಯಾಯಾಲಯದಲ್ಲಿ ತಡೆಯಾಜ್ಞೆ ತರುವುದಕ್ಕೆ ಡೆಲ್ಲಿಗೆ ಹೋಗಿರಬಹುದೇ? ಯಾರು ಅವರು? ಈ ಸದನಕ್ಕೆ ಬರಲಿಲ್ಲವೇಕೆ? ಏನಿದು?

ಶ್ರೀ ಜೆ.ಸಿ. ಮಾಧುಸ್ವಾಮಿ :- ಏನಾದರೂ charge ಆಗಿದೆಯೇ? ಜೈಲಿಗೆ ಹಾಕಿದ್ದಾರೆಯೇ? ಸುಳ್ಳು affidavit ಹಾಕಿದ್ದಾರೆಯೇ? ಏನಾದರೂ ಹೇಳಿ ಸರ್. ಅಥವಾ ಅವರು ಏನೇನು ಮಾಡಿದ್ದಾರೆಂದು ನಾವು ಹೇಳಿಬಿಡಲೇ? ಅವರು ಏನೇನು ಮಾಡಿದ್ದಾರೆಂದು ಬೇಕಾದರೆ ನಾವೇ ಹೇಳಿಬಿಡುತ್ತೇವೆ. Where is your Principal Secretary, Commerece and Industries Department ? Commerce and Industries Department ಗೆ Secretary ಯೇ ಇಲ್ಲವೇ?

Attendance ತರಿಸಿ ಸರ್. ಈ ಸಭೆಗೆ ಅವರು ಯಾವತ್ತು ಬಂದಿದ್ದಾರೆ? ಅವರಿಗೆ ಯಾವತ್ತು allot ಆಗಿತ್ತು?

ಶ್ರೀ ವಾಟಾಳ್ ನಾಗರಾಜ್ :– ಬಹುಶಃ ಅವರಿಗೆ ಮನುಷ್ಯರನ್ನು ಕಂಡರೆ ಆಗುವುದಿಲ್ಲವೆಂದು ತೋರುತ್ತದೆ. ಕೈಗಾರಿಕಾ ಇಲಾಖೆಯ ಕಾರ್ಯದರ್ಶಿ ಎಲ್ಲಿಗೆ ಹೋಗಿದ್ದಾರೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಈಗ ಮಾನ್ಯ ಕಾನೂನು ಸಚಿವರು ದಯವಿಟ್ಟು ಹೇಳಬೇಕು. ಒಂದೇ ಒಂದು ದಿವಸ ಆ ಕಾರ್ಯದರ್ಶಿಗಳು ಸದನಕ್ಕೆ ಬಂದಿದ್ದಾರೆಯೇ ಎಂದು ಕೇಳಿ ಸರ್. ಆ ಕಾರ್ಯದರ್ಶಿಗಳು ಯಾವ ಕಾನೂನು ಸಮರದಲ್ಲಿ ತೊಡಗಿದ್ದಾರೆ? ಎಲ್ಲಿ ಏನು ನಡೆಯುತ್ತಿದೆ? ಯಾವ್ಯಾವ ಕೋರ್ಟ್‌ಗೆ ಹೋಗುತ್ತಿದ್ದಾರೆ? ಕಾನೂನು ಸಮರದಲ್ಲಿದ್ದಾರೆಯೇ ಅಥವಾ ಬೇರೆ ಏನಾದರೂ ಸಮರದಲ್ಲಿದ್ದಾರೆಯೇ?

ಶ್ರೀ ವಾಟಾಳ್ ನಾಗರಾಜು :– ಅವರ ಸದನ ಸಮಿತಿಗಳಿಗೆ ಸಹ ಬರುವುದಿಲ್ಲ. ಅವರಿಗೆ ಸದನ ಸಮಿತಿಗೆ ಬರುವುದು ಬಹಳ ಕಷ್ಟ. ಅವರಲ್ಲಿಗೆ ಶಾಸಕರು ಹೋದರೆ ಮಾತನಾಡುವುದಕ್ಕೆ ಕಷ್ಟ. ಸಭೆಗೆ ಕರೆದರೆ ಅಂಥ ಸಭೆಗೆ ಬರುವುದಕ್ಕೂ ಅವರಿಗೆ ಕಷ್ಟವಾಗಿದೆ. ಇವರಿಗೆ ಏನಾಗಿದೆ? ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಈ ತರಹ ಆಕಾಶದಲ್ಲಿದ್ದವರ ಹಾಗೆ ಆಡುತ್ತಿದ್ದಾರೆ, ಯಾರವರು? ಈ ಸದನಕ್ಕೆ ಬರದಿರುವುದಕ್ಕೆ ಕಾರಣವೇನು? ತಾವು ಅವರನ್ನು ಕರೆಸಬೇಕು. ಅವರು ಇದ್ದಾರೆಯೇ ಅಥವಾ ಇಲ್ಲವೇ? ರಜೆಯಲ್ಲಿ ಹೋಗಿದ್ದಾರೆಯೇ? ಆ ಇಲಾಖೆಗೆ ಕಾರ್ಯದರ್ಶಿಗಳಾಗಿ ಯಾರಿದ್ದಾರೆನ್ನುವುದು ಸರ್ಕಾರ ಸದನಕ್ಕೆ ತಿಳಿಸಿದರೆ ಒಳ್ಳೆಯದಲ್ಲವೇ? ನಾವು ಇಷ್ಟೆಲ್ಲ ಹೇಳಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ನಾನು ತಿಳಿದುಕೊಂಡಿದ್ದೇನೆಂದರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಯಾವಾಗಲೂ ಕೂಡ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಬಗ್ಗೆ ಜಾಸ್ತಿ ಗಮನ ಕೊಡುತ್ತಾರೆ, ನನ್ನ ಕಡೆ ಅವರು ಗಮನವನ್ನೇ ಹರಿಸುವುದಿಲ್ಲವೆಂದು ಬಹುಶಃ ಅವರು ಬಂದಿರಲಿಕ್ಕಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಮಾನ್ಯ ಕಾನೂನು ಮಂತ್ರಿಗಳಿಗೆ ಇದೆಲ್ಲ ಗೊತ್ತಿರಬೇಕಾಗುತ್ತದೆ. ದಯವಿಟ್ಟು, 'ಇಲ್ಲಪ್ಪ ನೀವು ಹೇಳುತ್ತಿರುವುದು ಸರಿಯಿಲ್ಲ, ಅವರು ಗ್ಯಾಲರಿಗೆ ಬಂದಿದ್ದನ್ನು ನಾನು ನೋಡಿದೆ' ಎಂದು ಮಾನ್ಯ ಎಂ.ಪಿ. ಪ್ರಕಾಶ್‌ರವರಾದರೂ ಹೇಳಲಿ. ಆಗ ನಾನು ಒಪ್ಪಿಕೊಂಡುಬಿಡುತ್ತೇನೆ.

ಅವರಿಗೇನಾದರೂ exemption ಕೊಟ್ಟಿದ್ದಾರೆಂಯೇ? ಸದನಕ್ಕೆ ಬರಬಾರದೆಂದೇನಾದರೂ ಅಧ್ಯಕ್ಷರು exemption ಕೊಟ್ಟಿದ್ದಾರೆಯೇ?

ಶ್ರೀ ಹೆಚ್.ಸಿ. ಬಾಲಕೃಷ್ಣ :- ಮಾನ್ಯ ಛೇರ್ಮನ್‌ರವರೇ, ಇವರು ಬರಗಾಲದ ಬಗ್ಗೆ ಚರ್ಚೆ ಮಾಡುತ್ತಾರೋ ಅಥವಾ ಇದನ್ನೇ continue ಮಾಡುತ್ತಾರೋ? ಬರಗಾಲದ ಚರ್ಚೆಯನ್ನು ಬಿಟ್ಟು ಇದನ್ನೇಕೆ ಸುಮ್ಮನೆ ಮುಂದುವರಿಸುತ್ತಿದ್ದೀರಿ? ಕಾರ್ಯದರ್ಶಿಗಳನ್ನೆಲ್ಲಾ ಕರೆಸಿ ನೀವೆಲ್ಲರೂ ಒಂದು ದಿವಸ ಬೇಕಾದಷ್ಟು ಚರ್ಚೆ ಮಾಡಿ. ಈಗ ಬರಗಾಲದ ಬಗ್ಗೆ ಚರ್ಚೆ ಮಾಡಿ. (ಗೊಂದಲ) ಮಾನ್ಯ ಛೇರ್ಮನ್‌ರವರೆ, ಕಾರ್ಯದರ್ಶಿಗಳನ್ನೆಲ್ಲಾ ಕರೆಸಿ ಇಲ್ಲಿ ಕುಳ್ಳಿರಿಸಿ ಇಂತಿಂಥ ಇಲಾಖೆಯ ಕಾರ್ಯದರ್ಶಿಗಳೆಂದು ಅವರಿಗೆಲ್ಲ ಒಂದು ಸಲ ಪರಿಚಯ ಮಾಡಿಕೊಡಿ.

(5 : 00 pm)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ....

(ಗೊಂದಲ) ನೀವೇನಾದರೂ exemption ಕೊಟ್ಟಿದ್ದೀರಾ?

(ಗೊಂದಲ)

ಶ್ರೀ ಸಿದ್ಧರಾಮಯ್ಯ :- ಅದು ಅವರ ಜವಾಬ್ದಾರಿ ಅದನ್ನು ಮಾಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನೀವೇನಾದರೂ ಅವರಿಗೆ exemption ಕೊಟ್ಟಿದ್ದೀರಾ? ಅದು ಸದನಕ್ಕೆ ಗೊತ್ತಾಗಬೇಕು.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ :- ಬರಗಾಲದ ಬಗ್ಗೆ ಚರ್ಚೆ ಮುಂದುವರೆಸಿ (ಗೊಂದಲ) ಇವರೆಲ್ಲ ಬರಗಾಲದ ಬಗ್ಗೆ ಚರ್ಚೆ ಮಾಡುವುದಕ್ಕೆ ....

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- Attendance ತರಿಸಿ. (ಗೊಂದಲ) Principal Secretary, Commerce and Industries, ಇವರಿಗೆ ನೀವೇನಾದರೂ exemption ಕೊಟ್ಟಿದ್ದೀರಾ? ಎಂದು ನೀವು ಹೇಳಬೇಕು.

(ಗೊಂದಲ)

ಛೇರ್ಮನ್ :- ವಿಷಯ ಬೇರೆ ಕಡೆಗೆ ಹೋಗುವುದು ಬೇಡ. ಬರ ವಿಷಯದ ಬಗ್ಗೆ ಚರ್ಚೆಯಾಗುತ್ತಿದೆ. ಈ ವಿಷಯವನ್ನು ಬೇರೆ ಸಮಯದಲ್ಲಿ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು :- ಇವರಿಗೇನಾದರೂ ಬರದ ಬಗ್ಗೆ ಕಳಕಳಿ ಇದೆಯೇ? (ಗೊಂದಲ) ಅವರಿಲ್ಲ, ಇವರಿಲ್ಲ ಎಂದು ಹೇಳುವುದು.

(ಗೊಂದಲ)

ಛೇರ್ಮನ್ :- ಅವರು ಚರ್ಚೆ ಮುಂದುವರೆಸಲಿ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು :- ನಾವೂ ಮಾತನಾಡಲು ಕಾಯುತ್ತಿದ್ದೇವೆ. ನಮ್ಮದೂ ಮಹತ್ವದ ವಿಚಾರವಿದೆ.

ಶ್ರೀ ಸಿದ್ಧರಾಮಯ್ಯ :- ವಿಷಯಾಂತರವಾಗುವುದು ಬೇಡ. ಇವರು ಹಣವಿದ್ದರೂ ಖರ್ಚು ಮಾಡುತ್ತಿಲ್ಲ. ಕುಡಿಯುವ ನೀರಿಗೆ 50 ಕೋಟಿ ರೂಪಾಯಿ ಬಿಡುಗಡೆ ಮಾಡುತ್ತೇವೆಂದು ಒಂದು ವಾರದಿಂದ ಹೇಳುತ್ತಿದ್ದಾರೆ. ಆದರೆ, ಇವತ್ತಿನವರೆಗೆ ಆ ಹಣವನ್ನು ಬಿಡುಗಡೆ ಮಾಡಿಲ್ಲ. ಆ ಬಗ್ಗೆ ಇನ್ನೂ order issue ಆಗಿಲ್ಲ. ಜನರಿಗೆ ಕೆಲಸ ಕೊಡಲು ಹಣವನ್ನು ಬಿಡುಗಡೆ ಮಾಡಿಲ್ಲ. ದನಕರುಗಳ ಮೇವಿಗೆ ಹಣ ಬಿಡುಗಡೆ ಮಾಡಿಲ್ಲ. ಜನವರಿ, ಫೆಬ್ರುವರಿ ತಿಂಗಳಲ್ಲಿ ಬಿಡುಗಡೆ ಮಾಡಿದ್ದು ಬಿಟ್ಟರೆ, P.D. account ನಲ್ಲಿ ಹಣವಿದೆ ಎಂದು ಹೇಳಿಕೊಂಡು ಜನರನ್ನು ಸಂಪೂರ್ಣವಾಗಿ ಮರೆತಿದ್ದಾರೆ. ಈಗಾಗಲೇ ಮಾನ್ಯ ಖರ್ಗೆಯವರು ಹೇಳಿದರು. ಕುಡಿಯುವ ನೀರಿಗೆ ಕೂಡಲೇ 100 ಕೋಟಿ ರೂಪಾಯಿಗಳನ್ನಾದರೂ ಬಿಡುಗಡೆ ಮಾಡಬೇಕು. ಏಕೆಂದರೆ, ಏಪ್ರಿಲ್ ಮತ್ತು ಮೇ ಬಹಳ ಬಿಸಿಲಿನ ತಾಪವಿರುವಂಥ ತಿಂಗಳುಗಳು. ಈ ಸಮಯದಲ್ಲಿ ನೀರಿಗೆ ಹೆಚ್ಚು ಹಾಹಾಕಾರ ಬರುತ್ತದೆ.

ಜನರಿಗೆ ಕೆಲಸ ಕೊಡಲಿಕ್ಕೋಸ್ಕರವಾಗಿ 200 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕು. ಮೇವು, ಸಾಗಾಣಿಕೆ ಮತ್ತು ಬೇರೆಯದಕ್ಕೆ 50 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕು. ಒಟ್ಟು 350 ಕೋಟಿ ರೂಪಾಯಿಗಳನ್ನು

ಕೂಡಲೇ ಬಿಡುಗಡೆ ಮಾಡಿ, ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಸಮರೋಪಾದಿಯಲ್ಲಿ ಕೆಲಸ ಮಾಡಬೇಕು. ನಿಮಗೆ ನಿಜವಾದ ಕಾಳಜಿ ಇದ್ದರೆ, ಬರಗಾಲವನ್ನು ನಿಭಾಯಿಸಬೇಕೆನ್ನುವುದಾದರೆ, ಜನರ ಕಷ್ಟಕ್ಕೆ ಸ್ಪಂದಿಸಬೇಕೆನ್ನುವುದಾದರೆ, ಬಡವರ ಬಗ್ಗೆ ಕಾಳಜಿ ಇದ್ದರೆ, ಹಳ್ಳಿಗಾಡಿನ ರೈತರ ಬಗ್ಗೆ ಕಾಳಜಿ ಇದ್ದರೆ ಕೆಲಸ ಮಾಡಿ. ಏಕೆಂದರೆ, 361 ಕೋಟಿ ರೂಪಾಯಿಗಳು ಕೇಂದ್ರ ಸರ್ಕಾರದಿಂದ ಪ್ಯಾಕೇಜ್‌ನಲ್ಲಿ ಬಂದಿದೆ. ಇದುವರೆಗೂ ಅದಕ್ಕೊಂದು Action Plan ಮಾಡಿಲ್ಲ. ಆ ಸಮಿತಿಗೆ P.W.D. ಮಂತ್ರಿಗಳು ಅಧ್ಯಕ್ಷರಾಗಿದ್ದಾರೆ. ಒಂದು ಮೀಟಿಂಗ್ ಮಾಡಿದರು. ಎಷ್ಟು ಜನ ಸತ್ತಿದ್ದಾರೆಂದು ಕೇಳಿದ್ದಕ್ಕೆ ಅಧಿಕಾರಿಗಳು ಯಾರೂ ಹೇಳಲಿಲ್ಲ.

ನಮಗೆ ಸಂಶಯ ಏನು ಬಂದಿದೆ. ಎಂದರೆ, ಅಧಿಕಾರಿಗಳು ಇವರ ಮಾತು ಕೇಳುವುದೇ ಇಲ್ಲವೇನೋ? ಏಕೆಂದರೆ, ಯಾವ ಮೀಟಿಂಗ್‌ನಲ್ಲಾದರೂ ನೋಡಿ Chief Minister, Deputy Chief Minister, ರವರು, ನಮ್ಮ ಮಾತು ಕೇಳುವುದಿಲ್ಲವೆಂದು ಅಧಿಕಾರಿಗಳನ್ನು ಬಯ್ಯುತ್ತಾರೆ. ಏಕೆ ಕೇಳುವುದಿಲ್ಲ? ಕುದುರೆ ಸವಾರ ಸರಿಯಾಗಿದ್ದರೆ, ಕುದುರೆ ಸರಿಯಾಗಿ ಓಡುತ್ತದೆ. ಸವಾರ ಸರಿ ಇಲ್ಲದಿದ್ದರೆ ಏನಾಗುತ್ತದೆ? District in charge Minister ಕೂಡಲೇ ಆ ಕೆಲಸ ಮಾಡಬೇಕು. ಎಲ್ಲ ಅಧಿಕಾರಿಗಳು ಅಲ್ಲಿ ಹೋಗಿ ಒಂದೊಂದು ವಾರ ಕುಳತಿಕೊಳ್ಳಬೇಕು. ಆಯಾ ಜಿಲ್ಲೆಗೆ ಹೋಗಿ ಕುಳಿತುಕೊಳ್ಳಬೇಕು, ಎಲ್ಲ ತಾಲ್ಲೂಕುಗಳಿಗೆ ಹೋಗಬೇಕು, inspection ಮಾಡಬೇಕು, ರಿವ್ಯೂ ಮಾಡಬೇಕು.

ಹಣ ದುರುಪಯೋಗವಾಗದ ರೀತಿ ನೋಡಿಕೊಳ್ಳಬೇಕು. ಹಣ ಬಿಡುಗಡೆ ಮಾಡುವುದೊಂದೆ ಕಡೆ. ಆ ಹಣ ದುರುಪಯೋಗವಾಗದ ರೀತಿಯಲ್ಲಿ ಅದು ಜನರಿಗೆ ತಲುಪುವ ರೀತಿಯಲ್ಲಿ ನೋಡಿಕೊಳ್ಳಬೇಕು. ಆ ಜವಾಬ್ದಾರಿಯನ್ನು ಸರ್ಕಾರ ನಿರ್ವಹಿಸಬೇಕೆಂದು ಒತ್ತಾಯ ಮಾಡುತ್ತೇನೆ. ಕೇಂದ್ರ ಸರ್ಕಾರದಿಂದ 2,670 ಕೋಟಿ ರೂಪಾಯಿ ಬಂದಿದೆಯಲ್ಲ, ಆ ಮೀಟಿಂಗ್‌ಗೆ ರೇವಣ್ಣನವರೇ, ನಿಮ್ಮದೇ ಅಧ್ಯಕ್ಷತೆ ತಾನೆ? ಇದುವರೆಗೆ ಆ ಬಗ್ಗೆ ಏನು ಮಡಿದ್ದೀರಿ ಎಂಬುದು ಗೊತ್ತಿಲ್ಲ. ಏನೂ ಮಾಡಿಲ್ಲ. ಆದ್ದರಿಂದ, ಕೂಡಲೇ ಸರ್ಕಾರ ಕಾರ್ಯೋನ್ಮುಖ ವಾಗಬೇಕು. ಏಪ್ರಿಲ್, ಮೇ ತಿಂಗಳಲ್ಲಿ ಇವರು ತುದಿಗಾಲಲ್ಲಿ ನಿಂತು ಕೆಲಸ ಮಾಡಬೇಕಾಗುತ್ತದೆ. ಅಧಿಕಾರಿಗಳು, District in charge Minister ಗಳು ಮತ್ತು ಸಂಬಂಧಪಟ್ಟ ಕಂದಾಯ ಮಂತ್ರಿ, Rural Development Minister, Agriculture Minister ಇವರೆಲ್ಲರೂ ಕೂಡ ಈ ಕೆಲಸವನ್ನು ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) :- ಮಾನ್ಯ ವಿರೋಧ ಪಕ್ಷದ ನಾಯಕರಾದ ಧರ್ಮಸಿಂಗ್‌ರವರು, ಹಿರಿಯ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಮಾನ್ಯ ಸಿದ್ಧರಾಮಯ್ಯನವರು ಈಗಾಗಲೇ ರಾಜ್ಯದಲ್ಲಿರುವ 128 ತಾಲ್ಲೂಕುಗಳಲ್ಲಿರುವ ಬರಗಾಲದ ಬಗ್ಗೆ ಸವಿಸ್ತಾರವಾಗಿ ಅಂಕಿ ಅಂಶಗಳನ್ನು ಕೊಟ್ಟು ಈ ಸರ್ಕಾರ ಸಂಪೂರ್ಣವಾಗಿ ಬರಗಾಲದ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಲು ವಿಫಲವಾಗಿರುವುದನ್ನು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಪ್ರಾಸ್ತವಿಕವಾಗಿ ಅಧಿಕಾರಿಗಳ ಬಗ್ಗೆ ಸಹ ಪ್ರಸ್ತಾಪವಾಯಿತು. ನನಗೂ ಆಶ್ಚರ್ಯ. ಅದರ ಬಗ್ಗೆ ಹೆಚ್ಚು ಸಮಯವನ್ನು ಉಪಯೋಗಿಸದೇ ಹೋದರೂ ಒಂದು ಅಭಿಪ್ರಾಯವನ್ನು ಹೇಳಬೇಕಾಗುತ್ತದೆ. ಅತ್ತೂ ಕರೆದು ಅಧಿಕಾರಗಳನ್ನು ಈ ಸಭೆಗೆ ಕರೆಸಿಕೊಳ್ಳತಕ್ಕಂಥ ಅವಶ್ಯಕತೆ ನಮಗಿಲ್ಲ. ಹಿರಿಯ ಸದಸ್ಯರಾಗಿರುವ ವಾಟಾಳ್ ನಾಗರಾಜ್‌ರವರು, ಸಿದ್ಧರಾಮಯ್ಯನವರು, ನೀವೆಲ್ಲ ಅನೇಕ ಸರ್ಕಾರಗಳನ್ನು ನೋಡಿರತಕ್ಕಂಥವರು, ರಚನೆ ಮಾಡಿರತಕ್ಕಂಥವರು.

ನಾನು ಈಗಾಗಲೇ ಈ ಸರ್ಕಾರ ಸಂವಿಧಾನಬದ್ಧವಾಗಿ ಕೆಲಸ ಮಾಡುತ್ತಿಲ್ಲವೆಂದು ಹೇಳಿ High Court ಗೆ ನಿನ್ನೆ ಅರ್ಜಿ ಸಲ್ಲಿಸಿದ್ದೇನೆ. ಏಕೆಂದು ಹೇಳಿದರೆ, ಈ ಸರ್ಕಾರದ ವ್ಯವಸ್ಥೆಯಲ್ಲಿ ಒಳ್ಳೆಯ ಅಧಿಕಾರಿಗಳೂ ಇದ್ದಾರೆ, ಇದೇ ಸಮಯವೆಂದು ಹೇಳಿ ತಮ್ಮ ವ್ಯವಹಾರವನ್ನು ಮಾಡಿಕೊಳ್ಳತಕ್ಕಂಥ ಅಧಿಕಾರಿಗಳೂ ಸಹ ಇದ್ದಾರೆ. ಈ ವ್ಯವಹಾರ ಮಾಡುವ ಅಧಿಕಾರಿಗಳು ಎಚ್ಚರಿಕೆಯಿಂದ ಇರಬೇಕಾಗುತ್ತದೆ. ನಾನು ಈ ಸಂದರ್ಭದಲ್ಲಿ ಅವರಿಗೆ ಎಚ್ಚರಿಕೆಯನ್ನು ಕೊಡಲಿಕ್ಕೆ ಬಯಸುತ್ತೇನೆ. ಅವರ ವ್ಯವಹಾರವನ್ನು ಅವರು ಮಾಡಿಕೊಂಡು ಹೊರಟುಬಿಟ್ಟರೆ, ಸಮ್ಮಿಶ್ರ ಸರ್ಕಾರಗಳಲ್ಲಿ ಯಾರೂ ಅಧಿಕಾರದಲ್ಲಿ ಬಹಳ ಶಾಶ್ವತವಾಗಿರುವುದಿಲ್ಲವೆಂದು ಗೊತ್ತಿದೆ. ನೀವು ಇದಕ್ಕೆ ಅವಕಾಶವನ್ನು ಕೊಟ್ಟಿದ್ದೀರೋ, ಇಲ್ಲವೋ ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಒಂದು status paper ಎಂದು Assembly ಮುಗಿಯುವ ಕೊನೆಯ ದಿನ ಇದರೊಳಗೆ ನುಗ್ಗಿಸಿಬಿಟ್ಟಿದ್ದಾರೆ. ಯಾವ ಕಾನೂನಿನ ಒಳಗಡೆ ಈ ಒಂದು White Paper ಅನ್ನು ಇವರು ಮಂಡಿಸುವುದಕ್ಕೆ, ನುಗ್ಗಿಸುವುದಕ್ಕೆ ಗಣಿಮಂತ್ರಿಗಳು ಪ್ರಯತ್ನಪಟ್ಟಿದ್ದಾರೆಂದು ನನಗರ್ಥವಾಗುತ್ತಿಲ್ಲ. ಯಾರನ್ನು ಮುಚ್ಚಿಕೊಳ್ಳಲಿಕ್ಕೆ ಇವರು ಪ್ರಯತ್ನ ಮಾಡುತ್ತಿದ್ದಾರೆಂದು ಸಹ ನನಗೆ ಗೊತ್ತಾಗುತ್ತಿಲ್ಲ. (ಗೊಂದಲ) ನಾನು ಎರಡೂ ವಿಷಯ ಮಾತನಾಡುತ್ತಿದ್ದೇನೆ. ನೀವು ನನಗೆ permission ಕೊಟ್ಟು ತೆಗೆದುಕೊಂಡು......

(ಗೊಂದಲ)

ಒಬ್ಬ ಮಾನ್ಯ ಸದಸ್ಯರು :- ನೀವು ಮಾತನಾಡುವುದಕ್ಕೆ ಅನುಮತಿ ಕೊಟ್ಟಿದ್ದೀರಾ?

ಶ್ರೀ ಎಂ.ಪಿ. ವೆಂಕಟೇಶ್ :- ಈಗ ಬರಗಾಲದ ಬಗ್ಗೆ ಮಾತನಾಡುತ್ತಿರುವುದು. ಬೇರೆ ವಿಷಯ ಮಾತನಾಡುವುದಕ್ಕಲ್ಲ. ಬರಗಾಲದ ಬಗ್ಗೆ ಮಾತನಾಡಿ.

(ಗೊಂದಲ)

ಛೇರ್ಮನ್ :- ವೆಂಕಟೇಶ್‌ರವರೆ, ತಾವು ಕುಳಿತುಕೊಳ್ಳಿ. ಅವರಿಗೆ ಅವಕಾಶ ಕೊಟ್ಟಿದೆ. ಅವರು ಮಾತನಾಡುತ್ತಿದ್ದಾರೆ. ಅವರು ಅವರ ಅನಿಸಿಕೆ ಹೇಳಲಿ. ದಾಖಲೆ ಮಾಡಲಿ. ತಾವು ಕುಳಿತುಕೊಳ್ಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಏನು ಮಾತನಾಡಬೇಕೆಂದು ತೀರ್ಮಾನ ಮಾಡುವುದು ನೀವು ಇವರಿಗೆ ಅಧಿಕಾರ ಕೊಟ್ಟಿದ್ದಾರೆಯೇ?

(ಗೊಂದಲ)

ಛೇರ್ಮನ್ :- ವೆಂಕಟೇಶ್‌ರವರೆ, ಸಿಂಧ್ಯರವರಿಗೆ ಮಾತನಾಡಲು ಅವಕಾಶ ಕೊಟ್ಟಿದೆ. ತಾವು ದಯವಿಟ್ಟು ಕುಳಿತುಕೊಳ್ಳಿ. ಸಿಂಧ್ಯರವರೆ, ತಾವು ಮುಂದುವರಿಸಿ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಕುಂಬಳ ಕಾಯಿ ಕಳ್ಳ ಎಂದರೆ ಇವರು ಹೆಗಲನ್ನು ಏಕೆ ಮುಟ್ಟಿಕೊಳ್ಳುತ್ತಿದ್ದಾರೆ ನನಗರ್ಥವಾಗುತ್ತಿಲ್ಲ (ಗೊಂದಲ) ಅಸೆಂಬ್ಲಿಯಲ್ಲಿ ಯಾವ ರೀತಿ ನಡೆದುಕೊಳ್ಳಬೇಕು, ಪಕ್ಷಾಂತರ ಯಾವ ತರಹ ಮಾಡಬೇಕು ಎಂದು ವೆಂಕಟೇಶ್‌ರವರಿಂದ ಪಾಠ ಕಲಿಯುವ ಅವಶ್ಯಕತೆ ನನಗಿನ್ನೂ ಬಂದಿಲ್ಲ. ನೀವು ಅವಕಾಶ ಕೊಟ್ಟಿದ್ದೀರಿ, ನಾನು ಮಾತನಾಡುತ್ತೇನೆ.

(ಗೊಂದಲ)

ಛೇರ್ಮನ್ :- ಇಲ್ಲಿ ವೈಯಕ್ತಿಕ ದೂಷಣೆ ಬೇಡ. ನಿಮ್ಮ ಅಭಿಪ್ರಾಯವಷ್ಟೇ ಹೇಳಿ.

ಶ್ರೀ ಎಂ.ಪಿ. ವೆಂಕಟೇಶ್ :- ನಾನು ಹೇಳಬೇಕಾಗಿಲ್ಲ.

(ಗೊಂದಲ)

ಛೇರ್ಮನ್ :- ವೆಂಕಟೇಶ್‌ರವರೆ, ಅವರಿಗೆ ಅವಕಾಶ ಕೊಟ್ಟಿದೆ, ತಾವು ಕುಳಿತುಕೊಳ್ಳಿ, (ಗೊಂದಲ) ಶ್ರೀರಾಮರೆಡ್ಡಿಯವರೆ, ತಾವೂ ಕುಳಿತುಕೊಳ್ಳಿ, ಸಿಂಧ್ಯರವರೆ, ತಾವು ಮುಂದುವರಿಸಿ.

(ಗೊಂದಲ)

ವೆಂಕಟೇಶ್‌ರವರು ನನ್ನ ಸ್ನೇಹಿತರು, ಅವರು ನನ್ನ ಮಾತುಗಳನ್ನು ಕೇಳುವುದಕ್ಕೆ ಸಮಾಧಾನವಿಲ್ಲ ಅಷ್ಟೇ ನಾನೇನು ಇದರಲ್ಲಿ ಉದ್ದೇಶಪೂರ್ವಕವಾಗಿ ಮಾತನಾಡಬೇಕೆಂದು ಮಾತನಾಡಿಲ್ಲ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ :- ನೀವು ಯಾವುದೋ ವಿಚಾರವನ್ನು ಯಾವುದೋ ಸಂದರ್ಭದಲ್ಲಿ ಹೇಳಿದರೆ ಹೇಗೆ? ನೀವು ಈಗ ಬರಗಾಲದ ಮೇಲೆ ಮಾತನಾಡುತ್ತೀದ್ದೀರಿ. ಅದರ ಬಗ್ಗೆ ಮಾತನಾಡಬೇಕು.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ :- ನನ್ನ ಮಾತು ಕೇಳುವುದಕ್ಕೆ ಅವರಿಗೆ ಸಮಾಧಾನವಿಲ್ಲ. ನಾನೇನು ಹೇಳಿದೆ, ಮುಖ್ಯ ಕಾರ್ಯದರ್ಶಿಗಳೇ, ಅಧಿಕಾರಿಗಳೇ, ಇಲ್ಲಿಗೆ ಬನ್ನಿ ಎಂದು ನಾವು ಅತ್ತು ಕರೆದು ನಮ್ಮ ಮಾತು ಕೇಳಿ ಎಂದು ಅವರನ್ನು ಕೇಳುವಂಥ ಪರಿಸ್ಥಿತಿಗೆ ಇನ್ನೂ ಬಂದಿಲ್ಲ. ಒಳ್ಳೆಯ ಅಧಿಕಾರಿಗಳು ಇದ್ದಾರೆ, ಕೆಲಸ ಮಾಡತಕ್ಕಂಥವರು ಇದ್ದಾರೆ, ಸಮಯವನ್ನು ಉಪಯೋಗಿಸತಕ್ಕಂಥವರು ಇದ್ದಾರೆ, ಅಸೆಂಬ್ಲಿ ಮುಗಿದು ಹೋಗಿ ಬಿಡುತ್ತದೆ. ಬರಗಾಲದ ಬಗ್ಗೆ ಒಂದೆರಡು ಮಾತು ಹೇಳಬೇಕು. ಇದರ ಮಧ್ಯೆ ಇದೊಂದು ನೀವು ನುಗ್ಗಿಸಿ ಬಿಟ್ಟಿದ್ದೀರಿ... ಸ್ವಲ್ಪ ತಾಳಿ ಸ್ವಾಮಿ ದಯಮಾಡಿ ತಾವು ತಾಳಬೇಕು. ನಾನು ಹೇಳುವುದನ್ನು ಕೇಳುವುದಕ್ಕೆ ತಯಾರಿಲ್ಲ. ಇದನ್ನು ಮಂಡನೆ ಮಾಡುವುದಕ್ಕೆ ನೀವು ಅವಕಾಶ ಕೊಟ್ಟಿದ್ದೀರಾ ಸಂಸದೀಯ ವ್ಯವಹಾರಗಳ ಮಂತ್ರಿಗಳು, ಇದರ ಬಗ್ಗೆ ಚರ್ಚೆ ಆಗಬೇಕಾಗಿತ್ತು ನೀವು ಕೊಟ್ಟಿದ್ದೀರಲ್ಲಾ ಎಂದು ನಾನು ಹೇಳಿದೆ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ :- ನಾವು ಹೇಳುವುದಕ್ಕೆ ಪರ್ಮಿಷನ್ ಕೊಟ್ಟಿಲ್ಲ. ಸ್ಪೀಕರ್ ಕೊಟ್ಟಿದ್ದಾರೆ. ಸಾರ್ ನಾನು ಕೊಟ್ಟಿಲ್ಲ.

ಶ್ರೀ ಪಿ.ಜಿ. ಆರ್. ಸಿಂಧ್ಯ :- You are not prepared to hear me. Please have some patience.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ :- No, No.....

ಶ್ರೀ ಪಿ.ಜಿ.ಆರ್. ಸಿಂಧ್ಯ :- ದಯಮಾಡಿ ನೀವು ನಮ್ಮ ಮಾತನ್ನು ಕೇಳಿ ಆಮೇಲೆ ಮಾತನಾಡಿ. ಈಗ ತಾವು ಆ ಸ್ಥಾನದಲ್ಲಿ ಕುಳಿತಿರಬೇಕಾದರೆ, ಸಂಸದೀಯ ವ್ಯವಹಾರಗಳ ಮಂತ್ರಿಗಳಾಗಿ ಕುಳಿತಿದ್ದೀರಿ. ಅದು ನಿಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ :- ನೀವು ಪರ್ಮಿಷನ್ ಕೊಟ್ಟಿದ್ದಾರೆಂದು ಹೇಳಿದಿರಿ. ನಿಮ್ಮಂತಹ ಹಿರಿಯರು ಈ ರೀತಿ ಹೇಳಿದರೆ, Who am I to give permission to lay the papers on the table of this House? I have nothing to do with that. I am here to assist the deliberations of this House. Therefore, I am trying to help you. Please, ತಾವು ಆ ರೀತಿ ಹೇಳಬಾರದು.

ಶ್ರೀ ಜೆ.ಸಿ. ಮಾಧುಸ್ವಾಮಿ :- ಕನಿಷ್ಠ ತಾವು ಇಂಥ ಪೇಪರ್ ಲೇ ಮಾಡುತ್ತೇವೆಂದು ಹೇಳಬೇಕು, ಸುಮ್ಮನೆ ಆತ ಬಂದು ಇಲ್ಲಿ ಎಲ್ಲರಿಗೂ ಕೊಟ್ಟು ಹೋದರೆ ನಾವು ಏನೆಂದು ತಿಳಿದುಕೊಳ್ಳಬೇಕು.

(ಗೊಂದಲ)

ಶ್ರೀ ಪಿ.ಜಿ. ಆರ್. ಸಿಂಧ್ಯ :- ಕಾನೂನು ಸಚಿವರ ಗಮನಕ್ಕೆ ಬಂದಿದೆಯೋ ಇಲ್ಲವೋ ಎಂದು ಹೇಳಿದನೇ ಹೊರತು ಬೇರೆ ಏನೂ ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್ :- ತಾವು ಆ ರೀತಿ ಹೇಳಲಿಲ್ಲ, Sir, with due respect to you. You did not say that. ಸಂಸದೀಯ ವ್ಯವಹಾರಗಳ ಸಚಿವರ

ಪರವಾನಗಿ ಕೊಟ್ಟಿದ್ದಾರೆಯೇ ಎಂದು ಹೇಳಿದಿರಿ. ಪರವಾನಿಗೆ ಕೊಡುವುದಕ್ಕೆ ನನಗೆ ಬರುವುದಿಲ್ಲ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಆಯಿತು ಸಂತೋಷ ಬಿಡಿ. ಬರುವುದಿಲ್ಲವೆಂದರೆ ಪರವಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಸಿಂಧ್ಯಾರವರು ವಾದ ಮಾಡುವುದು, ನಾವು ಹೇಳುವುದು ಏನೆಂದರೆ, ಇದು ಸಂತೆಯಲ್ಲ. ಇದು ನಾಟಕದ ನೋಟಿಸ್ ಅಲ್ಲ. ಯಾರೋ ಬಂದು ಕೊಡುವುದಕ್ಕೆ ಬರುವುದಿಲ್ಲ. ಇದು ಸಂವಿಧಾನಬದ್ಧವಾಗಿರಯವ ಸದನದಲ್ಲಿ ಮಂಡಿಸಬೇಕಾದರೆ ತಮ್ಮ ಅಪ್ಪಣೆ ಪಡೆದು ತಾವು ಮಂಡಿಸುತ್ತೇವೆಂದು ಹೇಳಿ ನಂತರ ನಮಗೆಲ್ಲ ಕೊಡಬೇಕು. ಒಬ್ಬರು ಬಂದರು ಎಲ್ಲರಿಗೂ ಹಂಚಿದರು, ಎಲ್ಲರಿಗೂ ಕೊಟ್ಟು ಹೋದರು. ಪತ್ರಿಕೆಗಳವರಿಗೆ ಕೊಟ್ಟರು ನಾವು ಇದಕ್ಕೆ ಏನು ಅನ್ನಬೇಕು. ಅಷ್ಟೇ ಹೊರತು, ಹಂಚಬಾರದು ಎಂದಲ್ಲ. ಕೊಡಬಾರದು ಎಂದಲ್ಲ. ಕೊಡುವುದನ್ನು ಕ್ರಮಬದ್ಧವಾಗಿ ಕೊಡಲಿ ಎಂದು ಹೇಳುತ್ತಿರುವುದು. ತಾವು ಅನೌನ್ಸ್ ಮಾಡಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ನಾನೇನು ಇದನ್ನು ಹೇಳುವುದಕ್ಕೆ ಹೋಗುತ್ತಿರಲಿಲ್ಲ. I am not interested also. ನಾನೇಕೆ ಇದನ್ನು ಮಾಡಿದೆ ಎಂದರೆ, ಬರಗಾಲದ ಬಗ್ಗೆ ವಿಚಾರಣೆ ಮಾಡುತ್ತಿದ್ದೇವೆ. ಒಂದೆರಡು ಗಂಟೆಗಳಲ್ಲಿ ಅಧಿವೇಶನ ಮುಗಿಯುತ್ತದೆ, ನಾವು ಒಂದಿಷ್ಟು ಸಲಹೆಗಳನ್ನು ಕೊಡಬೇಕೆಂದು ಇದ್ದೇವೆ. ಈಗ ಯಾರಾದರೂ ಯಾವುದಾದರೂ ಲಗ್ನಪತ್ರಿಕೆ ಅಥವಾ ಊಟದ ಆಹ್ವಾನ ಪತ್ರಿಕೆಯಾಗಿದ್ದರೆ, ನಮ್ಮ ಮಾರ್ಷಲ್‌ಗಳ ಮೂಲಕ ಎಲ್ಲರಿಗೂ ಹಂಚಿದ್ದರೆ I would have kept quiet. ಇದು ಮಾರ್ಷಲ್‌ಗಳ ಮೂಲಕ ಬಂದಿರತಕ್ಕಂಥದ್ದಲ್ಲ. ಸರಕಾರವೆಂದು ಇದೆ. ಸರಕಾರದ Photo ಮತ್ತೊಂದು ಎಲ್ಲಾ ಇದೆ. ಮಾನ್ಯ ಸ್ಪೀಕರ್‌ರವರು ಇಷ್ಟೊತ್ತು ಕುಳಿತುಕೊಂಡಿದ್ದವರು ಹಂಚುವಾಗ ಸಹ ಕುಳಿತುಕೊಂಡಿದ್ದರು ಈಗ ತಾವು ತಾತ್ಕಾಲಿಕವಾಗಿ ಅಧ್ಯಕ್ಷರಾಗಿ ಬಂದಿದ್ದೀರಿ. ಈಗ ಇದು ವಿತರಣೆಯಾಗುತ್ತಿದೆ, ಇದೇನು ಈಗ ಏಕೆ ಸಮಯ ವೇಸ್ಟ್ ಮಾಡುತ್ತೀರಿ ಎಂದು ಹೇಳಿದ್ದೇನೆಯೆ ಹೊರತು ಬೇರೆ ಏನೂ ಇಲ್ಲ. ಬರಗಾಲದ ಬಗ್ಗನೇ ನಾನು ಮಾಡುತ್ತೇನೆ.

ಶ್ರೀ ಎಂ.ಪಿ. ವೆಂಕಟೇಶ್ :- ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :– ನೋಡಿ ಪುನಃ ಮಾತನಾಡಿ ಎಂದು ಹೇಳುತ್ತಾರೆ, ನಿಮ್ಮ ಪರ್ಮಿಷನ್ ಬೇಡ ನಮಗೆ, ನಿಮ್ಮ ಪರ್ಮಿಷನ್ ನಮಗೆ ಏಕೆ ಬೇಕು ಸಾರ್?

ಶ್ರೀ ಎನ್. ಚೆಲುವರಾಯಸ್ವಾಮಿ :– ಸೌಜನ್ಯಕ್ಕಾಗಿ ಹೇಳಿದ್ದಾರೆ ಬಿಡಿ ಸಾರ್.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ :– ಚೆಲುವರಾಯ ಸ್ವಾಮಿಯವರೆ, ಸೌಜನ್ಯ, ನಾಟಕ, ಇವೆಲ್ಲ ಗೊತ್ತಿದೆ. ಏಕೆ ಸುಮ್ಮನೆ ನಮ್ಮ ಟೈಂ ವೇಸ್ಟ್ ಮಾಡುತ್ತೀರಿ? ಯಾರ್ಯಾರಿಗೆ ಎಷ್ಟೆಷ್ಟು ಸೌಜನ್ಯವಿದೆಯೆಂದು ನಾವು ನೋಡಿದ್ದೇವೆ. ಎಲ್ಲಾ ಸೌಜನ್ಯಗಳನ್ನು ನಾನು ನೋಡಿರುವುದಾಗಿದೆ.

(ಗೊಂದಲ)

ಶ್ರೀ ಎಂ.ಪಿ. ವೆಂಟಕೇಶ್ :– ಸಿಂಧ್ಯಾರವರು ಚೆನ್ನಾಗಿ ಮಾತನಾಡುತ್ತಾರೆ, ಅದನ್ನು ನಾವು ಇಲ್ಲಿ ಕೇಳುವುದಕ್ಕೆ ಕುಳಿತಿದ್ದೇವೆ. ಸಿಂಧ್ಯಾರವರು ನಾವು ಜೀವರಾಜ್ ಆಳ್ವರವರೂ ಎಲ್ಲರೂ 1976 ರಲ್ಲಿ ಒಟ್ಟಿಗೆ ಇದ್ದವರು. ಅವರು ಏನೆಂದು ನಮಗೆ ಗೊತ್ತು. ಅವರಿಂದಲೇ ನಾನು ಸ್ವಲ್ಪ ಕಲಿತಿರುವುದು. ಅದಕ್ಕಾಗಿ ಪ್ರಸ್ತಾಪ ಮಾಡಿದೆ. ಅವರಿಂದಲೇ ನಾನು ಕಲಿತಿರುವುದು.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ :– ನಾನೇನು ತಪ್ಪು ತಿಳಿದುಕೊಳ್ಳಲಿಲ್ಲ. ನಾನು ಬಹುಶಃ ನಿಮ್ಮ ಹಾಗೆ 2–3 ಪಕ್ಷ ಸೇರಿಲ್ಲ ವೆಂಕಟೇಶ್ ದಯವಿಟ್ಟು ತಿಳಿದುಕೊಳ್ಳಿ. ನೀವು ಜೆಡಿಎಸ್‌ನಿಂದ ಗೆದ್ದು ಯಾವ ಪಕ್ಷಕ್ಕೆ ಹೋಗಿದ್ದೀರಿ ಎಂಬುದು ಗೊತ್ತಿದೆ. ನಾನು 1977 ರಿಂದ ಇದೇ ಪಾರ್ಟಿಯಲ್ಲಿ ಇದ್ದೇನೆ. ಏಕೆ ಮಾತನಾಡುತ್ತೀರಿ ಕುಳಿತುಕೊಳ್ಳಿ, ಸುಮ್ಮನೆ ಎಲ್ಲಾ ಮಾತನಾಡುತ್ತೀರಾ, ಸಾಕು ಕುಳಿತುಕೊಳ್ಳಿ, ನೀವು ಬಿಜೆಪಿಯ ಜೊತೆಗೆ ಹೋಗಿರುವುದು, ಎಲ್ಲಾ ಕಂಡಿದ್ದೇನೆ ಕುಳಿತುಕೊಳ್ಳಿ.

ಶ್ರೀ ಎಂ.ಪಿ. ವೆಂಕಟೇಶ್ :– ನೀವು ದ್ರೋಹ ಮಾಡಿದ್ದೀರಿ. ಒಂದೇ ಪಕ್ಷದಲ್ಲಿದ್ದು ದ್ರೋಹ ಮಾಡಿ ಈಗ ಅಲ್ಲಿ ಹೋಗಿ ಕುಳಿತುಕೊಂಡಿದ್ದೀರಿ. ಇದು ಇತಿಹಾಸ. ನಿಮ್ಮ ಗೌರವ ಎಲ್ಲಾ ಹೊರಟು ಹೋಗಿದೆ. ನೀವು ದ್ರೋಹ ಮಾಡಿ ಅನ್ನ ತಿಂದ ಮನೆಗೆ ಕನ್ನ ಹಾಕಿದಿರಿ, ಮೋಸ ಮಾಡಿದಿರಿ, ಅದಕ್ಕೆ ನಿಮಗೆ ಈ ಗತಿಯಾಗಿರುವುದು.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಹೌದೌದು, ಇವರಿಂದ ನಾನು ಪಾಠ ಕಲಿತುಕೊಳ್ಳಬೇಕು.

(ಗೊಂದಲ)

ಛೇರ್ಮನ್ :- ಈಗ ಬರಗಾಲದ ಮೇಲೆ ಚರ್ಚೆ ಮಾಡಿ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಹಿರಿಯ ಸದಸ್ಯರಿಗೆ ಅನ್ನ ತಿಂದ ಮನೆಗೆ ಕನ್ನ ಹಾಕಿದರು ಎಂದರೆ ಏನರ್ಥ? ಅದನ್ನು ಕಡತದಿಂದ ತೆಗೆದು ಹಾಕಬೇಕು. ಮಾನ್ಯ ಅಧ್ಯಕ್ಷರೆ, it is very wrong. How can you allow such things to happen in the House? ಏನಿದರ ಅರ್ಥ?

(ಗೊಂದಲ)

ಶ್ರೀ ಆರ್. ಧ್ರುವನಾರಾಯಣ :- ನೀವು ಆ ಮಾತುಗಳನ್ನು ಕಡತದಿಂದ ತೆಗೆಸಿ ಹಾಕಿ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಈ ರೀತಿಯಾಗಿ ವೆಂಕಟೇಶ್‌ರವರ ಉಪದೇಶ ಕೇಳುವುದಕ್ಕೆ ನಾವು ಈ ಸದನಕ್ಕೆ ಬಂದಿಲ್ಲ. ಪದೇ ಪದೇ ಅವರು ಹಿರಿಯ ಸದಸ್ಯರು ಮಾತನಾಡುವಾಗ ಅಡ್ಡ ಹಾಕುತ್ತಿದ್ದರೆ ಅವರಿಗೆ ನೀವು ಕಡಿವಾಣ ಹಾಕಿ. ಅವರಿಗೆ ಮೂಗುದಾರ ಹಾಕಿ.

ಶ್ರೀ ಆರ್. ಧ್ರುವನಾರಾಯಣ :- ಅವರು ಮಾತನಾಡಿರುವುದು ಸರಿಯಲ್ಲ ಅದನ್ನು ಕಡತದಿಂದ ತೆಗೆಸಿ ಹಾಕಬೇಕು.

ಶ್ರೀ ಎಂ.ಪಿ. ವೆಂಕಟೇಶ್ :- ಅವರು ಏನು ಹೇಳಿದ್ದಾರೆ ಅದನ್ನು ಕಡತದಿಂದ ತೆಗೆಸಿ ಹಾಕಿಬಿಡಿ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಇದು ಬಹಳ ಅತಿಯಾಯಿತು. ಇದು ಸರ್ಕಾರದ ತಂತ್ರವೇ? Opposition gag ಮಾಡುವುದಕ್ಕೆ ಸರ್ಕಾರದ ತಂತ್ರ ಇದು. Opposition leaders, ಹಿರಿಯ ಸದಸ್ಯರು ಮಾತನಾಡುವಾಗ ಇವರು ಅಡ್ಡಪಡಿಸುವುದು ಇದು ಸರ್ಕಾರದ ತಂತ್ರವೇ? ಈ ತಂತ್ರಗಾರಿಕೆಗೆ ನಾವು ಹೆದರುವವರಲ್ಲ.

ಛೇರ್ಮನ್ :- ಎಲ್ಲರೂ ಕುಳಿತುಕೊಳ್ಳಿ, ದಯಮಾಡಿ ವೆಂಕಟೇಶ್ ಕುಳಿತುಕೊಳ್ಳಿ, ನಾವು ಗಮನಿಸುತ್ತೇವೆ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಮಾನ್ಯ ಸಿಂಧ್ಯಾರವರು ನಮ್ಮ ಪಕ್ಷದಲ್ಲಿ ಇದ್ದಾರೆ ಅವರು ನಮ್ಮ ಗೌರವಾನ್ವಿತ ಹಿರಿಯ ಸದಸ್ಯರು. ನಾವು ನಾವು ಕಿತ್ತಾಡಿಕೊಳ್ಳುತ್ತೇವೆ. ಕಾಂಗ್ರೆಸ್‌ನವರಿಗೆ ಏನು ಬಂದು ಬಿಟ್ಟಿದೆ?

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ :- ಬೀದಿಯಲ್ಲಿ ಕಿತ್ತಾಡಿ, ಇದು ಸದನ. ಜನರು ವೋಟ್ ಹಾಕಿ ಜನರ ಸೇವೆ ಮಾಡುವುದಕ್ಕೆ ಇಲ್ಲಿ ಕಳುಹಿಸಿದ್ದಾರೆ. ಈ ಮಾತುಗಳನ್ನು ಕೇಳಿಕೊಂಡು ಕುಳಿತುಕೊಳ್ಳುವುದಕ್ಕೆ ನಾವು ಇಲ್ಲಿಗೆ ಬಂದಿಲ್ಲ. ನಿಮ್ಮದು ಏನಾದರೂ ಇದ್ದರೆ ನೀವು ಮನೆಮನೆಯಲ್ಲಿ ಹೋಗಿ ಜಗಳವಾಡಿರಿ.

ಛೇರ್ಮನ್ :- ಒಂದು ನಿಮಿಷ ಇಲ್ಲಿ ಯಾವುದೇ ಶಬ್ದಗಳು, ಪರಸ್ಪರ ದೋಷಾರೋಪಣೆ ಅಥವಾ ಅನ್ ಪಾರ್ಲಿಮೆಂಟರಿ ಪದ ಇದ್ದರೆ....

ಶ್ರೀ ವಾಟಾಳ್ ನಾಗರಾಜ್ :- ವೆಂಕಟೇಶ್‌ರವರ ಬಗ್ಗೆ ನಮಗೆ ಬಹಳ ಗೌರವ ಇದೆ. ಆದರೆ ಅವರು ಆವೇಶದಲ್ಲಿ ಆಡಿರುವ ಮಾತುಗಳನ್ನು ಏನು ಇವೆ, ಬಹಳ ಕೆಟ್ಟ ಕೆಟ್ಟದಾಗಿ ಮಾತನಾಡಿದಿರಿ, ಅವೆಲ್ಲಾ ಮಾತನಾಡಬಾರದು. ಯಾರೇ ಆಗಲಿ ಮಾತನಾಡಬಾರದು. ಅದು ಸದನಕ್ಕೆ ಗೌರವ ಅಲ್ಲ.

ಶ್ರೀ ಆರ್. ಧ್ರುವನಾರಾಯಣ :- ಆ ಪದಗಳನ್ನು ತೆಗೆಸಿ ಹಾಕಿ.

ಶ್ರೀ ಎಂ.ಪಿ. ವೆಂಕಟೇಶ್ :- ನನ್ನ ಬಗ್ಗೆ ಅವರು ಮಾತನಾಡಬಾರದು, ನನ್ನ ಬಗ್ಗೆ ಆ ಪಕ್ಷ ಈ ಪಕ್ಷ ಎಂದು ಏಕೆ ಹೇಳಬೇಕು? ಪ್ರತಿಯೊಬ್ಬರು ಯಾರ‍್ಯಾರು ಇದ್ದಾರೆ ಅವರೆಲ್ಲರನ್ನು ಯಾವ್ಯಾವ ಪಕ್ಷವೆಂದು ಕೇಳಲಿ. ಆಯಿತು ನಿಮ್ಮದು ಒಂದು ಪಕ್ಷ. ಅಲ್ಲಿಂದ ಇಲ್ಲಿಗೆ ಬಂದವರು ಇದ್ದಾರೆ, ಇಲ್ಲಿಂದ ಅಲ್ಲಿಗೆ ಹೋದವರು ಇದ್ದಾರೆ. ಎಲ್ಲಾ ಪಕ್ಷಾಂತರಿಗಳೇ. ಎಲ್ಲರೂ ಆಯಾಯ ಪಕ್ಷಗಳಿಗೆ ಮೋಸ ಮಾಡಿಯೇ ಬಂದಿರುವುದು. ಯಾರು ಬಂದಿಲ್ಲ ಹೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ :- ವೆಂಕಟೇಶ್‌ರವರೇ ಆವೇಶದಲ್ಲಿ ಆಡಿದಿರಿ ಅದನ್ನು ವಾಪಸ್ ತೆಗೆದುಕೊಂಡು ಬಿಡಿ, ದಯಮಾಡಿ ಅದನ್ನೇ ದೊಡ್ಡದು ಮಾಡುವುದು ಬೇಡ. ಮಾನ್ಯ ಛೇರ್ಮನ್‌ರವರೆ ಅದನ್ನು ತೆಗೆಸಿಬಿಡಿ.

ಶ್ರೀ ವಾಟಾಳ್ ನಾಗರಾಜ್ :- ದಯವಿಟ್ಟು ಯಾರು ಮಾತನಾಡಬಾರದು ಅದು ಒಳ್ಳೆಯದಲ್ಲ.

ಶ್ರೀ ಎಂ.ಪಿ. ಪ್ರಕಾಶ್ :- ಅವರು ಪಕ್ಷಕ್ಕೆ ಮೋಸಮಾಡಿ ದ್ರೋಹ ಮಾಡಿ ಬಂದಿದ್ದಾರೆ ಅದು ನನಗೆ ಗೊತ್ತಿದೆ ಎಂದು ಹೇಳುತ್ತಿದ್ದಾರೆ ಅದು ಕೂಡ....

ಶ್ರೀ ಪಿ.ಜಿ.ಆರ್. ಸಿಂಧ್ಯಾ :- Impatient ಆಗಬಾರದು. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಂ.ಪಿ. ಪ್ರಕಾಶ್ :- ನಾನೆಲ್ಲಿ Impatient ಆಗಿದ್ದೇನೆ? ಆಗಿನಿಂದಲೂ ಸುಮ್ಮನೆ ಕುಳಿತಿದ್ದೇನೆ. ನಾನು ನಿಮ್ಮ ಪರವಾಗಿ ಹೇಳಿದೆ. ಏಕೋ ನನ್ನ ಬಗ್ಗೆ ಅವರು ಈ ರೀತಿ ಮಾತನಾಡುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಸಾರ್ ತಾವು ದಯವಿಟ್ಟು ಕುಳಿತುಕೊಳ್ಳೀ. ನನ್ನ ಪರವಾಗಿ ಮಾನ್ಯ ಪ್ರಕಾಶ್ ವರು ಎದ್ದು ನಿಂತಿರುವುದಕ್ಕೆ ನಾನು ತುಂಬಾ ಚಿರಋಣಿಯಾಗಿದ್ದೇನೆ. ತಾವು ದಯವಿಟ್ಟು ರೆಕಾರ್ಡ್ಸ್‌ನಿಂದ ಯಾವುದೂ ತೆಗೆದು ಹಾಕಬೇಡಿ. ಏಕೆಂದರೆ, ನಾನೇ ಅದನ್ನು ರಿಪೀಟ್ ಮಾಡುತ್ತಿದ್ದೇನೆ. ಅನ್ನ ತಿಂದ ಮನೆಗೆ ಕನ್ನ ಹಾಕುವಂಥದ್ದು ಸಿಂಧ್ಯಾನ ಕೆಲಸ ಎಂದು ಹೇಳಿದ್ದಾರೆ. ನಾನು ಯಾರಿಗೆ ಹೇಳಿದ್ದೇನೆಂದು ಪ್ರಪಂಚಕ್ಕೆ, ದೇಶಕ್ಕೆ ಗೊತ್ತಾಗಲಿ. ತೆಗೆಸಿ ನೋಡಿ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಅವರು ಆ ರೀತಿ ಹೇಳಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಇನ್ನೇನು ಹೇಳಿದರು.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಉಂಡ ಮನೆಗೆ ಕನ್ನ ಹಾಕಿದ್ದಾರೆಂದು ಅವರು ಹೇಳಿದರು. ಇದು ಸುಳ್ಳು ಎನ್ನುವುದಾದರೆ, ಇಲ್ಲಿ ಏನು ಗೋಲಿ ಆಟ ಆಡುವುದಕ್ಕೆ ಬಂದಿದ್ದೀರಾ? ಈಗ ಮಾತನಾಡಿದ್ದಾರೆ ಅವರೇನು ಹೀಗೆ ಹೇಳುತ್ತಾರೆ.

ಶ್ರೀ ಆರ್. ಧ್ರುವನಾರಾಯಣ :- ಆ ಪದಗಳನ್ನು ತೆಗೆಸಿ ಹಾಕಿ.

ಛೇರ್ಮನ್ :- ಸಿಂಧ್ಯಾರವರೆ, ಕಡತವನ್ನು ತರಿಸಿ ಅದನ್ನು ಪರಿಶೀಲಿಸುತ್ತೇವೆ. ಆ subject ಇಲ್ಲಿಗೆ ಬಿಟ್ಟುಬಿಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ದಯಮಾಡಿ ತಾವು ಕೇಳಬೇಕು. ಈಗ ಅನ್ನ ತಿಂದ ಮನೆಗೆ ಕನ್ನ ಯಾರು ಹಾಕಿದ್ದಾರೆಂದು ಗೊತ್ತಾಗಲಿ. ವೆಂಕಟೇಶ್‌ರವರ ತಂದೆ ಪೀರಣ್ಣನವರು ನಮ್ಮ ನಾಯಕರು, ಪೀರಣ್ಣನವರ ರೂಮಿನಲ್ಲಿ ನಾನು ಮತ್ತು ಜೀವರಾಜ ಆಳ್ವ, ಡಾ॥ ನಾಗಪ್ಪ ಆಳ್ವರವರಿಂದ ರಾಜಕೀಯವನ್ನು ಕಲಿತಿರತಕ್ಕಂಥವರು. ನಾನು ನನ್ನ ಮನೆಯಲ್ಲಿ ಪೀರಣ್ಣ, ಗುಂಡೂರಾವ್, ಧರ್ಮಸಿಂಗ್, ಇವರುಗಳ Photo ವನ್ನು ಹಾಕಿಕೊಂಡಿದ್ದೇನೆ, ಬಹುಶಃ ಅದು ವೆಂಕಟೇಶ್‌ಗೆ ಗೊತ್ತಿರಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ, ನಾನು ಮನೆ ಕಟ್ಟಬೇಕಾದರೆ ನಾನು ಸೈಟ್ ಕೊಳ್ಳಬೇಕಾದರೆ ಧರ್ಮಸಿಂಗ್‌ರವರು, ಗುಂಡೂರಾವ್‌ರವರು, ಪೀರಣ್ಣನವರು ಕಾರಣ ಎಂದು ನಾನೂ ಯಾವತ್ತೂ ನೆನಪಿಸಿಕೊಳ್ಳುತ್ತೇನೆ. ಆದ್ದರಿಂದ ಅನ್ನ ತಿನ್ನುವ ಮನೆಗೆ ಕನ್ನ ಹಾಕತಕ್ಕಂಥ ಪ್ರವೃತ್ತಿ ನನಗಿಲ್ಲ. ಜೆಡಿ(ಎಸ್) ನವರು ಬಿಜೆಪಿಯವರ ಜೊತೆಗೆ ಹೋಗದೇ ಇದ್ದಿದ್ದರೆ ನಾನು ನಿಮ್ಮ ಜೊತೆಯಲ್ಲಿ ಇರುತ್ತಿದ್ದೆ. ನಿಮ್ಮ ನಾಯಕನಾಗಿಯೇ ನಾನು ಇರುತ್ತಿದ್ದೆ. ನೀವೇ ನನ್ನನ್ನು ನಾಯಕನೆಂದು ಕರೆಯುತ್ತಿದ್ದೀರಿ. ನೀವು ಬಿಜೆಪಿಯ ಜೊತೆಯಲ್ಲಿ ಹೋಗಿದ್ದರಿಂದ ನಾನು ದೂರ ಇದ್ದೇನೆ ಅಷ್ಟೇ. ಬರಗಾಲದ ಬಗ್ಗೆ ಮಾತನಾಡಬೇಕೆಂದು ನಾನು ಎದ್ದು ನಿಂತುಕೊಂಡರೆ, ನಾನು ಈ ಸದನದಲ್ಲಿ ಮಾತನಾಡಿಲ್ಲ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂಥ ಬರಗಾಲದ ಬಗ್ಗೆ ಎರಡು ಮಾತನ್ನು ಅಧಿಕಾರಿಗಳಿಗೆ ಹೇಳಬೇಕಾಗಿದೆ. ಎಲ್ಲಾ ಸಮಯದಲ್ಲಿ ಅವರು ಬಂದಿಲ್ಲವೆಂದರೆ ಹೇಗೆ? ಅವರು ಏಕೆ ಬರುವುದಿಲ್ಲ ಮತ್ತೆ ನಮ್ಮ ಮಾತನ್ನು ಅಧಿಕಾರಿಗಳು ಏಕೆ ಕೇಳುವುದಿಲ್ಲ? ಎಲ್ಲಾ ಕೇಳುತ್ತಾರೆ, ಆದರೆ, ಕೇಳುವಂತೆ ಮಾಡಿಸಿಕೊಳ್ಳುತಕ್ಕಂಥಾದ್ದು ನಮ್ಮ ಕೈಯಲ್ಲಿರುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿರತಕ್ಕಂಥಾದ್ದು ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಮತ್ತು ಮಾನ್ಯ ರಮೇಶ್ ಕುಮಾರ್‌ರವರಿಗೆ ಗೊತ್ತಿದೆ. ಅಧಿಕಾರಿಗಳು ನಮ್ಮ ಮಾತನ್ನು ಕೇಳುತ್ತಿಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿರತಕ್ಕಂಥಾದ್ದು ಕೂಡ ಒಂದು ಸ್ಟ್ರಾಟಿಜಿ. ಇದರ ಬಗ್ಗೆ ಆ ನಂತರ ಹೇಳುತ್ತೇನೆ. ಏಕೆಂದರೆ ಮಾನ್ಯ ವೆಂಕಟೇಶ್‌ರವರಿಗೆ ಬೇಜಾರಾಗುತ್ತದೆ. ನಿಮ್ಮ ಮನಸ್ಸನ್ನು ನೋಯಿಸಿದ್ದರೆ ನಾನು ಕ್ಷಮೆಯಾಚಿಸುತ್ತೇನೆ. ದಯವಿಟ್ಟು ಕ್ಷಮಿಸಿಬಿಡಿ. ಆದರೆ, ನೀವು ಪಕ್ಷಾಂತರ ಮಾಡಿರತಕ್ಕಂಥದ್ದು ನಿಜ, ಅದು ನಿಮಗೂ ಕೂಡ ಗೊತ್ತಿದೆ.

ಇದು ಒಂದು ಕಡೆ ಇರಲಿ. ಬರಗಾಲದ ಬಗ್ಗೆ ನಾನು ಎರಡು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ಕೇಂದ್ರ ಸರ್ಕಾರ ಬಹಳಷ್ಟು

ಹಣ ಕೊಟ್ಟಿದೆ ಎಂದು ರಘುವಂಶ ಪ್ರಸಾದ್‌ರವರು ಹಾಗೂ ಯೂನಿಯನ್ ಅಗ್ರಿಕಲ್ಚರ್ ಮಿನಿಸ್ಟರ್‌ರವರೂ ಕೂಡ ಹೇಳಿದ್ದಾರೆ. ಯೂನಿಯನ್ ಅಗ್ರಿಕಲ್ಚರ್ ಮಿನಿಸ್ಟರ್ ನಿನ್ನೆ ದಿವಸ ಬೆಂಗಳೂರಿನಲ್ಲಿದ್ದರು, ಇವತ್ತು ಬೆಳಿಗ್ಗೆ ನಾನು ಅವರನ್ನು ಭೇಟಿ ಮಾಡಿದ್ದೇನೆ. ದುಡ್ಡಿಗೆ ಏನೂ ತೊಂದರೆ ಇಲ್ಲ, ಎಷ್ಟು ಬೇಕಾದರೂ ಆಹಾರ ಮತ್ತು ದುಡ್ಡು ಕೊಡೋಣವೆಂದು ಹೇಳಿದರು. ಮತ್ತೆ ಪ್ರಧಾನ ಮಂತ್ರಿಗಳೂ ಕೂಡ ಅದೇ ಮಾತನ್ನು ಸಹ ಹೇಳಿದ್ದಾರೆ. ಹಾಗೆಯೇ, ಲೋಕಸಭಾ ಸದಸ್ಯರೂ ಕೂಡ ಅದೇ ಮಾತನ್ನು ಹೇಳುತ್ತಾರೆ. ಆದರೆ ದುಡ್ಡು ಏನಾಗುತ್ತಿದೆ ಎಂಬುದು ನಮಗೆ ಅರ್ಥವಾಗುತ್ತಿಲ್ಲ. ಅಯಾಯ ಕ್ಷೇತ್ರದ ಎಂಎಲ್‌ಎಗಳನ್ನು ಬರಗಾಲದ ಪರಿಹಾರದ ಕೆಲಸಕ್ಕೆಂದು ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಈ ಕೆಲಸವನ್ನು ಮಾಡುತ್ತಿರುವವರು ಮೂರೇ ಜನ. ಅವರ್‍ಯಾರಂದರೆ, ಗುತ್ತಿಗೆದಾರರು ಮತ್ತು ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಮತ್ತೆ ಎಂಎಲ್‌ಎ ಗಳು ಅದಕ್ಕೆ ಸಹಿ ಮಾಡುತ್ತೇವಷ್ಟೇ. ನಮ್ಮ ಕಾರ್ಯಕರ್ತರು ಅವರನ್ನು ಭೇಟಿಮಾಡಿರುತ್ತಾರೆ, ಅನಂತರ ಇಂಥ ಕೆಲಸವಿದೆ ಎಂದು ಅವರು ತೆಗೆದುಕೊಂಡು ನಮ್ಮ ಹತ್ತಿರ ಬರುತ್ತಾರೆ, ಅದಕ್ಕೆ ನಾವು ಸಹಿ ಮಾಡುತ್ತೇವಷ್ಟೇ.

ಇದಕ್ಕೆ ಸಂಬಂಧಪಟ್ಟಂತೆ ನಾನು ಸರ್ಕಾರಕ್ಕೆ ಏನು ಸಲಹೆ ಕೊಡುವುದಕ್ಕೆ ಬಯಸುತ್ತೇನೆಂದರೆ, ಕ್ಯಾಬಿನೆಟ್ ಕಮಿಟಿಯಲ್ಲಿ ನೀವು ಮಾಡತಕ್ಕಂಥ ಮೊದಲ ಕೆಲಸ ಏನೆಂದರೆ, ಕೆಪಿಟಿಸಿಎಲ್‌ನವರಿಗೆ ಸ್ವಲ್ಪ ದುಡ್ಡು ಕೊಡಿಸಿ. ಇವತ್ತಿನ ದಿವಸ ಕರೆಂಟ್ ಇಲ್ಲದೇ ಇರುವುದರಿಂದ ಕುಡಿಯುವ ನೀರಿಗೆ ತೊಂದರೆಯಾಗಿದೆ. ಎಲ್ಲೆಲ್ಲಿ ಬೋರ್‌ವೆಲ್‌ಗಳಲ್ಲಿ ನೀರಿದೆ ಅಲ್ಲಿ ಕರೆಂಟ್ ಇಲ್ಲದೆ ಇರುವುದರಿಂದ ಕುಡಿಯುವ ನೀರಿಗೆ ತೊಂದರೆಯಾಗಿದೆ. ಮತ್ತೆ ಕರೆಂಟ್ ಇಲ್ಲದೆ ಇರುವುದರಿಂದ ಇಡೀ ರಾಜ್ಯ ಕತ್ತಲೆಯಿಂದ ಕೂಡಿದೆ. ಮಾನ್ಯ ಹೆಚ್.ಡಿ. ರೇವಣ್ಣನವರು most efficient Minister in this Government ಎಂದು ಇನ್‌ಫೋಸಿಸ್‌ನ ಶ್ರೀಮಾನ್ ನಾರಾಯಣ ಮೂರ್ತಿಯವರು ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಇದನ್ನು ನಾನು ಕೊಟ್ಟಿಲ್ಲ. ಮತ್ತೆ ಅಧಿಕಾರಕ್ಕೆ ಹತ್ತಿರ ಇರತಕ್ಕಂಥವರು ಹಾಗೂ ಮಾನ್ಯ ಮುಖ್ಯಮಂತ್ರಿಯವರ ಸಹೋದರರಾಗಿದ್ದರೂ ಸಹ ಕೆಪಿಟಿಸಿಎಲ್ ಇವತ್ತಿನ ದಿವಸ ಸತ್ತು ಹೋಗಿದೆಯೇ ಎಂದು ನನಗಾದರು ಅನಿಸುತ್ತಿದೆ. I don't know what happen to the KPTCL. ಈ ಸಂಸ್ಥೆ ಇವತ್ತಿನ ದಿವಸ ಸತ್ತು ಹೋಗಿದೆ. ಇದಕ್ಕೆ ಹೇಳುವವರು, ಕೇಳುವವರು ಇಲ್ಲ. ಆದ್ದರಿಂದ, ಕರೆಂಟ್ ಎಲ್ಲಿಗೆ ಹೋಗುತ್ತದೆಂಬುದನ್ನು ಗೊತ್ತಾಗುತ್ತಿಲ್ಲ.

ಬೇರೆ ರಾಜ್ಯಗಳಿಂದ ಕರೆಂಟ್ ತರಿಸಿಕೊಳ್ಳುತ್ತೇವೆ ಎನ್ನತಕ್ಕಂಥದ್ದನ್ನು ನಾವು ಪೇಪರ್‌ನಲ್ಲಿ ಓದಿಕೊಳ್ಳಬೇಕೇ ಹೊರತು, ನಮ್ಮ ಪಕ್ಷದ ಬಗ್ಗೆ ಮತ್ತು ರೈತರ ಬಗ್ಗೆ ಅಭಿಮಾನ ಇರತಕ್ಕಂಥವರು ಹಾಗೂ ಬಿಜೆಪಿ ಬಗ್ಗೆ ಬಗ್ಗೆ ಅಭಿಮಾನ ಇರತಕ್ಕಂಥ ಕಾರ್ಯಕರ್ತರು ನಮಗೆ ಶಾಪ ಹಾಕುತ್ತಿದ್ದಾರೆ. ಸರ್ಕಾರ ಏನು ಮಾಡುತ್ತಿದೆ? ಕರೆಂಟ್ ಅನ್ನು ದಿವಸಕ್ಕೆ 2-3 ಗಂಟೆಗಳ ಕಾಲ ಕೊಡುತ್ತಿಲ್ಲ. ಮಾನ್ಯ ಭೈರೇಗೌಡರು ಮತ್ತು ನಾವು ವಿರೋಧಪಕ್ಷದಲ್ಲಿದ್ದಂಥ ಸಂದರ್ಭದಲ್ಲಿ ಕರೆಂಟ್ ಕೊಡುತ್ತಿಲ್ಲವೆಂದು ಆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರಿಗೆ ಕಣ್ಣೀರನ್ನು ಹಾಕಿಸಿದ್ದೇವೆ. ಆಗ ಬೇರೆ ರಾಜ್ಯಗಳಿಂದ ತೆಗೆದುಕೊಂಡು ಬಂದು ಬಿಟ್ಟರು. ಅದೇ ರೀತಿಯಾಗಿ ನೀವೂ ಕೂಡ ಬೇರೆ ರಾಜ್ಯಗಳಿಂದ ಬಂದು ಕೊಡಿ. ಬೇರೆ ರಾಜ್ಯಗಳಿಂದ ಕರೆಂಟ್ ಅನ್ನು ತರಿಸಿಕೊಳ್ಳಿ ಎಂದು ನಾನು ಬಹಳ ಪ್ರಮುಖವಾಗಿ ವಿನಂತಿಮಾಡಿಕೊಳ್ಳುತ್ತೇನೆ. ಕೆಪಿಟಿಸಿಎಲ್‌ನಲ್ಲಿ ದುಡ್ಡು ಇಲ್ಲದೇ ಹೋದರೆ, ಅದಕ್ಕೆ ಎಷ್ಟು ದುಡ್ಡು ಬೇಕಾಗಿದೆಯೋ ಅಷ್ಟನ್ನು ಬರಗಾಲದ ಪರಿಹಾರದ ಫಂಡ್ ನಿಂದ ತೆಗೆದು ಕೆಪಿಟಿಸಿಎಲ್‌ನವರಿಗೆ ಕೊಡಿ. ನೀವು ಎಫಿಶಿಯೆಂಟ್ ಮಿನಿಸ್ಟರ್ ಇದ್ದೀರೆಂದು ಹೇಳುತ್ತಾರೆ ಮತ್ತೆ ನಿಮ್ಮ ಮಾತನ್ನು ಅಧಿಕಾರಿಗಳು ಕೇಳುತ್ತಾರೆಂದು ಹೇಳುತ್ತೀರಿ. ಆದರೆ, ಇದನ್ನು ತಾವು ಏಕೆ ಮಾಡುತ್ತಿಲ್ಲ? ಈ ಕೆಲಸ ಮೊದಲು ಆಗಬೇಕಾಗಿದೆ.

ಎರಡನೆಯದಾಗಿ ವಿಚಾರ ಏನೆಂದರೆ, ಮಾನ್ಯ ಹಣಕಾಸಿನ ಸಚಿವರಿಗೆ ಒಂದು ಸಲಹೆ ಕೊಡಬೇಕೆಂದು ಇದ್ದೆ. ಅದೇನೆಂದರೆ, ಈಗ ಬರಗಾಲ ಬಂದಿದೆ, ನಾನು ಮಾನ್ಯ ಚೆಲುವರಾಯಸ್ವಾಮಿಯವರ ಹತ್ತಿರ ಖಾಸಗಿಯಾಗಿ ಮಾತನಾಡುವಾಗ ಒಂದು ವಿಷಯವನ್ನು ಅವರಿಗೆ ಹೇಳಿದೆ. ಅದೇನೆಂದರೆ, ನಿಮ್ಮ ಸರ್ಕಾರದಲ್ಲಿ ಅಷ್ಟೊಂದು ದುಡ್ಡು ಇದೆ, ಮತ್ತೆ ಈಗಾಗಲೇ ಡೀಸಲ್ ಬೆಲೆ ಕೂಡ ಕಡಿಮೆಯಾಗಿರುವುದಕ್ಕೆ ಕೆಎಸ್‌ಆರ್‌ಟಿಸಿ ಬಸ್ ಟಿಕೆಟ್ ದರವನ್ನು ಕಡಿಮೆ ಮಾಡುವುದಕ್ಕೆ ನಿಮಗೆ ತೊಂದರೆ ಏನು, ದಯವಿಟ್ಟು ದರವನ್ನು ಕಡಿಮೆ ಮಾಡಿ ಎಂದು ಅವರಿಗೆ ಹೇಳಿದೆ. ಆದರೆ, ಅವರು ಕಡಿಮೆ ಮಾಡಲಿಲ್ಲ, ಆದರೆ, ಈಗ ರೈತರಿಗೆ ಕೊಡತಕ್ಕಂಥ ಡೀಸಲ್ ಮೇಲೆ ಇರತಕ್ಕಂಥ ತೆರಿಗೆಯನ್ನು ಬರಗಾಲ ಸಂದರ್ಭದಲ್ಲಿ ಕಡಿಮೆ ಮಾಡುವುದಕ್ಕೆ ತೊಂದರೆ ಏನು? ಇವತ್ತಿನ ದಿವಸ ಎಲ್ಲಾ ಕಡೆ ರೈತರು ಡೀಸಲ್ ಜನರೇಟರ್‌ಗಳನ್ನು ಇಟ್ಟುಕೊಂಡಿದ್ದಾರೆ. ಆದ್ದರಿಂದ, ಡೀಸಲ್ ಅನ್ನು ಉಪಯೋಗ ಮಾಡತಕ್ಕಂಥ ರೈತರಿಗೆ ದಯವಿಟ್ಟು ಡೀಸಲ್ ಮೇಲೆ ಹಾಕಿರತಕ್ಕಂಥ ತೆರಿಗೆಯನ್ನು ನಾಲ್ಕು ತಿಂಗಳವರೆಗೆ ಅಂದರೆ, ಮಳೆ ಬಾರದಿದ್ದರೆ

ಜೂನ್ ತಿಂಗಳವರೆಗೆ ಡೀಸಲ್ ಮೇಲಿನ ತೆರಿಗೆಯನ್ನು ರದ್ದು ಮಾಡಬೇಕೆಂದು ನನ್ನ ಸಲಹೆ. ಇವೆಲ್ಲಾ temporary measures.

ಮೂರನೆಯದಾಗಿ ನಾನು ಸರ್ಕಾರಕ್ಕೆ ಸಲಹೆ ಕೊಡುವುದೇನೆಂದರೆ, ಬೋರ್‌ವೆಲ್‌ಗಳನ್ನು ಜಾಸ್ತಿ ತೋಡಿಸುವುದರಿಂದ ಉಪಯೋಗವಾಗುವುದಿಲ್ಲವೆಂದು ನನಗೂ ಸಹ ಗೊತ್ತಿರುವ ವಿಚಾರ. 175 ತಾಲ್ಲೂಕುಗಳಲ್ಲಿರುವ ತಹಸೀಲ್ದಾರ್‌ಗಳಿಗೆ ಏನೂ ಕೆಲಸ ಇಲ್ಲ. ಏಕೆಂದರೆ, ತುರ್ತಾಗಿ ಏನಾದರೂ, ವಾಟರ್‌ಟ್ಯಾಂಕ್ ಬೇಕಾದರೆ, ಅವರ ಹತ್ತಿರ ಒಂದು ವಾಟರ್ ಟ್ಯಾಂಕ್ ಇವತ್ತಿನ ದಿವಸ ಇಲ್ಲ. ಅರಣ್ಯ ಇಲಾಖೆ ಹತ್ತಿರ ಅಥವಾ ಪಿಹೆಚ್‌ಸಿನಲ್ಲಿರುವ ವಾಟರ್ ಟ್ಯಾಂಕ್ ಉಪಯೋಗಿಸಿಕೊಂಡು ಅವರು ನೀರನ್ನು ಸಾಗಿಸಬೇಕಾಗುತ್ತದೆ. ಮತ್ತೆ ಬಾಡಿಗೆ ವಾಟರ್ ಟ್ಯಾಂಕ್ ತೆಗೆದುಕೊಳ್ಳಬೇಕೆಂದರೆ, ಅವರಿಗೆ ಬಾಡಿಗೆಗೆ ವಾಟರ್ ಟ್ಯಾಂಕ್‌ಗಳು ಸಿಗುತ್ತಿಲ್ಲ. ಆದ್ದರಿಂದ, ನಾನು ಏನು ಸಲಹೆ ಮಾಡುತ್ತೇನೆಂದರೆ, ಭಾರತ ಸರ್ಕಾರ ದುಡ್ಡು ಕೊಡುವುದಾದರೆ, ನೀವು ಪ್ರತಿಯೊಂದು ತಾಲ್ಲೂಕಿಗೆ 5–10 ವಾಟರ್ ಟ್ಯಾಂಕ್‌ಗಳನ್ನು ಏಕೆ ಖರೀದಿ ಮಾಡಬಾರದು? ಅನೇಕ ಸಂದರ್ಭದಲ್ಲಿ ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರಗೆ ತೊಂದರೆಯಾಗಿರತಕ್ಕಂಥದು ತಮಗೂ ಕೂಡ ಗೊತ್ತಿದೆ. ಈ ಸಾರಿ ಯುಗಾದಿ ಹಬ್ಬವನ್ನು ಸಹ ಸರಿಯಾಗಿ ಮಾಡುವುದಕ್ಕೆ ಆಗಿಲ್ಲ. ಆದ್ದರಿಂದ, ವಿದ್ಯುತ್ ಕೊಡುವುದಕ್ಕೋಸ್ಕರ ಬರಗಾಲ ಪರಿಹಾರ ನಿಧಿಯಿಂದ ಕೆಪಿಟಿಸಿಎಲ್‌ಗೆ ಹಣವನ್ನು ಬಿಡುಗಡೆ ಮಾಡಬೇಕು. ಆಗ ಮಾತ್ರ ಅವರು ಬೇರೆ ರಾಜ್ಯಗಳಿಂದ ವಿದ್ಯುಚ್ಛಕ್ತಿಯನ್ನು ಖರೀದಿ ಮಾಡಿ ಕೊಡುವುದಕ್ಕೆ ಮಾತ್ರ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಮಾನ್ಯ ರೇವಣ್ಣನವರೆ, ನಿಮಗೂ ಕೂಡ ಜನ ಶಾಪ ಹಾಕುತ್ತಿದ್ದಾರೆ. ದಯಮಾಡಿ ಇದನ್ನು ತಾವು ಗಮನದಲ್ಲಿಟ್ಟುಕೊಳ್ಳಿ. ಕರೆಂಟ್‌ನ ತೊಂದರೆ ಬಹಳ ಆಗುತ್ತಿದೆ.

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಇಲಾಖೆ ಸಚಿವರು) :– ಮಾನ್ಯ ಛೇರ್ಮನ್‌ರವರೆ, ಮಾನ್ಯ ಸಿಂಧ್ಯಾ ಸಾಹೇಬರು ಹಿರಿಯ ಸದಸ್ಯರು. ಏಕೆಂದರೆ, ನಾವು ಒಂದು ಸಾರಿ ಸೋತಿದ್ದು, ಎರಡು ಸಾರಿ ಗೆದ್ದಿದ್ದೇನೆ. ಆದ್ದರಿಂದ, ಅವರಷ್ಟು ಅನುಭವ ನನಗೆ ಆಗಿಲ್ಲ. ನಾನು ಮಾನ್ಯ ಸಿಂಧ್ಯಾ ಸಾಹೇಬರಲ್ಲಿ ಕೇಳುವುದೇನೆಂದರೆ, ಹಿಂದಿನ ಸರ್ಕಾರಗಳು ಈ ರಾಜ್ಯದಲ್ಲಿ ವಿದ್ಯುತ್ ಜನರೇಟ್‌ಗೆ ಯಾವ ರೀತಿಯಾದ ಕ್ರಮಗಳನ್ನು ತೆಗೆದುಕೊಂಡಿವೆ ಎಂಬುದನ್ನು ಮಾನ್ಯ ಸಿಂಧ್ಯಾ ಸಾಹೇಬರು ಗಮನಿಸಬೇಕು. ಹಿಂದಿನ ಸರ್ಕಾರದ 5 ವರ್ಷಗಳ ಅವಧಿಯಲ್ಲಿ ಅವರು ವಿರೋಧಪಕ್ಷದಲ್ಲಿದ್ದವರು. ಅವರು ಆಡಳಿತ ಪಕ್ಷದಲ್ಲಿರಲಿಲ್ಲ. ಜನರೇಷನ್

ಸೈಡ್‌ನಲ್ಲಿ ಮತ್ತು ಸಿಸ್ಟಮ್ ಇಂಪ್ರೂವ್‌ಮೆಂಟ್ ಬಗ್ಗೆ ಯಾವ ರೀತಿಯಾದ ಕ್ರಮಗಳನ್ನು ತೆಗೆದುಕೊಂಡಿದ್ದಾರೆಂಬುದನ್ನು ನೋಡಬೇಕಾಗುತ್ತದೆ. ಏಕೆಂದರೆ, ನಾವು ಬರುವುದಕ್ಕಿಂತ ಮುಂಚೆ ಒಂದೇ ಒಂದು ಜನರೇಶನ್ ಅವರು ತೆಗೆದುಕೊಳ್ಳಲಿಲ್ಲ.

ಉದಾಹರಣೆಗೆ ಹೇಳುವುದಾದರೆ, ಸೋನಿಯಾ ಗಾಂಧಿ ಪ್ಯಾಕೇಜ್ ಎಂದು ಬಳ್ಳಾರಿ ಜಿಲ್ಲೆಗೆ ದುಡ್ಡು ತೆಗೆದುಕೊಂಡರು. ಆದರೆ, ಅಲ್ಲಿ ಈ ಕೆಲಸ ಪ್ರಾರಂಭವಾಗಲಿಲ್ಲ. ಆದರೆ, ನಾವು ಬಂದ ಮೇಲೆ ಪ್ರಾಮಾಣಿಕವಾಗಿ ಅಲ್ಲಿನ ಕೆಲಸಕ್ಕೆ ಟೆಂಡರ್ ಕರೆದು ಮೂರು ತಿಂಗಳಕ್ಕಿಂತ ಮುಂಚಿತವಾಗಿಯೇ ಅಂದರೆ, ಮೇ ತಿಂಗಳಲ್ಲಿ ಅದನ್ನು ಕಮಿಷನ್ ಮಾಡುತ್ತಿದ್ದೇವೆ. ಅದೇ ರೀತಿಯಾಗಿ ಸುಮಾರು 2 ಸಾವಿರ ಮೆ.ವ್ಯಾ ವಿದ್ಯುತ್ ಉತ್ಪಾದನೆಗೆ ಕ್ರಮ ಕೈಗೊಂಡಿದ್ದು, ಈಗ ಬಳ್ಳಾರಿಯ 2 ನೇ ಹಂತದಲ್ಲಿ ಮತ್ತೆ 500 ಮೆ.ವ್ಯಾ ವಿದ್ಯುತ್ ಉತ್ಪಾದನೆ ತೆಗೆದುಕೊಳ್ಳುತ್ತಿದ್ದೇವೆ. ಮತ್ತೆ ರಾಯಚೂರಿನಲ್ಲಿ 8 ನೇ ಘಟಕವನ್ನು ತೆಗೆದುಕೊಳ್ಳುತ್ತಿದ್ದೇವೆ ಹಾಗೆಯೇ ವರಾಹಿಯಲ್ಲಿ 280 ಮೆ.ವ್ಯಾ ತೆಗೆದುಕೊಳ್ಳುತ್ತಿದ್ದೇವೆ. ಮತ್ತೆ ಗುಂಡ್ಯಾದಲ್ಲಿ ತೆಗೆದುಕೊಳ್ಳಬೇಕೆಂದು ಇದ್ದೇವೆ. ಈಗ ನಾಗಾರ್ಜುನ್ ತೆಗೆದುಕೊಂಡಿದ್ದೇವೆ. ಮಾನು ವೀರಪ್ಪ ಮೊಯಿಲಿಯವರು ಇದ್ದಂಥ ಸಂದರ್ಭದಲ್ಲಿಯೇ ನಾಗಾರ್ಜುನಕ್ಕೆ ವಿರೋಧ ಬಂತು.

ಕೇಂದ್ರ ಸರ್ಕಾರದವರು ಉತ್ತರ ಕರ್ನಾಟಕದಲ್ಲಿ 4000 ಮೆ.ವ್ಯಾ ಉತ್ಪಾದನೆ ಮಾಡುವ ಘಟಕವನ್ನು ಮಾಡುತ್ತೇವೆಂದರೆ ಅಲ್ಲಿನ ಶಾಸಕರು ಮಿತ್ರರು ಗಲಾಟೆ ಮಾಡಿದರು. ಆದ್ದರಿಂದ, ಆ ಪಕ್ಷ ಅಥವಾ ಈ ಪಕ್ಷವೆಂದು ತಿಳಿದುಕೊಳ್ಳದೇ ಒಂದು ದಿವಸ ಇಂಧನ ಇಲಾಖೆ ಬಗ್ಗೆ ಬೆಳಕು ಚೆಲ್ಲಬೇಕೆಂದು ನಾನು ಹಲವಾರು ಸಾರಿ ಮನವಿ ಮಾಡಿದ್ದೇನೆ. ನಾವು ಬಂದ ಮೇಲೆ 30 % ನಷ್ಟು ಸರ್ವಿಸ್‌ಗಳನ್ನು ಜಾಸ್ತಿ ಕೊಟ್ಟಿದ್ದೇವೆ. ಕಳೆದ ಎರಡು ವರ್ಷಗಳಲ್ಲಿ ಅಂದರೆ, ಕಳೆದ 30 ತಿಂಗಳ ಅವಧಿಯಲ್ಲಿ ಏನು ವಿದ್ಯುತ್‌ನ್ನು ಉಪಯೋಗಿಸುತ್ತಿದ್ದರೂ ಅದಕ್ಕಿಂತ 30 % ಹೆಚ್ಚಿಗೆ ವಿದ್ಯುತ್ ಅನ್ನು ಇವತ್ತಿನ ದಿವಸ ನಾವು ಸರಬರಾಜು ಮಾಡುತ್ತಿದ್ದೇವೆ. ಇವತ್ತು ಮಹಾರಾಷ್ಟ್ರದಲ್ಲಿ ಮತ್ತು ಆಂಧ್ರಪ್ರದೇಶದಲ್ಲಿ ಏನಾಗಿದೆ ಎಂಬುದನ್ನು ನೋಡಬೇಕಾಗಿದೆ.

ಮಾನ್ಯ ಸಿಂಧ್ಯಾ ಸಾಹೇಬರ ಕ್ಷೇತ್ರದಲ್ಲಿ ನಮ್ಮ ಇಲಾಖೆಯ 100 ಕೋಟಿ ರೂಪಾಯಿಗಳ ಕೆಲಸ ನಡೆಯುತ್ತಿದೆ. ಇಂಥ ಕಡೆ ಹೊಸದಾಗಿ ಸ್ಟೇಷನ್ ಆಗಬೇಕೆಂದು ಯಾರೂ ಶಾಸಕರು ನನ್ನ ಹತ್ತಿರ ಬಂದು ಕೇಳುತ್ತಿಲ್ಲ. ಅಂಥವುಗಳು ಏನಾದರೂ

ಬೇಕೆಂದರೆ ಮಾಡಿಸಿ ಕೊಡುತ್ತೇನೆ. ದುಡ್ಡಿಗೇನೂ ತೊಂದರೆಯಿಲ್ಲ. ಮಾನ್ಯ ಯಡಿಯೂರಪ್ಪ ಸಾಹೇಬರ ಕಡೆಯಿಂದ ನನಗೆ ದುಡ್ಡೇನು ಬೇಕಾಗಿಲ್ಲ. ನಾವು ಹೇಗೋ ದುಡ್ಡು ತಂದು ಮಾಡಿಸುತ್ತೇವೆ.

ಶ್ರೀ ಆರ್. ಧ್ರುವನಾರಾಯಣ :- ತಾವು ಕುಡಿಯುವ ನೀರಿನ ಬಗ್ಗೆ ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಧ್ರುವನಾರಾಯಣರವರೆ, ನೀವು ಕೂಡ ನನ್ನ ಜೊತೆಯಲ್ಲಿಯೇ ಬಂದಿದ್ದೀರಿ. ಮೊದಲು ನಾನು ಹೇಳತಕ್ಕಂಥ ವಿಷಯಗಳನ್ನು ತಿಳಿದುಕೊಳ್ಳಿ, ಕುಡಿಯುವ ನೀರನ್ನು ಕೊಡುವುದಕ್ಕೆ ನಾನೇನು ಬ್ರಹ್ಮನೇ? ಕಳೆದ 5 ವರ್ಷಗಳಿಂದ ಮಾಡಬೇಡಿ ಎಂದು ನಾನೇನು ನಿಮ್ಮನ್ನು ಹಿಡಿದಿದ್ದೇನಾ? ನಂಬರ್ ಒನ್ ಮುಖ್ಯ ಮಂತ್ರಿಗಳನ್ನು ಇಟ್ಟುಕೊಂಡಿದ್ದೀರಿ, ನಾನೇನು ಬೇಡ ಎಂದು ಅವರನ್ನು ಹಿಡಿದು ಕೊಂಡಿದ್ದೀನಾ? ನಾನು ಸಂದರ್ಭದಲ್ಲಿ ಪಾಂಡವಪುರ ತಾಲ್ಲೂಕಿನಲ್ಲಿ ಬಗ್ಗೆ ಹೇಳುವುದಾದರೆ, 50 ವರ್ಷಗಳಿಂದ ಅಲ್ಲಿ ಒಂದು ಸ್ಟೇಷನ್ ಇತ್ತು. ಇವತ್ತಿನ ದಿವಸ 6 ಸ್ಟೇಷನ್‌ಗಳನ್ನು ಮಾಡಿದ್ದೇನೆ. ಈ ರಾಜ್ಯದಲ್ಲಿ 50 ವರ್ಷಗಳಿಂದ ಸುಮಾರು 500 ಸ್ಟೇಷನ್‌ಗಳು ಇದ್ದವು. ನಾನು ಬಂದ ಮೇಲೆ ಹೊಸದಾಗಿ ಸುಮಾರು 477 ಸ್ಟೇಷನ್‌ಗಳನ್ನು ತೆಗೆದುಕೊಂಡಿದ್ದೇವೆ. ಒಂದೊಂದು ಸ್ಟೇಷನ್ ಮಾಡುವುದಕ್ಕೆ ಭೂ ಸ್ವಾಧೀನ ಮಾಡಿಕೊಳ್ಳುವುದಕ್ಕೆ ಸುಮಾರು ಐದಾರು ವರ್ಷಗಳಾಗಿವೆ. ಮಾನ್ಯ ರಮೇಶ್ ಕುಮಾರ್ ಸಾಹೇಬರು ಹಿರಿಯರು, ನಿಮ್ಮಷ್ಟು ನನಗೆ ಅನುಭವ ಇಲ್ಲ. ಮೊದಲು ವಿದ್ಯುತ್ ಜನರೇಷನ್ ಮಾಡಿಲ್ಲ, ಈಗ ನಾವೇನು ಮಾಡುವುದಕ್ಕೆ ಆಗುತ್ತದೆ?

ಶ್ರೀ ಕೆ.ಆರ್. ರಮೇಶ್ ಕುಮಾರ್ :- ನಿಮ್ಮ ಪವರ್ ಸ್ಟೇಷನ್‌ಗಳೆಲ್ಲಾ ರೈಲ್ವೆ ಸ್ಟೇಷನ್‌ಗಳಾಗಿವೆ. ಈಗ ಕರೆಂಟ್ ಇಲ್ಲ, ಅದರ ಬಗ್ಗೆ ಹೇಳಿ?

ಶ್ರೀ ಹೆಚ್.ಡಿ. ರೇವಣ್ಣ :- 10 ವರ್ಷಗಳಿಂದ ಕರೆಂಟ್‌ಅನ್ನು ಜನರೇಟ್ ಮಾಡಿಕೊಂಡು ಬಂದಿದ್ದರೆ ಈ ರೀತಿಯಾದ ಸ್ಥಿತಿ ಏತಕ್ಕೆ ಬರುತ್ತಿತ್ತು?

ಶ್ರೀ ಕೆ. ಶ್ರೀನಿವಾಸ ಗೌಡ :- ಪಾಂಡವಪುರದಲ್ಲಿ ನೀರಾವರಿ ಕ್ಷೇತ್ರವಿದೆ, ಅಲ್ಲಿ 6 ಸಬ್ ಸ್ಟೇಷನ್ ಮಾಡುವ ಅಗತ್ಯವೇನಿತ್ತು, ಅದು ನನಗೆ ಗೊತ್ತಿಲ್ಲ. ಕೋಲಾರ ಜಿಲ್ಲೆಯಲ್ಲಿ ಎಷ್ಟು ಮಾಡಿದ್ದೀರಿ ಅದನ್ನು ಹೇಳಿ. ನೀರಾವರಿ ಇರತಕ್ಕಂಥ ಪಾಂಡವಪುರ ಕ್ಷೇತ್ರದಲ್ಲಿ 6 ಸಬ್ ಸ್ಟೇಷನ್ ಮಾಡುವ ಅಗತ್ಯವಿರಲಿಲ್ಲವೆನ್ನುವುದು ನನ್ನ ಭಾವನೆ. ಆದರೆ ಕೋಲಾರ ಜಿಲ್ಲೆಯಲ್ಲಿ ಎಷ್ಟು ಮಾಡಿದ್ದೀರಿ ಅಷ್ಟು ಹೇಳಿ ಸ್ವಾಮಿ.

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :- ಎರಡು ನಿಮಿಷ ಮಾನ್ಯ ಶ್ರೀನಿವಾಸಗೌಡರಿಗೆ ಹೇಳುತ್ತೇನೆ. ಹಿಂದೆ ನಿಮ್ಮ ಜಿಲ್ಲೆಯವರೆ ಕೆಪಿಟಿಸಿಎಲ್ ಅಧ್ಯಕ್ಷರಾಗಿದ್ದರು ಮತ್ತು ಮಂತ್ರಿಗಳಾಗಿದ್ದರು. ಅವರ ಕಾಲದಲ್ಲಿ ಬೇಕಾದಷ್ಟು ಸ್ಟೇಷನ್‌ಗಳನ್ನು ಮಾಡಿದ್ದಾರೆ ಬೇಕಾದರೆ ನೀವು ಮಾಹಿತಿಯನ್ನು ತರಿಸಿ ಏಕೆಂದರೆ, ನಾನು ಬಂದ ಮೇಲೆ ಎಷ್ಟು ಮಾಡಿದ್ದೇನೆ ಎನ್ನುವ ಮಾಹಿತಿಯನ್ನು ಬೇಕಾದರೆ ತರಿಸಿ ಕೊಡುತ್ತೇನೆ. ಅದನ್ನು ಬೇಕಾದರೆ ಚರ್ಚೆಗೆ ಇಡಿ. ಯಾವ್ಯಾವ ಜಿಲ್ಲೆಯಲ್ಲಿ ಎಷ್ಟು ಆಗಿದೆ? ನಾನು ಈಗ ಏನು ಮಾಡಿದ್ದೇನೆ. ಜಿಲ್ಲಾಧಿಕಾರಿಗಳಿಗೆ ಮತ್ತು ಶಾಸಕರುಗಳಿಗೆ ಜಮೀನು ಖರೀದಿ ಮಾಡಲು ಅಧಿಕಾರವನ್ನು ಕೊಟ್ಟಿದ್ದೇನೆ...

ಶ್ರೀ ಕೆ.ಆರ್. ರಮೇಶ್‌ಕುಮಾರ್ :- ತಾವು ಆಗ ಇರಲಿಲ್ಲ, ಮಾನ್ಯ ಪ್ರಕಾಶ್‌ರವರು ಇದ್ದರು. ನಮ್ಮಲ್ಲಿ ಜನ ಕಷ್ಟಪಟ್ಟಷ್ಟು ಬೇರೆ ಎಲ್ಲೂ ಪಡುವುದಿಲ್ಲ. ಕೊತ್ತಂಬರಿ ಬೆಳೆದು ಅದನ್ನು ತಿರುಪತಿ ಮತ್ತು ಕಂಚಿ ಹಾಗೂ ಮದ್ರಾಸ್‌ಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡಿ ಜೀವನವನ್ನು ಮಾಡುತ್ತಾರೆ. ಕೊತ್ತಂಬರಿಗೆ ನೀರು ಎಷ್ಟು ಬೇಕು, 4 ಫೇಸ್ ಕರೆಂಟ್ ಒಂದು ಗಂಟೆ ಬರುವುದಿಲ್ಲ. ನಾನು ಆ ದಿವಸ ಕಣ್ಣೀರು ಹಾಕಿಕೊಂಡು ಕೇಳಿಕೊಂಡೆ. ಇದು ಮಾನ್ಯ ಪ್ರಕಾಶ್‌ರವರಿಗೆ ಗೊತ್ತಿದೆ. ಯಾವ ಸ್ಥಿತಿಗೆ ತಂದಿದ್ದೀರೆಂದರೆ, ಕೃಷಿ ಕಾರ್ಮಿಕರು ಹೊರಟು ಹೋದರು. ಏನಾಗಿದೆ ಎಂದು ಗೊತ್ತಿಲ್ಲ. ಇಡೀ ದಿವಸಕ್ಕೆ ನೆಟ್ಟಗೆ ಒಂದು ಗಂಟೆ ಕರೆಂಟ್ ಇತ್ತು ಎಂದು ಹೇಳುವಂತೆ ಇಲ್ಲ. ಕುಡಿಯುವುದಕ್ಕೆ ನೀರು ಸಿಗುವುದಿಲ್ಲ. ನಾವು ಏನು ಮಾಡಬೇಕು ಹೇಳಿ. ನಿಮ್ಮ ಸ್ಟೇಷನ್‌ಗಳನ್ನು ಕಟ್ಟಿಕೊಂಡು, ನಿಮ್ಮ ಸ್ಟೇಷನ್ ಹತ್ತಿರ ನಾವು ಹೋಗಿ ನೇಣು ಹಾಕಿಕೊಳ್ಳಬೇಕು ಅಷ್ಟೆ.

ಶ್ರೀ ಅಲಂಗೂರು ಶ್ರೀನಿವಾಸ :- ಇವರು ಹೇಳಿಕೊಳ್ಳುವಷ್ಟು ಬರ ಇಲ್ಲ. ಏಕೆಂದರೆ ನಾನು ಒಬ್ಬ ರೈತನಾಗಿದ್ದೇನೆ. ಸುಮಾರು ಎರಡು ಗಂಟೆ ಕಡಿಮೆಯಾಗುತ್ತಿದೆ ಹೊರತು, ಬೇರೇನೂ ಇಲ್ಲ. ಆಗಾಗ ಸ್ಲಿಪ್ ಆಗುತ್ತದೆ.

ಶ್ರೀ ಕೆ. ಶ್ರೀನಿವಾಸಗೌಡ :- ಕೋಲಾರ ಜಿಲ್ಲೆಯಲ್ಲಿ ಬಹಳಷ್ಟು ಸವಸ್ಯೆಯಾಗಿದೆ.

ಶ್ರೀ ಆರ್. ಧ್ರುವನಾರಾಯಣ :- ಅವರು ಮಂತ್ರಿಗಳು ಆಗಿರುವುದರಿಂದ ಅವರ ತಾಲ್ಲೂಕಿನಲ್ಲಿ ಸಮಸ್ಯೆ ಇಲ್ಲದಿರಬಹುದು. ದಯವಿಟ್ಟು ಬೇರೆ ತಾಲ್ಲೂಕಿಗೆ ಬನ್ನಿ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಮಾನ್ಯ ಛೇರ್ಮನ್‌ರೆ ಮಾನ್ಯ ರೇವಣ್ಣನವರು ಹೇಳಿದ್ದಾರೆ.

ಶ್ರೀ ಆರ್. ಧ್ರುವನಾರಾಯಣ :- ರೈತರ ಕಷ್ಟ ಏನು ಎನ್ನುವುದು ಗೊತ್ತಾಗುತ್ತದೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಮೊದಲೇ ಪವರ್ ಕಟ್ ಮಾಡುತ್ತಾರೆ, ಅಲ್ಲದೆ 4 hours load shedding ಮಾಡುತ್ತಿದ್ದಾರೆ. ಅದು ಮಾನ್ಯ ಸಚಿವರ ಗಮನಕ್ಕೆ ಬಂದಿಲ್ಲ.

ಶ್ರೀ ಅಲಂಗೂರು ಶ್ರೀನಿವಾಸ :- ಚೆನ್ನಾಗಿ ಗೊತ್ತಿದೆ.

ಶ್ರೀ ಕೃಷ್ಣ ಭೈರೇಗೌಡ :- ಏನು ಚೆನ್ನಾಗಿ ಗೊತ್ತಿದೆ. 50 ಲಕ್ಷ ರೂ.ಗಳ ಬಾಕಿ ಇದೆ. ಮಾತನಾಡಲು ಅವಕಾಶವನ್ನು ಕೊಡಬೇಕು. ಜಿಲ್ಲಾ ಉಸ್ತುವಾರಿ ಸಚಿವರಿಗೆ ಬರ ಇಲ್ಲದಿರಬಹುದು, ನಮಗಂತೂ ಬರ ಇದೆ.

(ಗೊಂದಲ)

ಶ್ರೀ ಅಲಂಗೂರು ಶ್ರೀನಿವಾಸ :- ಕೋಲಾರದಲ್ಲಿ ಎಷ್ಟು ಬರ ಇದೆ ಎಂದು ಹೇಳುತ್ತಿದ್ದಾರೆ. ಶ್ರೀನಿವಾಸಪುರ ಹಿಡಿದು ಹೇಳಿಕೊಳ್ಳುವಷ್ಟು ಕುಡಿಯುವ ನೀರಿಗೆ ಬರ ಇಲ್ಲ. ಆ ಒಂದು ಪರಿಸ್ಥಿತಿಯಲ್ಲಿ ಅವರ ಆಡಳಿತದಲ್ಲಿ ಒಂದೊಂದು ಊರಲ್ಲಿ 4–5 ಬೋರ್‌ವೆಲ್‌ಗಳು ಇದೆ. ಎಲ್ಲೆಲ್ಲಿ ಬೋರ್‌ವೆಲ್ ಹಾಕಿದ್ದಾರೆನ್ನುವ ಬಗ್ಗೆ ಆ ದೃಷ್ಟಿಯಲ್ಲಿ ನನ್ನ ಹತ್ತಿರ ಮಾಹಿತಿ ಇದೆ, ನಾನು ರಿವ್ಯೂ ಮಾಡಿದ್ದೇನೆ. ಕೋಲಾರದಲ್ಲಿ ಇಷ್ಟು ದಿವಸ ಆಡಳಿತ ಮಾಡಿ......

ಶ್ರೀ ಕೆ. ಶ್ರೀನಿವಾಸಗೌಡ :- ಜೋಡಿದಾರರ ಕಡೆಯಿಂದ ಬಂದವರು ಜೋಡಿದಾರರು ಇವರು. ಇವರಿಗೆ ಬರದ ಪರಿಸ್ಥಿತಿ ಏನು ಎನ್ನುವುದು ಒಂದು ಚೂರು ಗೊತ್ತಿಲ್ಲ. ಇವರು ಗೇಣಿದಾರರಾಗಿದ್ದು ಇವರಿಗೆ ರೈತರಿಗೆ ಇರುವ ಬರದ ಬಗ್ಗೆ ಏನು ಗೊತ್ತು?

ಶ್ರೀ ಡಿ.ಟಿ. ಜಯಕುಮಾರ್ :- ಇವರ ಇಬ್ಬರದ್ದು understanding ಜಗಳ.

ಶ್ರೀ ಕೆ. ಶ್ರೀನಿವಾಸಗೌಡ :- ಕೋಲಾರ ಪಟ್ಟಣದಲ್ಲಿ ಕರೆಂಟ್ ಇಲ್ಲದೆ ಕುಡಿಯುವುದಕ್ಕೆ ನೀರು ಕೊಡುವುದಕ್ಕಾಗುತ್ತಿಲ್ಲ. 120 ಹಳ್ಳಿಗಳಲ್ಲಿ ನೀರು ಇಲ್ಲ. ನೀವು ನೋಡಿದರೆ ಸಾಮಾನ್ಯವಾಗಿದೆ ಎಂದು ಹೇಳುತ್ತೀರಿ.

ಶ್ರೀ ಅಮರೇಗೌಡ ಬಯ್ಯಾಪುರ :- ಅಳಿಯ-ಮಾವ ನೀವು ಇಲ್ಲಿ ಏಕೆ ಜಗಳವಾಡುತ್ತೀರಿ? ಮನೆಗೆ ಹೋಗಿ ಜಗಳವಾಡಿ.

(ಗೊಂದಲ)

ಶ್ರೀ ಅಲಂಗೂರು ಶ್ರೀನಿವಾಸ :- ಮಾನ್ಯ ಶ್ರೀನಿವಾಸಗೌಡರು ಎಲ್ಲಿ ವಾಸ್ತವ್ಯ ಮಾಡುತ್ತಾರೆಂಬುದನ್ನು ಮತ್ತು ನಾನು ಎಲ್ಲಿ ವಾಸ್ತವ್ಯ ಮಾಡುತ್ತಿದ್ದೇನೆಂದು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಾನು ಹಳ್ಳಿಯಲ್ಲಿರತಕ್ಕಂಥ ಮನೆಯಲ್ಲಿ ವಾಸ್ತವ್ಯ ಮಾಡುತ್ತಿದ್ದೇನೆ. ಇವರ್‍ಯಾರಾದರೂ ಹಳ್ಳಿಯಲ್ಲಿ ಇದ್ದಾರೆಯೇ ಕೇಳಿ. ಅದರಲ್ಲಿ ಮಾನ್ಯ ರಮೇಶ್ ಕುಮಾರ್‌ರೊಬ್ಬರು ಇರಬಹುದು ಅಷ್ಟೆ. ಆದರೆ ಮಾನ್ಯ ಶ್ರೀನಿವಾಸಗೌಡರು ಮತ್ತು ಕೃಷ್ಣ ಭೈರೇಗೌಡರು ಬೆಂಗಳೂರಿನಲ್ಲಿ ಇದ್ದಾರೆ.

ಶ್ರೀ ಕೃಷ್ಣ ಭೈರೇಗೌಡ :- ಸ್ವಾಮಿ ತಾವು ವಿಷಯ ತಿಳಿದುಕೊಂಡು ಮಾತನಾಡಿ.

ಶ್ರೀ ಅಲಂಗೂರು ಶ್ರೀನಿವಾಸ :- ವಿಷಯ ತಿಳಿದುಕೊಂಡು ನಾನು ಮಾತನಾಡುತ್ತಿದ್ದೇನೆ.

ಶ್ರೀ ಕೃಷ್ಣ ಭೈರೇಗೌಡ :- ನನ್ನ ಬಗ್ಗೆ ನೀವು ಯಾರು ಮಾತನಾಡುವುದಕ್ಕೆ? ಮಾನ್ಯ ಅಧ್ಯಕ್ಷರೆ ಅವರು ತಮ್ಮ ಮಾತನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಹೇಳಿ.

ಶ್ರೀ ಅಲಂಗೂರು ಶ್ರೀನಿವಾಸ :- ನಾನೇನು ವಾಪಸ್ ತೆಗೆದುಕೊಳ್ಳಬೇಕಾಗಿಲ್ಲ.

ಶ್ರೀ ಕೃಷ್ಣ ಭೈರೇಗೌಡ :- ವಾಪಸ್ ತೆಗೆದುಕೊಳ್ಳಬೇಕು. ನನ್ನ ಬಗ್ಗೆ ಮಾತನಾಡುವುದಕ್ಕೆ ಇವರ್‍ಯಾರು?

ಶ್ರೀ ಅಲಂಗೂರು ಶ್ರೀನಿವಾಸ :- ನೀವು ಮಾತ್ರ ಏನು ಬೇಕಾದರೂ ಹೇಳಬಹುದೇ? ಅವೆಲ್ಲವನ್ನು ನಾನು ಕೇಳುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಕೃಷ್ಣ ಭೈರೇಗೌಡ :- ನನ್ನ ಬಗ್ಗೆ ಮಾತನಾಡುವುದಕ್ಕೆ ಇವರ್‍ಯಾರು? ವಾಪಸ್ ತೆಗೆದುಕೊಳ್ಳುವುದಕ್ಕೆ ಹೇಳಿ.

(ಗೊಂದಲ)

ಶ್ರೀ ಅಲಂಗೂರು ಶ್ರೀನಿವಾಸ :- ನಾನು ಹೇಳುವುದನ್ನು ಹೇಳುತ್ತಿದ್ದೇನೆ. ವಾಪಸ್ ತೆಗೆದುಕೊಳ್ಳುವ ಪ್ರಶ್ನೆಯೇ ಬೇಕಾಗಿಲ್ಲ.

ಶ್ರೀ ಕೃಷ್ಣ ಭೈರೇಗೌಡ :- ವಾಸವಾಗಿಲ್ಲವೆಂದು ಹೇಳುವುದಕ್ಕೆ ಇವರ್‍ಯಾರು? ನಾನು ವಾಸ ಎಲ್ಲಿ ಮಾಡುತ್ತೇನೆಂಬುದು ಇವರಿಗೇನು ಗೊತ್ತಿದೆ?

ಶ್ರೀ ಅಲಂಗೂರು ಶ್ರೀನಿವಾಸ :_ ನೀವು 5 ವರ್ಷದಿಂದ ಮಾಡುತ್ತಿದ್ದೀರಿ. ಆಗ ನಿಮ್ಮದೇ ಆಡಳಿತವಿತ್ತು.

ಶ್ರೀ ಕೃಷ್ಣ ಭೈರೇಗೌಡ :- ನಾನು ಹಳ್ಳಿಯಲ್ಲಿ ವಾಸ ಮಾಡುತ್ತಿಲ್ಲವೆನ್ನುವ ಬಗ್ಗೆ ಅವರು ಏನು ಹೇಳಿದ್ದಾರೆ, ಆ ಮಾತನ್ನು ವಾಪಸ್ಸು ತೆಗೆದುಕೊಳ್ಳಿ.

ಶ್ರೀ ಅಲಂಗೂರು ಶ್ರೀನಿವಸ :- ರಾಜಕೀಯ ಲಾಭ ಬೇಕಾಗಿಲ್ಲ. ಭಾಷಣ ಹೊಡೆಯುವುದು ಬೇಕಾಗಿಲ್ಲ. ವಾಸ್ತವಾಂಶ ಏನಿದೆ, ಬರ ಏನಾಗಿದೆ ಎನ್ನುವುದನ್ನು ಹೇಳುತ್ತಿದ್ದೇನೆ.

ಛೇರ್ಮನ್ :- ದಯವಿಟ್ಟು ಕುಳಿತುಕೊಳ್ಳಿ, ಮಾನ್ಯ ವಿದ್ಯುತ್ ಸಚಿವರಲ್ಲಿ ಒಂದು ಮನವಿ. ತಾವು ಬರುವುದು ಸ್ವಲ್ಪ ತಡವಾಯಿತು. ತಾವು ಹೊರಗಡೆ ಇದ್ದಿರಿ. Crisis ಸಂದರ್ಭದಲ್ಲಿ ತಾವು ಸಮಸ್ಯೆಯನ್ನು ಹೇಗೆ ಪರಿಹರಿಸುತ್ತೀರಿ ಎನ್ನುವಂಥಾದ್ದು ಅವರ ಪ್ರಶ್ನೆ, ಪ್ರಮುಖವಾಗಿ ಕುಡಿಯುವ ನೀರಿಗೆ ವಿದ್ಯುತ್ ವೈಫಲ್ಯವಾಗಿರುವುದು one of the reasons. ತಾವು ಅದನ್ನು ಹೇಗೆ ಸುಧಾರಿಸುತ್ತೀರಿ? ಹೊರಗಡೆಯಿಂದ ಪರ್ಚೇಸ್ ಮಾಡುತ್ತೀರಾ ಎನ್ನುವುದರ ಬಗ್ಗೆ ಉತ್ತರವನ್ನು ಹೇಳಬೇಕು.

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಛೇರ್ಮನ್‌ರೆ, ನೀವು ಒಂದು ಉತ್ತಮವಾದ ಸಲಹೆಯನ್ನು ಕೊಟ್ಟಿದ್ದೀರಿ. ಇದನ್ನು ಯಾವ ರೀತಿಯಾಗಿ ಬಗೆಹರಿಸುತ್ತೀರಿ ಎಂದು, ನಾನು ಸತತವಾಗಿ ಕೇಂದ್ರ ಸರ್ಕಾರದ ಮಂತ್ರಿಯವರನ್ನು ಮೂರು ಸಲ ಭೇಟಿ ಮಾಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳನ್ನು ಒಂದು ಸಲ ಕರೆದುಕೊಂಡು ಹೋಗಿ ಭೇಟಿ ಮಾಡಿದ್ದೇನೆ. ಆ ಸಂದರ್ಭದಲ್ಲಿ ಅವರು ಹೇಳುತ್ತಾರೆ. ಮಹಾರಾಷ್ಟ್ರದಲ್ಲಿ ಎರಡು – ಮೂರು ಗಂಟೆ ಕರೆಂಟ್ ಕೊಡುವುದಕ್ಕಾಗುವುದಿಲ್ಲ. ಕರ್ನಾಟಕ ಸಾವಿರ ಪಾಲು better ಎಂದು ಮಾನ್ಯ ಕೇಂದ್ರದ ಇಂಧನ ಸಚಿವರು ಹೇಳಿದ್ದಾರೆ. ಮತ್ತೆ ಈ ಸಾರಿ ನಾನು ಅಲ್ಲ, ಮಾನ್ಯ ಶ್ರೀನಿವಾಸಗೌಡರು ಇಲ್ಲಿಯೇ ಕುಳಿತಿದ್ದಾರೆ. ಕೇಂದ್ರ ಸರ್ಕಾರದವರು ಕೆಪಿಟಿಸಿಎಲ್ ಗೆ ಚೆನ್ನಾಗಿ ಕೆಲಸ ಮಾಡುತ್ತಿದ್ದೀರೆಂದು ಈ ಸಲ first time ಮಾನ್ಯ ಪ್ರಧಾನ ಮಂತ್ರಿಗಳು ಅವಾರ್ಡ್‌ನ್ನು ಕೊಟ್ಟಿದ್ದಾರೆ. KPC ಏನು ಇದೆ, first time ಮೂರು ಅವಾರ್ಡ್‌ನ್ನು ಇಡೀ ರಾಷ್ಟ್ರದಲ್ಲಿ

ಹೋದ ವರ್ಷ ಮತ್ತು ಈ ವರ್ಷ ತೆಗೆದುಕೊಂಡಿದ್ದೇವೆ. ಇದನ್ನು ನಾನು ಹೇಳುತ್ತಿಲ್ಲ, ನಿಮ್ಮ ಪಕ್ಷದ ಕೇಂದ್ರ ಸರ್ಕಾರದ ಮಾನ್ಯ ಪ್ರಧಾನ ಮಂತ್ರಿಗಳು ಹೇಳಿದ್ದಾರೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಧನ್ಯವಾದಗಳು, ನಿಮಗೆ ಒಂದು ಹೂವಿನ ಹಾರ ಹಾಕುತ್ತೇವೆ. ತಾವು ಬರದ ಬಗ್ಗೆ ಹೇಳಿ.

ಶ್ರೀ ಆರ್. ಧ್ರುವನಾರಾಯಣ :- ನಿಮ್ಮ ಪಕ್ಷ ನಿಮ್ಮ ಸರ್ಕಾರವೆಂದು ಹೇಳಬೇಡಿ. ಕೇಂದ್ರ ಸರ್ಕಾರವೆಂದು ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ :- ನೀವು ನನಗೆ ಹೇಳಬೇಡಿ, ನನಗೆ ಎಲ್ಲಾ ಗೊತ್ತಿದೆ. ಈಗ ಪ್ರಾಮಾಣಿಕವಾಗಿ ಹೇಳಿ, ಬೇಕಾದರೆ ಚರ್ಚೆ ಮಾಡಿ ನಾನು ರೆಡ್ಡಿ ಇದ್ದೇನೆ. ಇಂಧನ ಇಲಾಖೆಯಲ್ಲಿ ಹಿಂದಿನ 50 ವರ್ಷದಲ್ಲಿ ಏನು ಮಾಡಿದ್ದೀರಿ, ನಾನು 30 ತಿಂಗಳಲ್ಲಿ ಏನು ಮಾಡಿದ್ದೇನೆ ಎನ್ನುವುದರ ಬಗ್ಗೆ ಬೇಕಾದರೆ ನಾನು ಚರ್ಚೆಗೆ ಸಿದ್ಧನಿದ್ದೇನೆ. ನಾನು ಬೇಕಾದರೆ failure ಆಗಿದ್ದರೆ 5 ನಿಮಿಷ ಸಹ ಈ ಸ್ಥಾನದಲ್ಲಿರುವುದಿಲ್ಲ.

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಮಾನ್ಯ ಸಚಿವರು ಹೇಳುತ್ತಿರುವುದನ್ನು ಒಪ್ಪಿಕೊಳ್ಳುತ್ತೇವೆ. ಆದರೆ ಈ ಎಲ್ಲಾ ಕೆಲಸವನ್ನು ಮಾಡುವುದಕ್ಕೆ ಕೇಂದ್ರ ಸರ್ಕಾರದಿಂದ ಹಣ ಬರುತ್ತಿದೆ. ಇದಕ್ಕೇನು ಯಡಿಯೂರಪ್ಪನವರು ದುಡ್ಡು ಕೊಟ್ಟರೆ?

ಛೇರ್ಮನ್ :- ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ನಾವು ಕ್ಲ್ಯಾರಿಫೈ ಮಾಡುತ್ತೇವೆ. ಮಾನ್ಯ ರೇವಣ್ಣನವರು ಹೇಳಿರುವುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಈ ಕೆಲಸವನ್ನು ಮಾಡುವುದಕ್ಕೆ ಕೇಂದ್ರ ಸರ್ಕಾರ ಹಣ ಕೊಟ್ಟಿದ್ದು. ಈ Sub station ಗಳನ್ನು ಮಾಡುವುದಕ್ಕೆ ಯಡಿಯೂರಪ್ಪನವರು ಏನು ಹಣವನ್ನು ಕೊಟ್ಟಿಲ್ಲ. ಫ್ರೀಯಾಗಿ ಇವರಿಗೆ ಲೋನ್ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಹೆಚ್.ಡಿ ರೇವಣ್ಣ :- ಕರೆಂಟ್‌ದಿಂದ ಕುಡಿಯುವ ನೀರಿಗೆ ಎಲ್ಲೆಲ್ಲಿ ತೊಂದರೆ ಇದೆ, ಅದಕ್ಕಾಗಿ ಸಂಬಂಧಪಟ್ಟ ಅಧಿಕಾರಿಗಳ ಒಂದು ಸಭೆಯನ್ನು ಇವತ್ತು ಕರೆಯುತ್ತೇನೆ. ಕುಡಿಯುವ ನೀರಿಗೆ ಮತ್ತು ವಿದ್ಯಾರ್ಥಿಗಳಿಗೆ ಪರೀಕ್ಷೆ ಇರುವುದರಿಂದ ಪ್ರಥಮ ಆದ್ಯತೆ ಕೊಟ್ಟು ನಾವು ಕರೆಂಟ್ ಕೊಡುವುದಕ್ಕೆ ಪ್ರಾಮಾಣಿಕವಾಗಿ ಈಗಾಗಲೇ ಎಲ್ಲಾ ವ್ಯವಸ್ಥಾಪಕ ನಿರ್ದೇಶಕರಿಗೆ ಕಟ್ಟುನಿಟ್ಟಿನ ಸೂಚನೆಯನ್ನು ಕೊಟ್ಟಿದ್ದೇನೆ. ಕೆಲವೊಂದು ಸಲ ಏನಾಗುತ್ತದೆಂದರೆ, Mini water Supply ಇರಬಹುದು Major Water Supply ಇರಬಹುದು, ಅದಕ್ಕಾಗಿ ಸೆಪರೇಟಾಗಿ TC ಹಾಕಿ ಎಂದು ನಾನು ಹೇಳಿರುವುದು. ಮಾನ್ಯ ಮಾಧುಸ್ವಾಮಿಯವರ ಕ್ಷೇತ್ರದಲ್ಲಿ ನಾನು ಬಂದ ಮೇಲೆ ಒಂದು ಸಾವಿರ TC ಹಾಕಿಕೊಟ್ಟಿದ್ದೇನೆ. ಕೆಲವರು ಏನು ಮಾಡುತ್ತಾರೆಂದರೆ, ಕುಡಿಯುವ ನೀರಿಗೆ ಇರುವ TC ಗೆ ಹಾಕುತ್ತಾರೆ. ಅದರಿಂದ ಹೆಚ್ಚೂ ಕಡಿಮೆ ಓಲ್ಟೇಜ್ ಆಗುವುದರಿಂದ ಸೆಪರೇಟಾಗಿ TC ಹಾಕುವುದಕ್ಕೆ ಹೇಳಿರುತ್ತೇನೆ. ಕುಡಿಯುವ ನೀರಿನ ಸಲುವಾಗಿ ಎಲ್ಲಾ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚನೆಯನ್ನು ಕೊಡುತ್ತೇವೆ. ಕೆಲವು ಸಮಯ ರಾತ್ರಿಯ ವೇಳೆ ಕರೆಂಟ್ ಕೊಡುತ್ತೇವೆ, ರಾತ್ರಿ ಟೈಮ್ ನಮ್ಮ ನೀರು ಬಿಡುವವರು ಕರೆಂಟ್ ಇದ್ದರೂ ಹಾಕುವುದಿಲ್ಲ, ಹಗಲು ವೇಳೆಯಲ್ಲಿ ಕರೆಂಟ್ ಹಾಕುವುದಕ್ಕೆ ಹೋಗುತ್ತಾರೆ. ಆಗ ನೀರು ಪೂರ್ತಿಯಾಗಿ ತುಂಬುವುದಕ್ಕೆ ಆಗುವುದಿಲ್ಲ. ಅದನ್ನು ಕಟ್ಟುನಿಟ್ಟಾಗಿ ನಾನು ಜಿಲ್ಲಾ ಪಂಚಾಯಿತಿಯ CEO ರವರ ಗಮನಕ್ಕೆ ತರುತ್ತೇನೆ. ಹಿಂದೆ ಎಲ್ಲಿ ಅವಶ್ಯಕತೆ ಇತ್ತು ಅಲ್ಲಿ ನಾವು 18 ಗಂಟೆಯವರೆಗೆ ಕರೆಂಟ್‌ನ್ನು ಕೊಟ್ಟಿದ್ದೇವೆ. ನಾನು ಕನಿಷ್ಠ 10 ಗಂಟೆ ಕರೆಂಟ್ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅದರಲ್ಲಿ ಅನುಮಾನ ಏನು ಪಡಬೇಕಾಗಿಲ್ಲ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :- ಮಾನ್ಯ ಸಚಿವರು ಗ್ರಾಮಾಂತರ ಪ್ರದೇಶಗಳಿಗೆ ನಾವು ಕರೆಂಟ್‌ನ್ನು ಕೊಡುತ್ತೇವೆಂದು ಹೇಳಿದರು. ಅಲ್ಲಿ ಏನಾಗಿದೆ ಎಂದರೆ ತಾಲ್ಲೂಕು ಅಧಿಕಾರಿಗಳಿಗೆ ಒಂದು ಆದೇಶವನ್ನು ಕೊಟ್ಟಿದ್ದಾರೆ. 40 ಯೂನಿಟ್ ಕರೆಂಟ್‌ನ್ನು ಉಪಯೋಗಿಸಬೇಕು, ಅದಕ್ಕಿಂತ ಜಾಸ್ತಿ ಕರೆಂಟ್‌ನ್ನು ಉಪಯೋಗಿಸಬಾರದು. ಚಿಕ್ಕೋಡಿ ತಾಲ್ಲೂಕಿನಲ್ಲಿ ಬೇಡಿಕೆ ಇರುವುದು 120 ಯೂನಿಟ್‌ಗಳು. ಈ 40 ಯೂನಿಟ್‌ಗಳಲ್ಲಿ ಎಲ್ಲವನ್ನೂ ಬಗೆಹರಿಸಿಕೊಳ್ಳಿ ಎಂದರೆ, ಅದು ಹೇಗಾಗುತ್ತದೆ? ಆ ತಾಲ್ಲೂಕಿನಲ್ಲಿ ಏನು ಅವಶ್ಯಕತೆ ಇದೆ, ತಾಲ್ಲೂಕು ದೊಡ್ಡದು ಇದ್ದರೆ ನೀರಾವರಿ ಇದ್ದರೆ ಆ ಹಳ್ಳಿಗಳಿಗೆ ಹೆಚ್ಚು ಯೂನಿಟ್ ಕೊಡುವಂಥಾದ್ದು ಆಗಬೇಕು. ಮಾನ್ಯ ಸಚಿವರು ಅದರ ಬಗ್ಗೆ ಹೇಳಬೇಕು. ಎಲ್ಲೆಲ್ಲಿ

ದೊಡ್ಡ ದೊಡ್ಡ ತಾಲ್ಲೂಕುಗಳಿವೆ, ಎಲ್ಲೆಲ್ಲಿ ಅವಶ್ಯಕತೆ ಇದೆ ಅಲ್ಲಿ ಕೊಡುವಂಥಾದ್ದು ಆಗಬೇಕು. ಇದರ ಬಗ್ಗೆ ಒಂದು ಕಂಡಿಷನ್ ಹಾಕಿದ್ದಾರೆ. ಆ ಕಂಡಿಷನ್ ಅನ್ನು ತಾವು ಸಡಿಲಿಸಿ ಕೊಡಬೇಕು.

ಛೇರ್ಮನ್ :- ಹಾಗಾದರೆ ತಾವು ಕೇಳಿ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಮಾನ್ಯ ಛೇರ್ಮನ್‌ರವರೆ, ಮಾನ್ಯ ಸಚಿವರು......

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ನನ್ನ ಭಾಷಣವನ್ನು ಮುಗಿಸುತ್ತೇನೆ. ಅಮೇಲೆ ಅವರು ಮಾತನಾಡುವುದಕ್ಕೆ ಅವಕಾಶ ಕೊಡಿ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಮಾನ್ಯ ಛೇರ್ಮನ್‌ರವರೆ, ಒಂದು ಕ್ಲಾರಿಫಿಕೇಷನ್ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ನಾನು ಯೀಲ್ಡ್ ಆಗಿಲ್ಲ.

ಛೇರ್ಮನ್ :- ತಾವು ಮತ್ತೆ ಕೇಳಿ ಸಾರ್. ಒಂದೇ ಒಂದು ನಿಮಿಷ ಅವರು ಕ್ಲಾರಿಫಿಕೇಷನ್‌ನ್ನು ಅವರು ಕೇಳುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ತಾವು ಅವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಾ?

ಛೇರ್ಮನ್ :- ನಾನು ಮಾನ್ಯ ಶರಣಪ್ರಕಾಶ್‌ರವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಹಾಗಾದರೆ ನಾನು ಕುಳಿತುಕೊಳ್ಳಲೇ? ಆಯಿತು.

ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ :- ಮಾನ್ಯ ಛೇರ್ಮನ್‌ರವರೆ, ನಾನು ಎಲ್ಲವನ್ನೂ ಮಾಡುತ್ತೇವೆನ್ನುವಂತಹ ಮಾತನ್ನು ಮಾನ್ಯ ಸಚಿವರು ಹೇಳಿದರು. ಆದರೆ ಮಾನ್ಯ ಸಚಿವರಿಗೆ ಗೊತ್ತಿದೆಯೋ ಏನು ಗೊತ್ತಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಇವತ್ತು ನಮ್ಮ ಭಾಗವಾದ ಗುಲ್ಬರ್ಗಾ ಜಿಲ್ಲೆಯಲ್ಲಿ ಇವತ್ತು 45 ಡಿಗ್ರಿ ಸೆಂಟಿಗ್ರೇಡ್ ಇದೆ. ಅಲ್ಲಿ ಗ್ರಾಮೀಣ ಪ್ರದೇಶದಲ್ಲಿ additional four hours load shedding ನಡೆಯುತ್ತಿದೆ. ಇವತ್ತು ಬೆಳಿಗ್ಗೆ 9 ಗಂಟೆಗೆ load shedding start ಆದರೆ ಸಾಯಂಕಾಲ 7 ಗಂಟೆಯವರೆಗೆ ಯಾವುದೇ ರೀತಿಯ ಸಿಂಗಲ್ ಫೇಸ್ ಇಲ್ಲ,

ಇವತ್ತು ಥ್ರೀ ಫೇಸ್ ಕರೆಂಟ್ ಇಲ್ಲ. ಕುಡಿಯುವ ನೀರು ಇಲ್ಲ. ಇವತ್ತು additional load shedding ಆಗುವಾಗ ಮಾನ್ಯ ಸಚಿವರು ಮಾಡುತ್ತೇವೆಂದರೆ, ತಾವು ಏನು ಮಾಡುತ್ತೀರಿ ಅದರ ಬಗ್ಗೆ ಹೇಳಬೇಕು. ನಾನು ಈ ರೀತಿಯಾಗುತ್ತಿರುವ ಬಗ್ಗೆ ಅವರ ಗಮನಕ್ಕೆ ತರುತ್ತಿದ್ದೇನೆ. ಇದು ಅವರ ಗಮನಕ್ಕೆ ಬಂದಿಲ್ಲವೆಂದು ನಾನು ಭಾವಿಸಿದ್ದೇನೆ. ಏಕೆಂದರೆ ಮಾನ್ಯ ರೇವಣ್ಣನವರು ಮನಸ್ಸು ಮಾಡಿದೆ ಮಾಡುತ್ತೇವೆಂದು ಹೇಳುತ್ತಾರೆ. ನೀವು ಅದನ್ನು ಮಾಡಿದರೆ ನಾವು ಸ್ವಾಗತ ಮಾಡುತ್ತೇವೆ.

ಛೇರ್ಮನ್ :– ಮಾನ್ಯ ಸಿಂಧ್ಯರವರು ತಾವು ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :– ಮಾನ್ಯ ಛೇರ್ಮನ್‌ರವರೆ, ನಾನು ಈ ಬರಗಾಲದ ಪರಿಸ್ಥಿತಿಯನ್ನು ಸದ್ಯದಲ್ಲಿ ನಿಭಾಯಿಸುವ ಬಗ್ಗೆ ಸರ್ಕಾರಕ್ಕೆ ಎರಡು ಮೂರು ಸಲಹೆಗಳನ್ನು ಕೊಟ್ಟಿದ್ದೇನೆ. ಬಹಳ ಮುಖ್ಯವಾಗಿ ಈ ಬರಗಾಲದ ಸ್ಥಿತಿಯಲ್ಲಿ ರೈತರು ಡಿಸೇಲ್ ಏನು ಉಪಯೋಗಿಸುತ್ತಿದ್ದಾರೆ, ಅದರ ಮೇಲೆ ಸರ್ಕಾರದವರು ಟ್ಯಾಕ್ಸ್‌ನ್ನು ಹಾಕಿದ್ದು, ಅದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ವಿನಂತಿಯನ್ನು ಮಾಡುತ್ತೇನೆ. ಮಾನ್ಯ ರೇವಣ್ಣನವರು 10 ಗಂಟೆಗಳ ಕಾಲ ವಿದ್ಯುತ್ ಬಗ್ಗೆ ಏನು ಭರವಸೆಯನ್ನು ಕೊಟ್ಟಿದ್ದಾರೆ, ಅದನ್ನು ತಾವು ಮಾಡಿದರೆ ಬಹಳ ಉಪಯೋಗವಾಗುತ್ತದೆ. ಅದನ್ನು ಮಾಡಬೇಕೆಂದು ನಾನು ತಮ್ಮಲ್ಲಿ ಒತ್ತಾಯವನ್ನು ಮಾಡುತ್ತೇನೆ. 10 ಗಂಟೆಗಳ ಕಾಲ ವಿದ್ಯುತ್‌ನ್ನು ಕೊಡುತ್ತೇವೆಂಬ ಬಗ್ಗೆ ತಾವು ಭರವಸೆಯನ್ನು ಕೊಡಬೇಕು. ಇಲ್ಲದೆ ಇದ್ದರೆ ಕುಡಿಯುವ ನೀರಿಗಾಗಿ ಬಹಳ ತೊಂದರೆಯಾಗುತ್ತದೆ.

ಈ ಎರಡು ಸಲಹೆಗಳನ್ನು ಕೊಟ್ಟು ನೀರನ್ನು ಸಾಗಾಣಿಕೆ ಮಾಡುವ ಬಗ್ಗೆ ತಹಶೀಲ್ದಾರ್‌ರವರಿಗೆ ಏನೂ ಅಧಿಕಾರವಿಲ್ಲ, ನಾನು ಮಾನ್ಯ ರೆವಿನ್ಯೂ ಮಿನಿಸ್ಟರ್‌ರವರಿಗೆ ಸಲಹೆ ಮಾಡುವುದೇನೆಂದರೆ, ನಿಮ್ಮ ಹೈಪವರ್ ಕಮಿಟಿ ಏನಿದೆ, ಆ ಕಮಿಟಿಯಲ್ಲಿ ಈ ಒಂದು ವಿಚಾರವಾಗಿ ದೀರ್ಘವಾಗಿ ಸಲಹೆಯನ್ನು ಕೊಡಬಹುದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ರಾಜ್ಯದಲ್ಲಿ ಪದೇ ಪದೇ 1967–1972 ರಿಂದಲೂ ತೆಗೆದುಕೊಂಡರೂ ಸಹಿತ ಇದೊಂದು ಸೈಕಲ್ ಹಾಗೆ 2 ವರ್ಷ 3 ವರ್ಷಕ್ಕೊಂದು ಸಾರಿ ಬರಗಾಲ ಬರುತ್ತಲೇ ಇದೆ. ಬರಗಾಲ ಬಂದಿರುವಾಗ ಇಲ್ಲಿ ಶಾಸಕರುಗಳನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ, ಅವರ ಅಪ್ರೂವಲ್ ತೆಗೆದುಕೊಳ್ಳಬೇಕಾದರೆ Assistant Executive Engineer, Tahsildar ಒಂದು ಕಮಿಟಿ ಇದೆ. ಜಿಲ್ಲಾ

ಬೋರ್ಡ್ ಮೆಂಬರ್ಸ್ ಅದಕ್ಕೆ ಸದಸ್ಯರಿದ್ದಾರೆ. ಅವೆಲ್ಲವನ್ನೂ ತೆಗೆದುಕೊಳ್ಳುತ್ತಾರೆ, ಅವೆಲ್ಲವೂ ಆಗುತ್ತಿದೆ. ಆದರೆ actual ಆಗಿ ಶಾಸಕರಿಗೂ ಸಹಿತ ನಾವು ಪ್ರತಿಯೊಂದು ವರ್ಕನಲ್ಲಿಯೂ 1-1 ಕೋಟಿ ರೂಪಾಯಿ ವರ್ಕ್‌ನ್ನು ನೀಡಿ ಅವರು ಸಹಿತ ಅಲ್ಲಿಗೆ ಹೋಗಿ ಇನ್‌ಸ್ಪೆಕ್ಷನ್ ಮಾಡಿ, ಅಲ್ಲಿ ಇಂಜಿನಿಯರ್‌ಗಳು, ಅಲ್ಲಿ ಕಂಟ್ರಾಕ್ಟರ್‌ಗಳು ಇವೆರೊಡನೆ ಚರ್ಚಿಸಿ, ಅವೆಲ್ಲವನ್ನು ಮಾಡುವುದಕ್ಕೆ ಕಷ್ಟವಿದೆ.

ಮೊದಲು ಈ ಕೆಲಸವಾಗಲಿ, ಕೂಲಿಗಾಗಿ ಕೆಲಸವನ್ನು ಮಾಡುವುದು ಒಂದು ಭಾಗವಾಗಿದೆ. ಈ ಸಮಸ್ಯೆಯನ್ನು ಶಾಶ್ವತವಾಗಿ ಬಗೆಹರಿಸುವ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳಬೇಕೆಂಬುದರ ಬಗ್ಗೆ ಸರ್ಕಾರ ಯೋಚನೆಯನ್ನು ಮಾಡಬೇಕು. ಸರ್ಕಾರವು ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ರಾಜ್ಯದಲ್ಲಿ ನೀರಿನ ಆಳ ಪದೇ ಪದೇ ಪ್ರತಿವರ್ಷವೂ ಕಡಿಮೆಯಾಗುತ್ತಿದೆ. ನಮ್ಮ ಕಾಲುವೆಗಳೆಲ್ಲವೂ ಮುಚ್ಚಿಹೋಗಿದೆ. ನಾನು ಆಯವ್ಯಯ ಬಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ ಹಣಕಾಸಿನ ಮಂತ್ರಿಗಳಿಗೆ ಒಂದು ಸಲಹೆಯನ್ನು ಕೊಟ್ಟಿದ್ದೇನೆ. ಈ ಕಾಲುವೆಗಳು ಏನು ಮುಚ್ಚಿಹೋಗಿವೆ, ಆ ಕಾಲುವೆಗಳಲ್ಲಿರುವ ಮಣ್ಣನ್ನು ತೆಗೆಸಬೇಕು. ಸಣ್ಣ ನೀರಾವರಿಗೆ ಸಂಬಂಧಪಟ್ಟಂತೆ ಸುಮಾರು ಸಾವಿರಾರು ಕೆರೆಗಳು ಇವೆ, ಆ ಕೆರೆಗಳಲ್ಲಿರುವಂತಹ ಕಾಲುವೆಗಳನ್ನು ರಿಪೇರಿ ಮಾಡಿಸಬೇಕೆಂಬ ಬಗ್ಗೆಯೂ ಸಹ ಸಲಹೆಯನ್ನು ಕೊಟ್ಟಿದ್ದೇನೆ. ಇದರ ಜೊತೆಗೆ ಬಹಳ ಪ್ರಮುಖವಾಗಿ ಜಲವನ್ನು ಹಿಡಿದು ಇಟ್ಟುಕೊಳ್ಳಬೇಕಾದರೆ, ಮರಳು ಬಹಳ ಮುಖ್ಯ. ಬೆಂಗಳೂರು ಸುತ್ತಮುತ್ತ ಸುಮಾರು 100 ಕಿ.ಮೀ ವ್ಯಾಪ್ತಿಯಲ್ಲಿ ಅದು ಕೋಲಾರ ಜಿಲ್ಲೆ ಇರಬಹುದು, ತುಮಕೂರು ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಿರಬಹುದು, ಮೈಸೂರಿನಿಂದ ಟಿ. ನರಸೀಪುರದವರೆಗೂ ಸಹಿತ ಅದರಿಂದಾಚೆಗೆ ಚಾಮರಾಜನಗರ ಜಿಲ್ಲೆಯೂ ಸಹಿತ ಈ ಮರಳನ್ನು ಎತ್ತುವಂತಹದ್ದು ಒಂದು ದೊಡ್ಡ ದಂಧೆಯಾಗಿದೆ. ಇದು ಯಾವ ಮಟ್ಟಕ್ಕೆ ಹೋಗಿದೆ ಎಂದರೆ, ನಾನು ಈ ಬಗ್ಗೆ ರೆವಿನ್ಯೂ ಕಾರ್ಯದರ್ಶಿಗಳು, ಹಾಗೂ ಡೆಪ್ಯೂಟಿ ಕಮೀಷನರ್‌ರವರ ಗಮನಕ್ಕೂ ಸಹ ನಾನು ತಂದಿದ್ದೇನೆ.

ಅದು ಯಾವ ಸ್ಥಿತಿಗೆ ಹೋಗಿದೆ ಎಂದರೆ, ಸ್ವಲ್ಪ ಮರಳು ಮಿಶ್ರಿತವಾಗಿರುವಂತಹ ಕೆಂಪು ಮಣ್ಣು ಇದ್ದರೆ, ಆ ಕೆಂಪು ಮಣ್ಣನ್ನು ಎತ್ತಿಹಾಕಿ ಅದನ್ನು ಜರಡಿ ಮಾಡಿ, ಆ ಮರಳನ್ನು ತಂದು ಸಪ್ಲೈ ಮಾಡುತ್ತಿದ್ದಾರೆ. ಅದಕ್ಕೆ filtered ಮರಳು ಎಂದು ಹೇಳುತ್ತಾರೆ. ತಾವು ಬೇಕಾದರೆ ಆ ಬಗ್ಗೆ ಇನ್‌ಸ್ಪೆಕ್ಷನ್ ಮಾಡಿಸಿ. ಈ ಫಿಲ್ಟರ್ಡ್ ಮರಳಗಳನ್ನು ಸಣ್ಣ ಕೈಗಾರಿಕೆಗಳು ಸುಮಾರು 5 ಸಾವಿರ

ಕೈಗಾರಿಕೆಗಳು ನಮ್ಮ ಒಂದು ಜಿಲ್ಲೆಯಲ್ಲಿ ಕೆಲಸವನ್ನು ಮಾಡುತ್ತಿದೆ. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಸಹಿತ ಈ ಬಗ್ಗೆ ರೆವಿನ್ಯೂ ಇಲಾಖೆಯವರು ಏನು ಮಾಡುತ್ತಿದ್ದಾರೆಂದು ಗೊತ್ತಿಲ್ಲ. Mines & Zoology Department ನವರು ಏನು ಮಾಡುತ್ತಿದ್ದಾರೆಂದು ಗೊತ್ತಿಲ್ಲ. ನಾವು ಸಭೆಗಳಲ್ಲಿ ಹೇಳಿ ಸಾಕಾಗಿದೆ. ರೈತರಿಗೆ ಆ ಮಣ್ಣನ್ನಾದರೂ ಬಿಡಿ. filter ಮಾಡಬೇಡಿ ಎಂದು ಹೇಳಿದರೆ filter ಮಾಡುವುದನ್ನು ಸಹಿತ ನಿಲ್ಲಿಸುತ್ತಿಲ್ಲ. ಈ ಸ್ಥಿತಿ ಯಾವ ಮಟ್ಟಕ್ಕೆ ಬಂದಿದೆ ಎಂದರೆ, ನಮ್ಮ ಜಿಲ್ಲೆ ಎಂದರೆ, ಸಂಪೂರ್ಣವಾಗಿ ಬರಡಾಗಿದೆ.

ಮರಳು ಎಂಬುವುದೇ ನಮಗೆ ಸಿಗುವುದಿಲ್ಲ. ಹಳ್ಳಿಗಳಲ್ಲಿರುವಂತಹ ಎಲ್ಲಾ ಮರಳನ್ನು ಈ ರೈತರು ಏನು ಮಾಡುತ್ತಿದ್ದಾರೆಂದರೆ, ಮಳೆ ಬೀಳದೇ ಇರುವುದರಿಂದಾಗಿ, ಆ ಹಳ್ಳದ ಪಕ್ಕದಲ್ಲಿರುವಂತಹ ಜಮೀನನ್ನು ಮಾರಾಟ ಮಾಡುತ್ತಿದ್ದಾರೆ. ಒಂದು ಲಕ್ಷ ರೂಪಯಿ ನನಗೆ ಬರುತ್ತದೆಂದು ಹೇಳಿ ಈಗ ತಾವು ಯಾವುದೇ ಹಳ್ಳವನ್ನು ನೋಡಿ. 1 ಕಿ.ಮೀ ಅಗಲವಿದೆ, ಉದ್ದ 1 ಕಿ.ಮೀ ಇರುವಂತಹ ಹಳ್ಳಗಳು 1 ಕಿ.ಮೀ ಅಗಲವಾಗಿದೆ. ಈ ತರಹ ಆದರೆ ಮುಂದೆ ಕರ್ನಾಟಕದ ಭವಿಷ್ಯವೇನು? ಎಂಬುದರ ಬಗ್ಗೆಯೂ ಕೂಡ ನಾವು ವಿಚಾರ ಮಾಡಬೇಕಾಗುತ್ತದೆ. ರಾಜಸ್ಥಾನದ ನಂತರ ಕರ್ನಾಟಕವಲ್ಲ, ಕರ್ನಾಟಕದ ನಂತರ ರಾಜಸ್ಥಾನ ಬರತಕ್ಕಂಥ ಪರಿಸ್ಥಿತಿ ಬರಬಹುದು. ಇದರ ಬಗ್ಗೆ ಸರ್ಕಾರದವರು ದೀರ್ಘ ಕಾಲದ ವಿಚಾರವನ್ನು ಮಾಡಬೇಕಾಗುತ್ತದೆ. ಈಗ ಮಲೆನಾಡು ಪ್ರದೇಶದಲ್ಲಿ ಮತ್ತು ಮಂಗಳೂರು ಪಕ್ಕ, ಮಂಗಳೂರು, ಉಡುಪಿ, ಈ ಜಿಲ್ಲೆಗಳಲ್ಲಿಯೂ ಸಹಿತ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿಗಾಗಿ ತೊಂದರೆಯಾಗಿರುವ ಬಗ್ಗೆ ನಾನು ಗಮನಿಸಿದ್ದೇನೆ. ಈ ಬಗ್ಗೆ ನನಗೆ ಅರ್ಥವಾಗುತ್ತದೆ.

ಇದಕ್ಕೆಲ್ಲಾ ಪರಿಹಾರವೆಂದರೆ, ಡಾ॥ ಪರಮಶಿವಯ್ಯನವರು ಕೊಟ್ಟಿರುವಂತಹ ವರದಿ. ಪಶ್ಚಿಮಕ್ಕೆ ಹರಿಯುತ್ತಿರುವಂತಹ ಹೊಳೆಗಳ ನೀರನ್ನು ಪೂರ್ವಕ್ಕೆ ನಾವು ಎತ್ತಿಕೊಂಡು ಬರದೆ ಹೋದರೆ ಕೋಲಾರ, ತುಮಕೂರು, ಚಿತ್ರದುರ್ಗ, ಜಿಲ್ಲೆಗಳು ಹಾಗೂ ಹಾಸನಕ್ಕೂ ಸಹಿತ ತೊಂದರೆಯಾಗುವಂತಹ ಸಂಭವಗಳು ಇವೆ. ಆದ್ದರಿಂದ Up to Bidar ಇದೊಂದು ದೊಡ್ಡ ಸಮಸ್ಯೆ ಇದೆ, ಅವರು ಒಂದು ಒಳ್ಳೆಯ ವರದಿಯನ್ನು ಕೊಟ್ಟಿದ್ದಾರೆ. ಹಿಂದಿನ ಸರ್ಕಾರಗಳಲ್ಲಿ ಡಾ॥ ಪರಮಶಿವಯ್ಯನವರು ವರದಿಗೆ ಮನ್ನಣೆಯನ್ನು ಕೊಡಬೇಕು, ಅದಕ್ಕೋಸ್ಕರ ಖರ್ಚಾಗುಂತಹದ್ದು ಸುಮಾರು 6–7 ಸಾವಿರ ಕೋಟಿ ರೂಪಾಯಿಗಳಾಗುತ್ತದೆ. ಈಗ ಆಂಧ್ರಪ್ರದೇಶದಲ್ಲಿ ಸುಮಾರು 36 ಸಾವಿರ ಕೋಟಿ ರೂಪಾಯಿಗಳನ್ನು ನೀರಾವರಿ ಇಲಾಖೆಗೆ ಖರ್ಚು

ಮಾಡುತ್ತಿದ್ದಾರೆ. ಆದರೆ ನಾವು ಬರ ಪರಿಹಾರದ ಕೆಲಸವೆಂದರೆ ಏನು ಅಂದುಕೊಂಡಿದ್ದೇವೆಂದರೆ, ನೀರು ತೆಗೆದುಕೊಂಡು ಹೋಗಿ ಕೊಡುವುದು, ಕೂಲಿಗಾಗಿ ಕಾಳು ಎಂದು ಕೊಡುವುದು, ಇವಷ್ಟೇ ನಮ್ಮ ಕೆಲಸಗಳು Deputy Commissioner, Divisional Commissioner ಆದಾದ ನಂತರ ಇಲ್ಲಿ Revenue Secretary, review ಮಾಡಿದರೆ ಸಭೆ ಆಗಿಯೋಯಿತು ಎಂದು ಕೊಂಡಿದ್ದೇವೆ. ಇದು ಶಾಶ್ವತವಾದ ಪರಿಹಾರವಲ್ಲ. ಇದು ಆಗಬೇಕು.

ಇದು ತಾತ್ಕಾಲಿಕವಾದ ಪರಿಹಾರವಷ್ಟೆ. ಈ ಬಗ್ಗೆ ಶಾಶ್ವತವಾದ ಪರಿಹಾರವಾಗಬೇಕಾದರೆ ಕರ್ನಾಟಕದಲ್ಲಿ ಶಾಶ್ವತವಾಗಿ ಬರ ಪರಿಹಾರವನ್ನು ಬಗೆಹರಿಸುವ ಬಗ್ಗೆ ಏನು ಮಾಡಬೇಕೆಂಬುದರ ಬಗ್ಗೆ ಒಂದು ಸಮಿತಿಯನ್ನು ಸರ್ಕಾರದವರು ರಚನೆ ಮಾಡಬೇಕಾಗುತ್ತದೆ. ಅದರಲ್ಲಿ ತಜ್ಞರು ಇರಬೇಕಾಗುತ್ತದೆ. ಅವರು ಒಂದು ವರದಿಯನ್ನು ಒಂದು ಅಥವಾ ಎರಡು ವರ್ಷಗಳಲ್ಲಿ ತೆಗೆದುಕೊಂಡು 175 ತಾಲ್ಲೂಕುಗಳಲ್ಲಿಯೂ ಸಹಿತ ಈ ಕುಡಿಯುವ ನೀರಿನ ಸಮಸ್ಯೆಯನ್ನು ಮಣ್ಣಿನ ಸಂರಕ್ಷಣೆಯನ್ನು, ಮರಳಿನ ಸಂರಕ್ಷಣೆಯನ್ನು ಅಲ್ಲಿರುವಂತಹ water bodies ಟ್ಯಾಂಕ್‌ಗಳ ಸಂರಕ್ಷಣೆಯನ್ನು, ಹಳ್ಳಗಳ ಸಂರಕ್ಷಣೆಯನ್ನು ಹೇಗೆ ಮಾಡಬೇಕೆಂಬುದು ತಾವು ವಿಚಾರ ಮಾಡಬೇಕೆಂಬ ಬಗ್ಗೆ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ.

ಕೊನೆಯದಾಗಿ ಹೇಳುವುದಾದರೆ, ತಾವು ಅಧ್ಯಕ್ಷ ಪೀಠದಲ್ಲಿ ಕುಳಿತಿದ್ದೀರಿ, ಅಧ್ಯಕ್ಷರು ಬಂದಿಲ್ಲ, ನಾನು ಇದನ್ನು ತಮ್ಮ ಗಮನಕ್ಕೆ ಹಾಗೂ ಪೀಠದ ಗಮನಕ್ಕೆ ತರುತ್ತಿದ್ದೇನೆ. ಯಾವುದೇ ಒಂದು ಗಣಿ ವಿಚಾರ ಇರಬಹುದು, ಅದರ ಬಗ್ಗೆ ನಮ್ಮ ಸದಸ್ಯರುಗಳು ಏನು ಬೇಸರ ಮಾಡಿಕೊಂಡರೋ ಅದರ ಬಗ್ಗೆ ನನಗೆ ಅರ್ಥವಾಗುತ್ತಿಲ್ಲ. ಅದು ಯಾವುದೋ ಪೇಪರ್ ಆಗಿರಲಿ, lay down ಮಾಡಬೇಕಾದರೆ at least Speaker should say, ಅಧ್ಯಕ್ಷರಿಗೆ ಹೇಳಬೇಕಾಗುತ್ತದೆ. ಇದು ordinary ಅಲ್ಲ ಇದು status paper, ಈ ಕಡುಬಿನ ಒಳಗಡೆ ಏನೇನೂ ಹೂರಣವಿದೆ ಎಂಬುದು ಯಾರಿಗೂ ಸಹಿತ ಗೊತ್ತಿಲ್ಲ. ಆ ಹೂರಣವನ್ನಾದರೂ ಕೂಡ at least ಏನೆಂದು ತಿಳಿದುಕೊಳ್ಳಬೇಕಲ್ಲ? ಈಗ ಅದನ್ನು ನೀವು present ಮಾಡುತ್ತೀರಾ ಎಂದು ಹೇಳಿದರೆ at least ಚರ್ಚೆಗೊಂದು ಅವಕಾಶವನ್ನು ಕೊಟ್ಟಿದ್ದರೆ ಎಲ್ಲರೂ ಕೂಡ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಂತೆ ಆಗುತ್ತಿತ್ತು. ಸದನದ ಕೊನೆಯ ದಿನ ಕೊನೆಯ ಗಂಟೆಯಲ್ಲಿ ಇದನ್ನು ತಾವು ಪ್ರಕಟಣೆ ಮಾಡದೆ circulate ಮಾಡಿರುವುದು

ಇದು official, Non-official ಅಥವಾ in between ಎನ್ನುವುದನ್ನು ಮಾನ್ಯ ಛೇರ್ಮನ್‌ರವರು ಕ್ಲಾರಿಫೈ ಮಾಡಬೇಕೆಂದು ಹೇಳುತ್ತಾ ನಾನು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಂಡು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿರುವುದಕ್ಕಾಗಿ ತುಂಬಾ ಧನ್ಯವಾದಗಳು, ನಮಸ್ಕಾರ.

ಛೇರ್ಮನ್ : ಶಿವಾನಂದ ಪಾಟೀಲ್, ಏನು ವಿಷಯ ಹೇಳಿ.

ಶ್ರೀ ಶಿವಾನಂದ ಪಾಟೀಲ್ :– ಸಿಂಧ್ಯಾರವರು ಒಂದು ಮಾತು ಹೇಳಿದರು. ಅವರು ಆ ಪಕ್ಷದಿಂದ ಈ ಪಕ್ಷದಿಂದ ಹೇಗೆ ಬಂದಿದ್ದೀರಿ ಎಂದು, ಪಕ್ಷಾಂತರಿಗಳು, ಮಡಿವಂತಿಕೆ ಬಗ್ಗೆ ಮಾತನಾಡಿದರು, ತಾವು ಮಾತನಾಡಿದಿರಿ, records ತೆಗೆದು ನೋಡೋಣ. ನಾನು ಹೇಳುತ್ತೇನೆ. ಪಕ್ಷದ ಬಗ್ಗೆ ಯಾವ್ಯಾವ ಸನ್ನಿವೇಶದಲ್ಲಿ ಯಾರ್ಯಾರು ಯಾವ ಪಕ್ಷಕ್ಕೆ ಯಾವ ರೀತಿ ಹೋಗಿದ್ದಾರೆ ಎನ್ನತಕ್ಕಂಥದ್ದು ನನಗಿಂತ ಹೆಚ್ಚಿಗೆ ತಮಗೆ ಗೊತ್ತಿದೆ. ಈಗ ತಮಗೂ ಗೊತ್ತಿದೆ ಯಾವ ಪಕ್ಷದ ಮಡಿವಂತಿಕೆ ಬಗ್ಗೆ ಮಾತನಾಡುತ್ತೀರಿ, 1983ರಲ್ಲಿ ಏನಾಯಿತು, 1985ರಲ್ಲಿ ಏನಾಯಿತು, ಯಾವ ಪಕ್ಷಗಳ ಸಹಕಾರ ತೆಗೆದುಕೊಂಡು ತಾವು ಸರ್ಕಾರ ರಚಿಸಿದಿರಿ ಎಂದು. ನಾನೇಕೆ ಆ ಮಾತು ಹೇಳುತ್ತಿದ್ದೇನೆಂದರೆ ನೀವು ಒಂದು ಮಾತು ಎಂದಿರಿ, ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿಕೊಂಡು ನೋಡಿದ ಹಾಗೆ ಆಗುತ್ತದೆಂದು. ನಾನು ಈಗ ಮೂರು ಪಕ್ಷದಿಂದ ಬಂದಿದ್ದೇನೆ, ಅಂದರೆ ನನ್ನ ಮಡಿವಂತಿಕೆ ಹಾಳಾಯಿತೇ? ಕೇಳಬೇಕಾಗುತ್ತದೆ ನೀವು ಆವೇಶದಿಂದ ಮಾತನಾಡುವ ಸಂದರ್ಭದಲ್ಲಿ....ಹೌದು ಅಧ್ಯಕ್ಷರೇ, ನಮಗೆ ಬೇಕು, ಏಕೆಂದರೆ ಆ ಸನ್ನಿವೇಶದಲ್ಲಿ ಪಕ್ಷಾಂತರ ಮಾಡಿಕೊಂಡು ಮಡಿವಂತಿಕೆಯನ್ನು ಕಳೆದುಕೊಂಡವರು ಎಂದು ವೆಂಕಟೇಶ್‌ಗೆ ಸಂಭೋದಿಸಿ ಮಾತನಾಡುವುದು ಸರಿಯಲ್ಲ.

ಛೇರ್ಮನ್ :– ಶಿವಾನಂದ ಪಾಟೀಲ್, ಈ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ.

(ಗೊಂದಲ)

ಶ್ರೀ ಹೆಚ್.ಸಿ. ಮಹಾದೇವಪ್ಪ :– ಮಾನ್ಯ ಸದಸ್ಯರು ಶಿವಾನಂದರವರಿಗೋಸ್ಕರ ಆಡಿದಂಥ ಮಾತಲ್ಲ ಇದು. ಮಾನ್ಯ ಅಧ್ಯಕ್ಷರೇ, ಈಗ ಭಾರತ ದೇಶದಲ್ಲಿ ರಾಜಕಾರಣ, it is there in the management. ಅದರಿಂದ ಬರೇ ಆ ಕಡೆ ಈ ಕಡೆ, ಮ್ಯಾನೇಜ್‌ಮೆಂಟ್ ನೋಡಿ ಕಲಿತಿದ್ದೇವೆ ವಿನಃ...

(ಗೊಂದಲ)

ಛೇರ್ಮನ್:- ಕೃಷ್ಣ ಭೈರೇಗೌಡರೇ ಹೇಳಿ. 5 ನಿಮಿಷದಲ್ಲಿ ಮುಗಿಸಬೇಕು.

(ಗೊಂದಲ)

ಶ್ರೀ ಕೃಷ್ಣ ಭೈರೇಗೌಡ ಸಿ.ಬಿ. (ವೇಮಗಲ್) :- ಈಗಾಗಲೇ ಮಾತನಾಡಿದಂಥ ಹಿರಿಯ ಸದಸ್ಯರೆಲ್ಲರೂ ಸಹ ಬರಕ್ಕೆ ಸಂಬಂಧಪಟ್ಟಂತೆ ಮಾತನಾಡಿದ್ದಾರೆ. ರೈತರು ಅನುಭವಿಸುತ್ತಿರುವಂಥ ಕಷ್ಟ ಹಾಗೂ ಕೂಲಿ ಸಿಗದೆ ಕೃಷಿ ಕೂಲಿಗಾರರು ಅನುಭವಿಸುತ್ತಿರುವಂಥ ಕಷ್ಟ ಹಾಗೂ ಮೇವು ಸಿಗದೆ ಗೋವುಗಳು ಅನುಭವಿಸುತ್ತಿರುವಂಥ ಕಷ್ಟಗಳ ಬಗ್ಗೆಯೂ ಮಾತನಾಡಿದ್ದಾರೆ. ಎಲ್ಲದಕ್ಕಿಂತ ಮುಖ್ಯವಾಗಿ ನಾನು ಆ ವಿಷಯಗಳು ಅಷ್ಟೇ ಗಂಭೀರವಾಗಿದ್ದರೂ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಅದರಲ್ಲಿಯೂ ವಿಶೇಷವಾಗಿ ನಮ್ಮ ಜಿಲ್ಲೆಯ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ತಮ್ಮ ಮುಖಾಂತರ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ. ಇವತ್ತು ಹಂತಹಂತದಲ್ಲಿಯೂ ಸಹ ಸರ್ಕಾರದವರು ಹೇಳಿದ್ದಾರೆ. ಕುಡಿಯುವ ನೀರನ್ನು ಒದಗಿಸಲಿಕ್ಕೆ ಹಾಗು ಬರ ಪರಿಹಾರ ಕಾಮಗಾರಿಗಳಿಗಾಗಿ ಹಣದ ಕೊರತೆ ಯಾವುದೇ ರೀತಿಯಲ್ಲಿಯೂ ಇಲ್ಲವೆನ್ನುವುದನ್ನು ಪದೇ ಪದೇ ಹೇಳಿದ್ದಾರೆ, ತಮಗೂ ಸಹ ಗಮನಕ್ಕೆ ಬಂದಿರುತ್ತದೆ. ಆದರೆ ನಾನು ಕೆಲವು ಅಂಕಿ-ಸಂಖ್ಯೆಗಳನ್ನು ನಮ್ಮ ಜಿಲ್ಲಾ ಪಂಚಾಯತ್‌ನಿಂದ ತರಿಸಿಕೊಂಡಿದ್ದೇನೆ.

ನಾನು ವೈಯಕ್ತಿಕವಾಗಿ ಪ್ರತಿನಿತ್ಯ ಹಳ್ಳಿಗಳಲ್ಲಿ ಓಡಾಡುವುದರಿಂದ ಏನು ಸಮಸ್ಯೆಯಿದೆ ಎನ್ನುವುದು ಸಹ ನನಗೆ ಗೊತ್ತಿದೆ. ಅದರ ಬೇಸಿನ್ ಮೇಲೆ ಒಂದೆರಡು ಅಂಶಗಳನ್ನು ಅವರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಸತ್ಯ ಯಾವುದು, ಅಸತ್ಯ ಯಾವುದು ಎನ್ನುವುದನ್ನು ತಾವು ಹೇಳಿದರೂ ನಾನು ಒಪ್ಪಿಕೊಳ್ಳುತ್ತೇನೆ. ಅಧ್ಯಕ್ಷರೇ, ನಮ್ಮ ಜಿಲ್ಲೆಯಲ್ಲಿ ಎರಡು ಉಪವಿಭಾಗಗಳಿವೆ. ಒಂದು ಚಿಕ್ಕಬಳ್ಳಾಪುರ ಮತ್ತೊಂದು ಕೋಲಾರ, ಈಗಾಗಲೇ ಆಗಿರತಕ್ಕಂಥ ಕಾಮಗಾರಿಗಳಿಗೆ ಎರಡೂ ವಿಭಾಗದಿಂದ ಸೇರಿ ಪೂರ್ಣಗೊಂಡಿರತಕ್ಕಂಥ ಕಾಮಗಾರಿಗಳು, ಎರಡೂ ವಿಭಾಗದಿಂದ ಸೇರಿ ಸುಮಾರು 392.00 ಲಕ್ಷ ರೂ.ಗಳು ಬಾಕಿ ಇದೆ. ಅದರಲ್ಲಿ ಕೋಲಾರ ಉಪವಿಭಾಗದಲ್ಲಿ 175.00 ಲಕ್ಷ ರೂ. ಬಾಕಿ ಇದೆ. ಚಿಕ್ಕಬಳ್ಳಾಪುರ ಉಪ ವಿಭಾಗದಲ್ಲಿ 217.00 ಲಕ್ಷ ರೂ.ಗಳು ಬಾಕಿ ಇದೆ. ಹಾಲಿ ಚಾಲ್ತಿಯಲ್ಲಿರುವ ಕಾಮಗಾರಿಗಳಿಗೆ ಒಟ್ಟಾರೆ 7.00 ಕೋಟಿ ರೂ. ನಮ್ಮ ಜಿಲ್ಲೆಯಲ್ಲಿ ಬಾಕಿ ಇದೆ. ಇವೆಲ್ಲಾ ಕುಡಿಯುವ ನೀರಿಗೆ ಸಂಬಂಧಪಟ್ಟಂತವು.

ಇದು ನಮ್ಮ ಜಿಲ್ಲೆಯ ಒಂದು ಚಿತ್ರಣ. ನನ್ನ ಕ್ಷೇತ್ರಕ್ಕೆ ಸೀಮಿತವಾಗಿ ಮಾತನಾಡುವುದಾದರೆ ಎರಡು ತಾಲ್ಲೂಕುಗಳು ಬರುತ್ತವೆ, ಕೋಲಾರ ಮತ್ತು ಚಿಂತಾಮಣಿ. ಕೋಲಾರದಲ್ಲಿ ಸುಮಾರು 33.50 ಲಕ್ಷ ಕೊರೆದಿರತಕ್ಕಂಥ ಕೊಳವೆ ಬಾವಿಗಳಿಗೆ ಹಣ ಬಾಕಿ ಇದೆ. ಬಾಕಿ ಇಲ್ಲವೆಂದರೆ ಬಾಕಿ ಇಲ್ಲವೆನ್ನುವ ಮಾತನ್ನು ಅವರು ಹೇಳಲಿ. ನಾನು ಜಿಲ್ಲಾ ಪಂಚಾಯತ್‌ನಿಂದ ಅಂಕಿ-ಸಂಖ್ಯೆಯನ್ನು ತೆಗೆದುಕೊಂಡಿದ್ದೇನೆ. ಕೋಲಾರ ತಾಲ್ಲೂಕಿನಲ್ಲಿ 33.50 ಲಕ್ಷ ರೂ.ಗಳು ಬಾಕಿ ಇದೆ. ನಿನ್ನೆ ಬಾಕಿಯಲ್ಲ ಇದು, ತಿಂಗಳಾನುಗಟ್ಟಲೆಯಿಂದ ಬಂದಿರತಕ್ಕಂಥ ಬಾಕಿ. ಚಿಂತಾಮಣಿ ತಾಲ್ಲೂಕಿನಲ್ಲಿ 30.00 ಲಕ್ಷ ರೂ.ಗಳು ಬಾಕಿ ಇವೆ. ಎರಡೂ ತಾಲ್ಲೂಕುಗಳು ನನಗೆ ಬರುತ್ತವೆ. ಎರಡೂ ತಾಲ್ಲೂಕುಗಳು ಸೇರಿದರೆ ಸುಮಾರು 60.00 ಲಕ್ಷ ರೂ.ಗಳು ಬಾಕಿ ಇದೆ. ಇದು ಅನುಮೋದನೆಗೊಂಡಿರತಕ್ಕಂಥ ಕಾಮಗಾರಿಗಳು. ಅನುಮೋದನೆಯಾಗದೇ ಸಂಕಷ್ಟದಲ್ಲಿ ನಮ್ಮ ಜಿಲ್ಲಾ ಪಂಚಾಯತ್ ಸದಸ್ಯರ ಒತ್ತಾಯಕ್ಕೆ ಮಣಿದು ಅನುಮೋದನೆ ಆಗದೇ ಕೊರೆದಿರುವಂಥದ್ದೂ ಸಹ ಇದೆ. ಅದು ಕಾನೂನಿನಲ್ಲಿ ಇವತ್ತು ಉಲ್ಲಂಘನೆಯಾದರೂ ಸಹ ನಾನು ಆ ಸಮಸ್ಯೆ ಬಗ್ಗೆ ಹೇಳಬೇಕಾಗುತ್ತದೆ. ಅದೆಲ್ಲವನ್ನೂ ಸೇರಿಸಿಕೊಂಡರೆ ನನ್ನ ಕ್ಷೇತ್ರ ಒಂದರಲ್ಲೇ ಕೊರೆದಿರುವ ಕೊಳವೆ ಬಾವಿಗಳಿಗೆ ಸುಮಾರು 50.00 ಲಕ್ಷ ರೂ.ಗಳು ಬಾಕಿ ಇದೆ.

ಇವರು ಮಾತೆತ್ತಿದರೆ ಅಷ್ಟು ಕೋಟಿ ರೂ. ಬಿಡುಗಡೆ ಮಾಡಿದ್ದೇವೆ, ಇಷ್ಟು ಕೋಟಿ ರೂ. ಬಿಡುಗಡೆ ಮಾಡಿದ್ದೇವೆಂದು ಹೇಳುತ್ತಾರೆ. ಬಾಕಿ ಏತಕ್ಕಿದೆ ಅಧ್ಯಕ್ಷರೇ? ಅಷ್ಟಕ್ಕೆ ಅವರು ಏನಾದರೂ ಇವರಿಗೆ ಮಧ್ಯದಲ್ಲಿ ಏನೊಂದು ಕತ್ತಲೆಯ ಏರಿಯಾ, ಕಪ್ಪು ಏರಿಯಾ ಇದೆಯೇ ಎನ್ನುವುದೊಂದು ಪ್ರಶ್ನೆ. ಇವರು ಹೇಳತಕ್ಕಂಥ ಅಂಕಿ-ಸಂಖ್ಯೆ, ಹೇಳಿಕೆಗಳಿಗೆ ಮತ್ತೆ ಇಲ್ಲಿ ವಾಸ್ತವಿಕವಾಗಿ ದಿನವೂ ಏನು ಅನುಭವಿಸುತ್ತಿದ್ದೇವೆ ಇದಕ್ಕೆ ಯಾತಕ್ಕೆ ತಾಳೆ ಸಿಗುತ್ತಿಲ್ಲ? ಇದು ಭಾರೀ ಗಂಭೀರವಾದಂಥ ಸಮಸ್ಯೆ. ಇವರು ಕೊಡತಕ್ಕಂಥದ್ದು ಜಿಲ್ಲಾಧಿಕಾರಿಗಳಿಗೆ ಕೊಡುತ್ತಾರೆ. ಜಿಲ್ಲಾಧಿಕಾರಿಗಳು ಕೊಳವೆಬಾವಿಯನ್ನು ಕೊರೆಯಲಿಕ್ಕೆ ಹಣ ಕೊಡಲಿಕ್ಕೆ ಅವರಿಗೆ ಅಧಿಕಾರವಿಲ್ಲ. ಮಾನ್ಯ ಸಚಿವರಿಗೆ ಬಹುಶಃ ಇದು ತಿಳಿದಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಇವತ್ತು ನಮ್ಮ ಗ್ರಾಮಾಂತರದ ಕುಡಿಯುವ ನೀರಿನ ಸಚಿವರು ಸಹ ಇಲ್ಲಿದ್ದಾರೆ, ಅವರ ಜವಾಬ್ದಾರಿ ಇದರಲ್ಲಿ ಹೆಚ್ಚಾಗಿದೆ. ಕೊಳವೆ ಬಾವಿಯನ್ನು ಕೊರೆಯಲಿಕ್ಕೆ ಜಿಲ್ಲಾ ಪಂಚಾಯತಿಯಿಂದ ಕೊಡಬೇಕಾಗುತ್ತದೆ ಅಥವಾ ಎಂ.ಎನ್.ಪಿ.ಹೆಡ್ ಎಂದು ಏನಿದೆ ಅದನ್ನು ಕೊಡಬೇಕಾಗುತ್ತದೆ ಅಥವಾ ರಾಜ್ಯಸರ್ಕಾರ ಕೊಳವೆ ಬಾವಿಗಳನ್ನು ಕೊರೆಯಲಿಕ್ಕೆ

ನೇರವಾಗಿ ಹಣವನ್ನು ಬಿಡುಗಡೆ ಮಾಡಬೇಕಾಗುತ್ತದೆ. ಆ ಕೆಲಸವನ್ನು ಇವತ್ತು ಮಾಡುತ್ತಿಲ್ಲ. ಸುಮಾರು 50.00 ಲಕ್ಷ ನನ್ನ ಕ್ಷೇತ್ರದಲ್ಲಿ ಒಂದನ್ನೇ ಉದಾಹರಣೆಯಾಗಿ ಕೊಡುತ್ತಿದ್ದೇನೆ. ನನ್ನ ಕ್ಷೇತ್ರದ ಬಗ್ಗೆ ಮಾತ್ರವಲ್ಲ, ಕೋಲಾರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ತುಮಕೂರು, ಚಿತ್ರದುರ್ಗ ಎಲ್ಲಾ ಭಾಗಗಳಲ್ಲಿ ಇದೇ ಸಮಸ್ಯೆ ಇದೆ, ಇವರು ಹೇಳುತ್ತಿರುವುದು ಸುಳ್ಳು ಎಂದು ಹೇಳಲಿಕ್ಕೆ ನಾನು ಈ ಅಂಕಿ-ಸಂಖ್ಯೆಗಳನ್ನು ಹೇಳುತ್ತಿದ್ದೇನೆ, ಇಷ್ಟು ಬಾಕಿಯಿರುವಾಗ ಇಷ್ಟು ಹೇಳುತ್ತಾರಲ್ಲ. ಹಾಗಾಗಿ ಕೊಳವೆಬಾವಿ ಕೊರೆಯಲಿಕ್ಕೆ ಇವತ್ತು ಹಣ ಕೊಡದೇ ಇರುವುದರಿಂದ ಕೊಳವೆಬಾವಿಗಳನ್ನು ಕೊರೆಯುತ್ತಿಲ್ಲ. ನಾವು ಆ ಊರುಗಳಲ್ಲಿ ನಮ್ಮ ಕ್ಷೇತ್ರಗಳಲ್ಲಿ ಇವತ್ತು ಓಡಾಡಲಿಕ್ಕೂ ಸಹ ಆಗುತ್ತಿಲ್ಲ. ಅಂಥ ಪರಿಸ್ಥಿತಿ ನಮ್ಮ ಕ್ಷೇತ್ರದಲ್ಲಿ ಇವತ್ತು ನಿರ್ಮಾಣವಾಗಿದೆ. ಪದೇ ಪದೇ ಕೇಂದ್ರಸರ್ಕಾರದಿಂದ ಹಣ ಬರಲಿಲ್ಲವೆಂದು ಹೇಳುತ್ತಾರೆ. ನಾವು ಯಾವುದೇ ಒಂದು ವಿಷಯವನ್ನು ಎತ್ತಿದರೆ ಯಾವುದೋ ಒಂದು ಪಕ್ಷದ ಪರವಾಗಿ ನಿಂತು ಮಾತನಾಡತಕ್ಕಂಥವರಲ್ಲ. ನಮಗೆ ಸಮಸ್ಯೆ ಬಗೆಹರಿಯಬೇಕು. ಇವರಿಗೆ ನಿಜವಾದ ಸಮಸ್ಯೆಯನ್ನು ಬಗೆಹರಿಸಬೇಕೆಂಬ ಉದ್ದೇಶವಿದ್ದರೆ ಕೇಂದ್ರಸರ್ಕಾರ ಮಾಡುತ್ತಾರೋ, ರಾಜ್ಯಸರ್ಕಾರ ಮಾಡುತ್ತಾರೋ, ಯಾರು ಮಾಡುತ್ತಾರೋ ನಮಗೇನು ಬೇಕಾಗಿದೆ? ನಮಗೆ ಸಮಸ್ಯೆ ಬಗೆಹರಿಯಬೇಕು. ಇಲ್ಲಿ ಈ ಸರ್ಕಾರ ಇವತ್ತು ಮುಂದೆ ಇದೆ. ಆ ಸರ್ಕಾರವನ್ನು ನಾವು ಕೇಳಬೇಕೇ ಹೊರತು ಅವರು ಕೊಡಲಿಲ್ಲ, ಇವರು ಕೊಡಲಿಲ್ಲ ಎನ್ನುವುದಲ್ಲ. ಅವರು ಕೊಟ್ಟಿರುವುದನ್ನು ನೀವು ಎಷ್ಟು ಉಪಯೋಗಿಸಿದ್ದೀರಿ ಅದನ್ನೂ ಹೇಳುತ್ತೇನೆ. ಆದರೆ ನಾವೇನಾದರೂ ಈ ಸಮಸ್ಯೆಯನ್ನು ಎತ್ತಿಕೊಂಡು ಬಂದ ತಕ್ಷಣ ನಿಮ್ಮ ಪಕ್ಷದವರು ಏನು ಮಾಡಿದರು ಎಂದು ಕೇಳುವುದಕ್ಕೆ. ಆ ರೀತಿ ಉತ್ತರ ಕೊಡಲಿಕ್ಕೇ ಈ ಸರ್ಕಾರ ಇರುವುದು. ಇರುವ ಸಮಸ್ಯೆಯನ್ನು ಬಗೆಹರಿಸತಕ್ಕಂಥಾದ್ದು ಇವರ ಜವಾಬ್ದಾರಿಯಲ್ಲವೇ? ಸಮಸ್ಯೆಯಿಲ್ಲ, ನಮ್ಮ ಜವಾಬ್ದಾರಿ ಅಲ್ಲ ಎಂದು ಹೇಳಿಬಿಡಲಿ, ನಾವು ನಮ್ಮ ಜನಕ್ಕೆ ಏನು ಹೇಳಬೇಕೋ ಹೇಳಿಕೊಳ್ಳುತ್ತೇವೆ. ಇದು ಕೇಂದ್ರಸರ್ಕಾರದವರು ಮಾತ್ರ ಬಗೆಹರಿಸಲಿ ಎಂದು ಹೇಳಲಿ. ಆ ತರಹ ಒಂದೆರಡು ನಿಮಿಷ, ಕಾಲಾವಕಾಶ ಕೊಡಬೇಕು. ಏಕೆಂದರೆ ನಿಜವಾಗಿಯೂ ಸಹ ಉಸಿರು ಕಟ್ಟುವಂಥ ವಾತಾವರಣದಲ್ಲಿ ನಮ್ಮ ಜಿಲ್ಲೆಯಲ್ಲಿದ್ದೇವೆ. ನನ್ನ ಕ್ಷೇತ್ರದಲ್ಲಿ ಇಡೀ ಜಿಲ್ಲೆ ತುಂಬಾ critical ಸಮಸ್ಯೆ ಇದೆ. ತುಂಬಾ ಎಂದರೆ ತುಂಬಾ, ಹೇಳಲಿಕ್ಕಾಗುವುದಿಲ್ಲ. ಇವತ್ತು ಸದನ ಮುಗಿಸಿಕೊಂಡು ನಾಳೆ ಊರಿಗೆ ಹೋಗುವುದೇ ಕಷ್ಟವಾಗಿದೆ. ನಿಜವಾಗಿಯೂ

ತಾವು ಒಂದು ವಿಶೇಷವಾದ ಪೀಠದಲ್ಲಿ ಕುಳಿತಿದ್ದೀರಿ. ಅವರಿಗೆ ಒಂದು ನಿರ್ದೇಶನವನ್ನು ಕೊಡತಕ್ಕಂಥ ಪರಿಸ್ಥಿತಿ ಇವತ್ತಿದೆ. ನಾವು ಹೇಳಿಕೊಳ್ಳುವುದಕ್ಕಾಗುವುದಿಲ್ಲ. ಅಂತಹ ಪರಿಸ್ಥಿತಿಗೆ ನಿಜವಾಗಿಯೂ ನಾವು ಸಿಲುಕಿದ್ದೇವೆ. ಇವರು ಮಾತೆತ್ತಿದರೆ ಸಮಸ್ಯೆಯನ್ನು ಬಗೆಹರಿಸುವುದನ್ನು ಬಿಟ್ಟು ಬರೇ ರಾಜಕೀಯ ದೃಷ್ಟಿಯಿಂದ ಆ ಸಮಸ್ಯೆಯನ್ನು ನೋಡುತ್ತಾರೆಯೇ ಹೊರತು ನೀವೇನು ಮಾಡಿದಿರಿ ಎಂದು ಕೇಳುವುದು. ಒಬ್ಬ ಜವಾಬ್ದಾರಿಯುತ ಸರ್ಕಾರವಾಗಿ, ಸಚಿವರಾಗಿ ಕೇಳತಕ್ಕಂಥ ಪ್ರಶ್ನೆಗಳೇ ಇವು? ಯಾವ ಪಕ್ಷ ಮಾಡಿತೋ, ಮಾಡಲಿಲ್ಲವೋ, ಇವರು ವಿರೋಧಪಕ್ಷದಲ್ಲಿ ಕುಳಿತಿದ್ದೇವೆ. ನೀವು ಮಾಡುತ್ತೀರೋ ಇಲ್ಲವೋ, ಅಷ್ಟನ್ನು ಹೇಳಿ. ಅದನ್ನು ಬಿಟ್ಟು ನೀವು ಏನು ಮಾಡಿದ್ದು ಎಂದು ಹೇಳಿ, ಯಾವುದೇ ಪ್ರಶ್ನೆಯನ್ನು ಎತ್ತಿದರೂ ನೀವೇನು ಮಾಡಿದ್ದು ಎಂದು ಕೇಳುವುದು ಇದು ಯಾವ ಪ್ರವೃತ್ತಿ? ಇದು ಯುವಕರಿಗೆ ಇವರು ತೋರಿಸುವಂಥ ಮಾರ್ಗದರ್ಶನವೇ? ನಾಳೆ ನಮ್ಮನ್ನು ಯಾರಾದರೂ ಕೇಳಿದರೆ ನಾವೂ ಅದೇ ಉತ್ತರವನ್ನು ಕೊಡಬೇಕೆಂದು ಹೇಳುತ್ತಿದ್ದಾರೆಯೇ ಇವತ್ತು? ಈ ರೀತಿ ಆಗುವುದು ಒಳ್ಳೆಯದಲ್ಲ. ಆದರೂ ಸಹ ಕೇಂದ್ರಸರ್ಕಾರದಿಂದ ಏನು ಬಿಡುಗಡೆಯಾಗಿದೆ ಅದರ ಬಗ್ಗೆ ಹೇಳಬೇಕಾಗುತ್ತದೆ. 494.00 ಕೋಟಿ ರೂ.ಗಳನ್ನು ಇವರು ಬಿಡುಗಡೆ ಮಾಡಿದ್ದಾರೆ. ಇವರು ಖರ್ಚು ಮಾಡಿರುವುದು 276.00 ಕೋಟಿ ರೂ.ಗಳು. ಬಂದಿದ್ದ ಹಣವನ್ನು ಖರ್ಚು ಮಾಡಿಲ್ಲ, ಕೇಂದ್ರಸರ್ಕಾರ ಕೊಡಲಿಲ್ಲ, ಕೊಡಲಿಲ್ಲವೆಂದು ಹೇಳುವುದು.

ಛೇರ್ಮನ್ :- ಕೃಷ್ಣೇಗೌಡರೇ, ತಮಗೆ ಅವಕಾಶ ಕೊಟ್ಟಿದ್ದೇವೆ.

ಶ್ರೀ ಕೃಷ್ಣ ಭೈರೇಗೌಡ :- ಅವಕಾಶವನ್ನು ಕೊಟ್ಟಿದ್ದೀರಿ, ಅಧ್ಯಕ್ಷರೇ, ನಿಜವಾಗಿಯೂ ತಮಗೆ ಧನ್ಯವಾದಗಳು. ಇರತಕ್ಕಂಥ ಸಮಸ್ಯೆಗಳನ್ನು ನಾನು ಹೇಳಬೇಕಾಗುತ್ತದೆ, ಇನ್ನೊಂದೆರಡು ನಿಮಿಷದಲ್ಲಿ ಮುಗಿಸುತ್ತೇನೆ. ಹಾಗಾಗಿ ನಮ್ಮಲ್ಲಿ ಸಮಸ್ಯೆ ತುಂಬಾ ಗಂಭೀರವಾಗಿದೆ. ಕೊಳವೆಬಾವಿಗಳನ್ನು ಕೊರೆಯುವುದಕ್ಕೆ ಹಣ ಕೊರತೆ ಇದೆ. ಕೊರೆದಿರುವುದಕ್ಕೆ ಬಹುಶಃ ಜಿಲ್ಲಾಧಿಕಾರಿಗಳ ಹತ್ತಿರ ಹಣವಿರಬಹುದು, ಆದರೆ ಕೊರೆಯುವುದಕ್ಕೆ ಇವತ್ತು ಹಣದ ಕೊರತೆ ಇದೆ. ಮತ್ತೆ, National Rural Employment Guarantee Scheme ನಲ್ಲಿ ನಮ್ಮ ಜಿಲ್ಲೆ ಬಿಟ್ಟುಹೋಗಿದೆ. ಆಮೇಲೆ ಏನು ರೈತರು ಆತ್ಮಹತ್ಯೆ ಮಾಡಿಕೊಂಡರು, ಆ ಪ್ರಕರಣದಲ್ಲಿ ಸುಮಾರು 1500 ಕೋಟಿ ರೂ.ಗಳು ಬಿಡುಗಡೆಯಾಗಿದೆ, ಅದರಲ್ಲಿಯೂ ನಮ್ಮ ಜಿಲ್ಲೆ ಬಿಟ್ಟುಹೋಗಿದೆ, ಯಾವುದರಲ್ಲಿಯೂ ಸಹ ನಮ್ಮ ಜಿಲ್ಲೆಗೆ ಹಣ ಬರದೇ ಇರುವುದರಿಂದ ಏನು ಕೇಂದ್ರದ ಸಿ.ಆರ್.ಎಫ್. ನಿಧಿಯಿದೆ, ಆ ನಿಧಿಯಲ್ಲಿಯೂ ನಮ್ಮ ಜಿಲ್ಲೆಗೆ ಹೆಚ್ಚಿನ

ಹಣವನ್ನು ಕೊಡಬೇಕಾಗುತ್ತದೆ. ಕೂಲಿಕಾರ್ಮಿಕರಿಗೆ ಬೇರೆ ಯಾವುದೇ ಸಹ ಮಾರ್ಗವಿಲ್ಲ, ಬೇರೆ ಜಿಲ್ಲೆಗಳಲ್ಲಾದರೂ ಎಲ್ಲಾ ಅವಕಾಶಗಳು ಇವೆ. ಆದರೆ ನಮ್ಮ ಜಿಲ್ಲೆಯಲ್ಲಿ ಆ ರೀತಿ ಯಾವುದೂ ಅವಕಾಶವಿಲ್ಲದೇ ಇರುವುದರಿಂದ ಆ ಹೆಚ್ಚಿನ ಸಿ.ಆರ್.ಎಫ್.ನಲ್ಲಿ ಬರಪರಿಹಾರ ಕಾಮಗಾರಿಗಳಿಗೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಮತ್ತೆ ಕೆಲವು ಹಳ್ಳಿಗಳಲ್ಲಿ ಎಷ್ಟೇ ಕೊಳವೆಬಾವಿಗಳನ್ನು ಕೊರೆದರೂ ಸಹ ಇವತ್ತು ನೀರು ಸಿಗುತ್ತಿಲ್ಲ. 8–10 ಕೊಳವೆಬಾವಿಗಳನ್ನು ಕೆಲವು ಹಳ್ಳಿಗಳಿಗೆ ಕೊರೆದಿದ್ದೇವೆ. ಆ ಊರುಗಳಲ್ಲಿ ನೀರು ಸಿಗುತ್ತಿಲ್ಲ. ಹಾಗಾಗಿ ಅಂಥ ಗ್ರಾಮಗಳಿಗೆ ಏನು ಮಾಡುತ್ತಾರೆನ್ನುವುದನ್ನು ಸರ್ಕಾರವೇ ಹೇಳಲಿ. ನಮಗೆ ಏನಾದರೂ ಮಾಡಿ ನೀವು ನೀರು ಕೊಡಬೇಕು, ಅಷ್ಟೆ. ಅಂಥ ಸಮಸ್ಯಾತ್ಮಕ ಯಾವ ಗ್ರಾಮಗಳಿವೆ, ಎಷ್ಟೇ ಪ್ರಯತ್ನ ಮಾಡಿದರೂ ನೀರು ಸಿಗುತ್ತಿಲ್ಲ. ಆ ಗ್ರಾಮಗಳಿಗೆ ತಾವು ಏನು ವಿಶೇಷ ಆದ್ಯತೆಯನ್ನು ಕೊಡುತ್ತೀರಿ ಎನ್ನತಕ್ಕಂಥ ಮಾತನ್ನು ಹೇಳುತ್ತಾ, ಅಧ್ಯಕ್ಷರೇ, ಇನ್ನೂ ಮಾತನಾಡತಕ್ಕಂಥಾದ್ದು ಸಾಕಷ್ಟಿದೆ. ಆದರೆ, ಇವತ್ತು ಹಣದ ಕೊರತೆಯಂತೂ ನಮಗೆ ಕಾಣುತ್ತಿಲ್ಲ.. ಹಣದ ಕೊರತೆಯಿಲ್ಲ, ಏಕೆಂದರೆ ಕೇಂದ್ರದಿಂದ ಬಂದ 494ರಲ್ಲಿ ಇನ್ನೂ ಹಣವನ್ನು ಉಪಯೋಗಿಸಿಯೇ ಇಲ್ಲ. ಹಾಗಾಗಿ ಹಣದ ಕೊರತೆ ನನಗೆ ಕಾಣುತ್ತಿಲ್ಲ, ಕೊರತೆ ಕಾಣುತ್ತಿರುವುದು ದೃಢಸಂಕಲ್ಪದ ಕೊರತೆ ಕಾಣುತ್ತಿದೆ, ನಾವೇನೂ ಇಲ್ಲಿ ಸುಮ್ಮನೆ ಹೇಳಲಿಕ್ಕೆ ನಿಂತಿಲ್ಲ. ತಮ್ಮ ಮುಖಾಂತರ ನಾನು ಸಚಿವರನ್ನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಿಜವಾಗಲೂ ನಾವು ಸುಮ್ಮನೆ ನಮ್ಮ ತೀಟೆ ತೀರಿಸಿಕೊಳ್ಳಲಿಕ್ಕೆ ಇಲ್ಲಿ ನಿಂತಿಲ್ಲ. ನೀವು ಸಂಕಲ್ಪ ಮಾಡಿದರೆ ಸಮಸ್ಯೆಯನ್ನು ಬಗೆಹರಿಸಬಹುದು. ಆ ಸಂಕಲ್ಪದ ಕೊರತೆ ಕಾಡುತ್ತಿದೆಯೇ ಹೊರತು ಹಣದ ಕೊರತೆ ನನಗೆ ಕಾಣುತ್ತಿಲ್ಲ. ಸಮರೋಪಾದಿಯಲ್ಲಿ ಈಗ ಎಲ್ಲಾ ಏನು ಒತ್ತಾಯ ಮಾಡಿದ್ದರೆ ಆ ಸಮರೋಪಾದಿಯಲ್ಲಿ ಈ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಹೇಳಿ ತುದಿಗಾಲಲ್ಲಿ ನಿಂತು ಬಗೆಹರಿಸಲಿಲ್ಲವೆಂದು ಹೇಳಿದರೆ ಕಷ್ಟವಾಗುತ್ತದೆಂದು ಹೇಳಿ ಕೊನೆಗೆ ಅರ್ಧ ನಿಮಿಷದಲ್ಲಿ ಮುಗಿಸುತ್ತೇನೆ, ಏಕೆಂದರೆ ಮಾನ್ಯ ಸಚಿವರು ಏನೋ ಹೇಳಿದರು, ನಮ್ಮ ಜಿಲ್ಲಾ ಸಚಿವರು ಹೇಳಿದರು ಇವರು ಎಲ್ಲೋ ವಾಸವಿರುತ್ತಾರೆಂದು ಹೇಳಿ, ಅವರ ತರಹ ನಾವೇನು ಜೋಡಿದಾರರಲ್ಲ, ನಾವು ಊರುಗಳಲ್ಲಿ ವಾಸ ಮಾಡಿಕೊಂಡಿರುವವರು, ವಾರಕ್ಕೆ ಕನಿಷ್ಠ ಆರು ದಿನ ನನ್ನ ಕ್ಷೇತ್ರದಲ್ಲಿರುತ್ತೇನೆ. ರಾತ್ರಿ 1.00 ಗಂಟೆಯವರೆಗೆ ಹಳ್ಳಿಗಳಲ್ಲಿ ಓಡಾಡುತ್ತೇನೆ. ಇವರ ತರಹ ಜೋಡಿದಾರರ ದರ್ಬಾರು ನಾನು ಮಾಡುತ್ತಿಲ್ಲ. ಜನರ ಸಮಸ್ಯೆಯನ್ನು

ಇಲ್ಲಿ ಬಂದು ಹೇಳಲಿಕ್ಕೆ ಹೊರಟರೆ ಇವರು ಬರದ ಸಮಸ್ಯೆ ಇಲ್ಲವೆಂದು ಹೇಳುತ್ತಾರೆ. ನಮ್ಮ ತಾಲ್ಲೂಕಿನಲ್ಲಿ ಬಂದು ಜನಗಳಿಗೆ ವಿವರಣೆ ಕೊಟ್ಟರೆ ನಾನು ಒಪ್ಪಿ ಕೊಳ್ಳುತ್ತೇನೆ. ಹಾಗಾಗಿ ಅವರು ಆ ರೀತಿಯ ಬೇಜವಾಬ್ದಾರಿತನದ ಮಾತುಗಳನ್ನು ಆಡಬಾರದು. ತಮ್ಮಲ್ಲಿ ವಿನಂತಿಸುತ್ತೇನೆ.

ಛೇರ್ಮನ್ :- ಇಲ್ಲಿ ಒಂದು ಪ್ರಕಟಣೆ ಇದೆ, ನಂತರ ನಿಮಗೆ ಅವಕಾಶ ಕೊಡುತ್ತೇನೆ.

7. ಪ್ರಕಟಣೆ

ವಿಷಯ: ವಿಧಾನಪರಿಷತ್ತಿನಿಂದ ಕೆಲವೊಂದು ವಿಧೇಯಕಗಳು ಅಂಗೀಕಾರವಾಗಿ ಬಂದಿರುವ ಬಗ್ಗೆ

ವಿಧಾನಪರಿಷತ್ತಿನ ಮಾನ್ಯ ಸಭಾಪತಿಗಳಿಂದ ಇದೀಗ ಬಂದಿರುವ ಸಂದೇಶದಲ್ಲಿ ನಿಯಮ 118ರ ಮೇರೆಗೆ ವಿಧಾನಪರಿಷತ್ತು ಕೆಳಕಂಡ ವಿಧೇಯಕಗಳಿಗೆ ಯಾವುದೇ ತಿದ್ದುಪಡಿ ಇಲ್ಲದೆ ಅನುಮೋದನೆಯನ್ನು ನೀಡಿದೆಯೆಂದು ತಿಳಿಸಿರುತ್ತಾರೆ.

1. ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ, 2007.
2. ಕರ್ನಾಟಕ ಪೌರನಿಗಮಗಳ ತಿದ್ದುಪಡಿ ವಿಧೇಯಕ, 2006
3. ಕರ್ನಾಟಕ ಭೂ ಕಬಳಿಕೆ (ನಿಷೇಧ) ವಿಧೇಯಕ, 2007
4. ಕರ್ನಾಟಕ ಬಂದರುಗಳ ನಿಲ್ದಾಣ ಮತ್ತು ಸಾಗಣೆ ತಿದ್ದುಪಡಿ ವಿಧೇಯಕ, 2007
5. ಕರ್ನಾಟಕ ಭೂ ಕಂದಾಯ ತಿದ್ದುಪಡಿ ವಿಧೇಯಕ, 2007